ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 4 ಸೋಮವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 18 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ

■ ಪ.ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ, ಪುದುಚೇರಿ ಅಧಿಕಾರ ನಿರ್ಧಾರ

■ ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿ; ದೇಶದ ಚಿತ್ತ ಮತ ಎಣಿಕೆಯತ್ತ

ನವದೆಹಲಿ: ಭಾರತವೇ ಎದುರು ನೋಡುತ್ತಿರುವ ಪಂಚ ರಾಜ್ಯಗಳ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಫಲಿತಾಂಶ ಸೋಮವಾರ (ಮೇ 4) ಪ್ರಕಟವಾಗಲಿದೆ.

ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ಚುನಾವಣೆ ಫಲಿತಾಂಶ, ಮುಂಬರುವ ಲೋಕಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎನ್ನಲಾಗಿದೆ. ಸರ್ವ ಪಕ್ಷಗಳಿಗೂ ಈ ಚುನಾವಣೆ ಪ್ರತಿಷ್ಠೆ ಕದನವಾಗಿರುವುದರಿಂದ ಫಲಿತಾಂಶಕ್ಕಾಗಿ ಕಾತುರದಿಂದ ಕಾದಿವೆ. ವಿವಿಧ ಸಂಸ್ಥೆಗಳ ಚುನಾವಣೋತ್ತರ ಸಮೀಕ್ಷೆಗಳು ಹಾಗೂ ಆಂತರಿಕ ಸಮೀಕ್ಷೆ ಆಧಾರದಲ್ಲಿ ಸೋಲು–ಗೆಲುವಿನ ಲೆಕ್ಕಾಚಾರ ಹಾಕಿಕೊಂಡಿರುವ ಅಭ್ಯರ್ಥಿಗಳ ಎದೆ ಬಡಿತ ಜೋರಾಗಿದೆ. ಯಾವ ಪಕ್ಷ ಬಹುಮತ ಪಡೆದು ಅಧಿಕಾರದ ಗದ್ದುಗೆ ಏರಲಿದೆ ಎಂದು ದೇಶದ ಜನ ಕುತೂಹಲದಿಂದ ಫಲಿತಾಂಶದತ್ತ ಚಿತ್ತ ನೆಟ್ಟಿದ್ದಾರೆ.

ಮತ ಎಣಿಕೆಗೆ ಚುನಾವಣಾ ಆಯೋಗವು ಸಕಲ ಸಿದ್ಧತೆ ಮಾಡಿಕೊಂಡಿದೆ. ಮೊದಲು ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿದ ನಂತರ ಇವಿಎಂ ಯಂತ್ರಗಳಲ್ಲಿನ ಮತ ಎಣಿಕೆ ನಡೆಸಲಾಗುವುದು. ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾಗಲಿದ್ದು, ಮಧ್ಯಾಹ್ನದ ವೇಳೆಗೆ ಫಲಿತಾಂಶ ಹೊರಬೀಳುವ ಸಾಧ್ಯತೆ ಇದೆ. ಎಲ್ಲಾ ಎಣಿಕೆ ಕೇಂದ್ರಗಳಲ್ಲಿ ಬಹುಹಂತದ ಭದ್ರತಾ ವ್ಯವಸ್ಥೆ ಮಾಡಲಾಗಿದೆ.



ಪಶ್ಚಿಮ ಬಂಗಾಳ: ಚುನಾವಣೆ ನಡೆದ ಪಂಚರಾಜ್ಯಗಳಲ್ಲಿ ಅತೀ ಹೆಚ್ಚು ಕ್ಷೇತ್ರಗಳನ್ನು ಹೊಂದಿರುವ ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಏನಾಗಲಿದೆ ಎಂಬ ಕುತೂಹಲ ಹೆಚ್ಚಿದೆ. ಒಟ್ಟು 294 ಕ್ಷೇತ್ರಗಳಲ್ಲಿ 148 ಸರಳ ಬಹುಮತ ಪಡೆಯುವ ಪಕ್ಷ ಅಧಿಕಾರದ ಗದ್ದುಗೆ ಏರಲಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ನಡುವೆ ನೇರ ಹಣಾಹಣಿ ಸೃಷ್ಟಿಯಾಗಿದ್ದ ಹಿನ್ನೆಲೆಯಲ್ಲಿ ಫಲಿತಾಂಶ ತೀವ್ರ ಕುತೂಹಲ ಕೆರಳಿಸಿದೆ. ಚುನಾವಣೆ ಘೋಷಣೆಯಾದಾಗಿನಿಂದ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿ ಹಾಗೂ ಬಿಜೆಪಿ ನಡುವೆ ವಾಕ್ಸಮರ ನಡೆದಿತ್ತು. ನಾಲ್ಕನೇ ಬಾರಿ ಅಧಿಕಾರ ಹಿಡಿಯಲು ಟಿಎಂಸಿ ಹೋರಾಟ ನಡೆಸಿದರೆ ಟಿಎಂಸಿ ಮಣಿಸಿ ಮೊದಲ ಬಾರಿಗೆ ಪಶ್ಚಿಮ ಬಂಗಾಳದ ಆಡಳಿತ ಚುಕ್ಕಾಣಿ ಹಿಡಿಯಲು ಬಿಜೆಪಿ ಸರ್ವ ಪ್ರಯತ್ನ ನಡೆಸಿದೆ. ಮತದಾನದ ವೇಳೆ ಟಿಎಂಸಿ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಸಂಘರ್ಷ ನಡೆದಿದೆ. ಈ ಬಾರಿ ಟಿಎಂಸಿ ಕೋಟೆಯನ್ನು ಛಿದ್ರಗೊಳಿಸಿ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೆ ಬರಲಿದೆ ಎಂದು 4 ■6ನೇ ಪುಟಕ್ಕೆ

ರಾಜ್ಯ	ಒಟ್ಟು ಕ್ಷೇತ್ರ	ಬಹುಮತ
ಪಶ್ಚಿಮ ಬಂಗಾಳ	294	148
ತಮಿಳುನಾಡು	234	118
ಕೇರಳ	140	71
ಅಸ್ಸಾಂ	126	64
ಪುದುಚೇರಿ	30	16

ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪಸಮರದಲ್ಲಿ ಗೆಲುವು ಯಾರಿಗೆ?



ಟಿ.ಶ್ರೀನಿವಾಸ ಸಮರ್ಥ್ ಶಾಮನೂರು ಚರಂತಿ ಮಠ ಉಮೇಶ್ ಮೇಟಿ

ಬೆಂಗಳೂರು: ರಾಜ್ಯದ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶ ಸೋಮವಾರ (ಮೇ 4) ಹೊರಬೀಳಲಿದೆ.

ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಹಾಗೂ ಹೆಚ್.ವೈ.ಮೇಟಿ ಅವರ ನಿಧನದ ಹಿನ್ನೆಲೆಯಲ್ಲಿ ಈ ಎರಡೂ ಕ್ಷೇತ್ರಗಳಿಗೆ ಕಳೆದ ಏಪ್ರಿಲ್ 9 ರಂದು ಚುನಾವಣೆ ನಡೆದಿತ್ತು ಸೋಮವಾರ ಮಧ್ಯಾಹ್ನದ ವೇಳೆಗೆ ಉಭಯ ಕ್ಷೇತ್ರಗಳ ಫಲಿತಾಂಶ ಪ್ರಕಟವಾಗಲಿದೆ.

ಯಾರಾಗ್ತಾರೆ ಶಾಸಕರು?: ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಶಾಮನೂರು (ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ) ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಗೂ ಟಿ.ಶ್ರೀನಿವಾಸ ದಾಸ ಕರಿಯಪ್ಪ ಬಿಜೆಪಿ ಅಭ್ಯರ್ಥಿಯಾಗಿ ಸೆಣೆಸಾಡಿದ್ದು, ಇವರಲ್ಲಿ ಯಾರು ಗೆಲುವು ಸಾಧಿಸುತ್ತಾರೆ ಎಂಬ ಕುತೂಹಲ ಹೆಚ್ಚಾಗಿದೆ. ಹಾಗೆಯೇ ಬಾಗಲಕೋಟೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಚರಂತಿ ಮಠ ಅಥವಾ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ(ಹೆಚ್.ವೈ.ಮೇಟಿ ಪುತ್ರ) ಶಾಸಕರಾಗಿ ಆಯ್ಕೆಯಾಗುತ್ತಾರೋ ಕಾದು ನೋಡಬೇಕಿದೆ.

ಪ್ರತಿಷ್ಠೆಯ ಕಣ: ರಾಜ್ಯ ಕಾಂಗ್ರೆಸ್ ಆಡಳಿತಾವಧಿಯಲ್ಲಿ ನಡೆದಿರುವ 2ನೇ ಉಪಸಮರ, ಕಾಂಗ್ರೆಸ್ ಹಾಗೂ ಬಿಜೆಪಿ–ಜೆಡಿಎಸ್ ಮೈತ್ರಿಕೂಟಕ್ಕೆ ಪ್ರತಿಷ್ಠೆಯಾಗಿ ಪರಿಣಮಿಸಿತ್ತು. ■6ನೇ ಪುಟಕ್ಕೆ

ಫಲಿತಾಂಶದ ಬಳಿಕ ನಾಯಕತ್ವ ಬದಲಾವಣೆ ಪ್ರಹಸನ ಕ್ಲೈಮ್ಯಾಕ್ಸ್!

- ಈಗಿನ ಪರಿಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಿಲ್ಲ: ರಾಯರೆಡ್ಡಿ ಅಭಿಪ್ರಾಯ
- ನನಗೂ ಆಸೆ ಇದೆ, ಡಿಕೆಶಿ ಕೇಳುವುದರಲ್ಲಿ ತಪ್ಪಿಲ್ಲ: ಡಾ.ಜಿ.ಪರಮೇಶ್ವರ್



ಬೆಂಗಳೂರು: ಚುನಾವಣಾ ಫಲಿತಾಂಶದ ಬಳಿಕ ರಾಜ್ಯ ಕಾಂಗ್ರೆಸ್‌ನಲ್ಲಿನ ನಾಯಕತ್ವ ಬದಲಾವಣೆ ಪ್ರಹಸನ ಮತ್ತೆ ಗರಿಗೆದರುವ ಸಾಧ್ಯತೆ ಹೆಚ್ಚಾಗಿದೆ.

ಮೂರ್‍ನಾಲ್ಕು ತಿಂಗಳಿಂದ ಹಲವು ಬಾರಿ ಹೈಕಮಾಂಡ್ ಭೇಟಿ ಮಾಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಗಾದಿಗೆ ಒತ್ತಾಯಿಸುತ್ತಿದ್ದು, ಇದಕ್ಕೆ ಪಂಚ ರಾಜ್ಯಗಳ ಉಪಚುನಾವಣೆ ಹಾಗೂ ರಾಜ್ಯದ ಎರಡು ಕ್ಷೇತ್ರಗಳ ಉಪಚುನಾವಣೆಯಿಂದ ತಾತ್ಕಾಲಿಕ ಬ್ರೇಕ್ ಬಿದ್ದಿತ್ತು. ಆದರೆ, ಇದೀಗ ಸೋಮವಾರ(ಮೇ 4) ಚುನಾವಣಾ ಫಲಿತಾಂಶ ಪ್ರಕಟಗೊಂಡ ನಂತರದಲ್ಲಿ ನಾಯಕತ್ವ ಬದಲಾವಣೆ ಕ್ಲೈಮಾಕ್ಸ್ ಹಂತಕ್ಕೆ ಬರಲಿದೆ ಎಂಬ ಚರ್ಚೆ ಜೋರಾಗಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬೆಂಬಲಿಗರು ವಿಭಿನ್ನ ಹೇಳಿಕೆ ನೀಡುವ ಮೂಲಕ ಪರೋಕ್ಷವಾಗಿ ■6ನೇ ಪುಟಕ್ಕೆ

ಶೃಂಗೇರಿಯಲ್ಲಿ ಬಿಜೆಪಿಯ ಜೀವರಾಜ್‌ಗೆ ಗೆಲುವು

ಮೂರು ವರ್ಷದ ಬಳಿಕ ಅಂಚೆ ಮತ ಮರು ಎಣಿಕೆಯಲ್ಲಿ ಮಹತ್ವದ ಫಲಿತಾಂಶ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಜಯಗಳಿಸಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಣೆ ಮಾಡಿದ್ದಾರೆ.



ಡಿ.ಎನ್.ಜೀವರಾಜ್

ಕರ್ನಾಟಕ ಹೈಕೋರ್ಟ್ ಆದೇಶದಂತೆ ಚುನಾವಣೆ ನಡೆದು 3 ವರ್ಷಗಳ ಬಳಿಕ ನಡೆಸಲಾದ ಅಂಚೆ ಮತಗಳ ಮರು ಎಣಿಕೆಯಲ್ಲಿ ಮಹತ್ವದ ಫಲಿತಾಂಶ ಪ್ರಕಟಗೊಂಡಿದೆ. ಈ ಮೂಲಕ ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡರು ಶಾಸಕ ಸ್ಥಾನವನ್ನು ಕಳೆದು ಕೊಳ್ಳಲಿದ್ದಾರೆ. ಆರಂಭದಲ್ಲಿ ಕಾಂಗ್ರೆಸ್ ಶಾಸಕ ರಾಜೇಗೌಡರು ಮರು ಎಣಿಕೆಯಲ್ಲೂ ಗೆಲುವು ಸಾಧಿಸುವ ಮೂಲಕ ತಮ್ಮ ಸ್ಥಾನವನ್ನು ಮರುಸ್ಥಾಪಿಸಿಕೊಂಡಿದ್ದಾರೆ ಎಂದು ಹೇಳಲಾಗಿತ್ತು. ■6ನೇ ಪುಟಕ್ಕೆ

ಗುಂಡ್ಲುಪೇಟೆ ಬಳಿ ಭೀಕರ ಅಪಘಾತ; ಮಗು ಸೇರಿ ಮೂವರ ದುರ್ಮರಣ

ಲಾರಿ ಚಾಲಕ ಸೇರಿ ಏಳು ಮಂದಿಗೆ ತೀವ್ರ ಗಾಯ





ಗುಂಡ್ಲುಪೇಟೆ ತಾಲೂಕಿನ ಮದ್ದಯ್ಯನಹುಂಡಿ ಸಮೀಪ ಅಪಘಾತಕ್ಕೊಳಗಾದ ಕಾರು ಮತ್ತು ಕಪ್ಪು ಮಣ್ಣು ಸಾಗಿಸುತ್ತಿದ್ದ ಲಾರಿ.

ಗುಂಡ್ಲುಪೇಟೆ ಮೇ 3 (ಸೋಮ್ ಜಿ.)–ಅಕ್ರಮವಾಗಿ ಮಣ್ಣನ್ನು ತುಂಬಿಕೊಂಡು ಹೋಗುತ್ತಿದ್ದ ಲಾರಿಯೊಂದು ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಮೂರು ವರ್ಷದ ಮಗು ಸೇರಿದಂತೆ ಮೂವರು ಸಾವನ್ನಪ್ಪಿ, ಏಳು ಮಂದಿ ಗಂಭೀರವಾಗಿ ಗಾಯಗೊಂಡಿರುವ ದಾರುಣ ಘಟನೆಯೊಂದು ತಾಲೂಕಿನ ಮದ್ದಯ್ಯನಹುಂಡಿ ಸಮೀಪ ಸಂಭವಿಸಿದೆ.

ಕಾರಿನಲ್ಲಿದ್ದ ಕೇರಳದ ಕಣ್ಣೂರಿನ ನಿವಾಸಿಗಳಾದ ನಾಸಿರ್(35), ನಾಸಿರಾ(45) ಮತ್ತು ಮೂರು ವರ್ಷದ ಮಗು ಮೋಹಿ ದುರಂತದಲ್ಲಿ ಸಾವನ್ನಪ್ಪಿದ್ದು, ತೀವ್ರವಾಗಿ ಗಾಯಗೊಂಡಿರುವ ಸಾನಿಯಾ ಮಿರ್ಜಾ(22), ಮುನೀರ್(30), ನಿಹಾಲ್(26), ಬಿಲಾಲ್(34), ಶಹಲಾ ಪರ್ವೀನ್(28) ಹಾಗೂ ಮುನೀರ್(45) ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಕೇರಳದ ಕಣ್ಣೂರಿನವರಾದ 9 ಮಂದಿ ಕಣ್ಣೂರಿನಲ್ಲಿ ತಮ್ಮ ಸಂಬಂಧಿಕರ ಮನೆಯ ಗೃಹಪ್ರವೇಶ ಮುಗಿಸಿಕೊಂಡು ತಮ್ಮ ರೇನಾಲ್ಟ್ ಕಿಗರ್ ಕಾರಿನಲ್ಲಿ ಸುಲ್ತಾನ್ ಬತ್ತೇರಿ ಮೂಲಕ ಊಟಿಗೆ ತೆರಳುತ್ತಿದ್ದ ವೇಳೆ ಮದ್ದಯ್ಯನಹುಂಡಿ ಸಮೀಪ ಕೇರಳದ ಹೆಂಚಿನ ಕಾರ್ಖಾನೆಗೆ ಅಕ್ರಮವಾಗಿ ಕಪ್ಪು ಮಣ್ಣು ಸಾಗಿಸುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ. ಇದರಿಂದ ಕಾರಿನಲ್ಲಿ ಏರ್ ಬ್ಯಾಗ್ ಇದ್ದರೂ ತೆರೆದುಕೊಳ್ಳದ ಪರಿಣಾಮ ಘಟನೆಯಲ್ಲಿ ನಾಸಿರ್, ನಾಸಿರಾ ಎಂಬುವರು ಸ್ಥಳದಲ್ಲಿಯೇ ಸಾವಿಗೀಡಾದರೆ, ಆಸ್ಪತ್ರೆಯಲ್ಲಿ ಮೋಹಿ ಎಂಬ ಮಗು ಮೃತಪಟ್ಟಿದೆ. ವಿಷಯ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ತೆರಳಿ ಕ್ರೇನ್ ಮತ್ತು ಸ್ಥಳೀಯರ ■6ನೇ ಪುಟಕ್ಕೆ

ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಕಾಂಕ್ರಿಟ್ ತಡೆಗೋಡೆ ಬಹುತೇಕ ಪೂರ್ಣ

ಮಳೆ ನೀರು ಹರಿವಿಗೆ ಡೆಕ್ ನಿರ್ಮಿಸಲು ಮಾರ್ಕಿಂಗ್ ಪ್ರಕ್ರಿಯೆ ಆರಂಭ

- ನೀರು ನಿಂತು ಭೂ ಕುಸಿತವಾಗದಂತೆ ಕ್ರಮ
- ಡೆಕ್ ನಿರ್ಮಾಣ ನಂತರ ಡಾಂಬರೀಕರಣ
- ಮೂರು ತಿಂಗಳಲ್ಲಿ ಕಾಮಗಾರಿ ಪೂರ್ಣ ಸಾಧ್ಯತೆ

ಮೈಸೂರು, ಮೇ 3(ಬಿಎಲ್‌ಯು)– ಚಾಮುಂಡಿ ಬೆಟ್ಟದ ನಂದಿ ಮಾರ್ಗದಲ್ಲಿನ ತಡೆಗೋಡೆ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಮಳೆ ನೀರು ಹರಿವಿಗೆ ಡೆಕ್ ನಿರ್ಮಾಣ ಪ್ರಕ್ರಿಯೆ ಆರಂಭವಾಗಿದೆ.

ಡೆಕ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ನಂತರ ರಸ್ತೆಗೆ ಡಾಂಬರೀಕರಣ ಮಾಡಿ, ಇನ್ನು 3 ತಿಂಗಳಲ್ಲಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ಲೋಕೋಪಯೋಗಿ ಇಲಾಖೆ ನಿರ್ಧರಿಸಿದೆ.

> ರಸ್ತೆ ಮಟ್ಟದಲ್ಲಿ ಡೆಕ್ ನಿರ್ಮಾಣಕ್ಕೆ ಮಾರ್ಕ್ ಮಾಡುವ ಕಾರ್ಯ ಕೈಗೊಳ್ಳಲಾಗಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಂಕ್ರೀಟ್‌ನಿಂದ ಡೆಕ್ ನಿರ್ಮಿಸಲಾಗುವುದು. ತರುವಾಯ ರಸ್ತೆ ಡಾಂಬರೀಕರಣ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ನಂದಿ ಮಾರ್ಗವನ್ನು ಮುಕ್ತಗೊಳಿಸಲಾಗುವುದು.
>
> –ವಿ.ಮಹಾದೇವಸ್ವಾಮಿ, ಎಇಇ, ಲೋಕೋಪಯೋಗಿ ಇಲಾಖೆ, ಮೈಸೂರು.



ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಈಗಾಗಲೇ ತಡೆಗೋಡೆ ನಿರ್ಮಿಸಿರುವ ರಸ್ತೆಯಲ್ಲಿ ಡೆಕ್ ನಿರ್ಮಿಸಲು ಮಾರ್ಕ್ ಮಾಡುತ್ತಿರುವುದು.

ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಭಾರೀ ಮಳೆಯ ಕಾರಣ 2019ರಿಂದ ಮೂರು ಸ್ಥಳಗಳಲ್ಲಿ ಭೂ ಕುಸಿತವಾಗಿ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಮತ್ತೆ ಭೂ ಕುಸಿತ ಸಂಭವಿಸದಂತೆ ವೈಜ್ಞಾನಿಕವಾಗಿ ತಡೆಗೋಡೆ ನಿರ್ಮಾಣ ಮಾಡಲು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ತಜ್ಞರ ಸಲಹೆ ಪಡೆದು ಯೋಜನೆ ರೂಪಿಸಲಾಯಿತು. ಈ ಸಂಬಂಧ 9.75 ಕೋಟಿಯ ಒಂದು ಪ್ಯಾಕೇಜ್ ಹಾಗೂ ■6ನೇ ಪುಟಕ್ಕೆ

ಮೈಸೂರು ಮಿತ್ರ

ಸೋಮವಾರ 4 ಮೇ 2026

ಯುದ್ಧ–ಶಾಂತಿ ವ್ಯಂಗ್ಯ ಚಿತ್ರಕಲಾ ಪ್ರದರ್ಶನ



ಮೈಸೂರು: ಮೈಸೂರಿನ ಬ್ಯಾಂಟರ್ ಬಾಬು ಪಬ್ಲಿಕೇಷನ್ ವತಿಯಿಂದ ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಮೇ 5ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ, ಫುಲ್‌ಬ್ರೈಟ್ ಪ್ರಶಸ್ತಿ ಪುರಸ್ಕೃತ ಎಂ.ವಿ.ನಾಗೇಂದ್ರಬಾಬು ಅವರ ಯುದ್ಧ ಹಾಗೂ ಶಾಂತಿ ವ್ಯಂಗ್ಯ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಪ್ರಮತಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಹೆಚ್.ವಿ.ರಾಜೀವ್ ಉದ್ಘಾಟಿಸುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಶಿಲ್ಪ ಕಲಾವಿದ ಎಲ್.ಶಿವಲಿಂಗಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ಅವರು ಕಾರ್ಟೂನ್ ಸೂಪರ್ ಹೀರೋ 'ಆ್ಯಂಫಿ ಮ್ಯಾನ್' ಭಿತ್ತಿಚಿತ್ರ ಬಿಡುಗಡೆ ಹಾಗೂ ವೈಶಿಷ್ಟ್ಯ ಕುರಿತು ಮಾತನಾಡುವರು. ಬ್ಯಾಂಟರ್ ಬಾಬು ಪಬ್ಲಿಕೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಆರ್.ಯೋಗನರಸಿಂಹನ್, ಕಾರ್ಯದರ್ಶಿ ಆರ್.ಚಕ್ರಪಾಣಿ, ಸಂಚಾಲಕ ಎನ್.ಅನಂತ್ ಉಪಸ್ಥಿತರಿರುವರು.



ನಾಗೇಂದ್ರಬಾಬು

ಯುದ್ಧ ಬಯಸಿದ್ದಲ್ಲ, ಹೇರಲ್ಪಟ್ಟಿದ್ದು: ಬೆಂಗಳೂರಲ್ಲಿ ಇರಾನ್ ಪ್ರತಿನಿಧಿ ಇಲಾಹಿ ಹೇಳಿಕೆ

ಬೆಂಗಳೂರು: ಯುದ್ಧವು ನಮ್ಮ(ಇರಾನ್) ಆಯ್ಕೆಯಲ್ಲ, ಬಲವಂತವಾಗಿ ಹೇರಲ್ಪಟ್ಟದ್ದು ಎಂದು ಇರಾನ್ ಸರ್ವೋಚ್ಛ ನಾಯಕನ ಪ್ರತಿನಿಧಿ ಡಾ.ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಹೇಳಿದ್ದಾರೆ.

ಬೆಂಗಳೂರು ಭೇಟಿ ವೇಳೆ ಮಾತನಾಡಿದ ಅವರು, ಇರಾನ್ ಎಂದಿಗೂ ಯುದ್ಧ ಬಯಸಲಿಲ್ಲ. ಆದರೆ, ನಮ್ಮ ಮೇಲೆ ಹೇರಲಾಯಿತು. ನಾವು ಈಗಲೂ ಯುದ್ಧ ಬಯಸುವುದಿಲ್ಲ, ಆದರೆ ಶತ್ರುಗಳು ಮುಂದುವರಿಸಿದರೆ 10 ವರ್ಷಗಳವರೆಗೂ ಹೋರಾಡಲು ನಾವು ಸಿದ್ಧ ಎಂದು ಹೇಳಿದ್ದಾರೆ.

ಇರಾನ್ ತನ್ನ ಭೂಭಾಗದ ಒಂದು ಇಂಚು ಭೂಮಿಯನ್ನೂ ಕೂಡ ಬಿಟ್ಟುಕೊಡುವುದಿಲ್ಲ, ಬೇಕಾದರೆ ಜನರು ತಮ್ಮ ರಕ್ತವನ್ನೇ ಹರಿಸಲು ಸಿದ್ಧರಾಗಿದ್ದಾರೆ. ಅಮೆರಿಕ ನಮ್ಮ ಎಲ್ಲಾ ಪರಮಾಣು ಕೇಂದ್ರಗಳನ್ನು ನಾಶ ಮಾಡಿದೆ ಎಂದು ಹೇಳುತ್ತದೆ. ಆದರೆ ಅದೇ ಸಮಯದಲ್ಲಿ ನಾವು ಪರಮಾಣು ಶಸ್ತ್ರಾಸ್ತ್ರ ಹೊಂದಿದ್ದೇವೆ ಎಂದು ಆರೋಪಿಸುತ್ತದೆ. ನಾವು ಎನ್‌ಪಿಟಿ ಒಪ್ಪಂದದ ಸಹಿ ರಾಷ್ಟ್ರವಾಗಿದ್ದು, ಶಾಂತಿಯುತ ಪರಮಾಣು ತಂತ್ರಜ್ಞಾನ ಅಭಿವೃದ್ಧಿಗೆ ಹಕ್ಕು ಹೊಂದಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಪಶ್ಚಿಮ ಏಷ್ಯಾ ಸಂಘರ್ಷ ಅಂತ್ಯಕ್ಕೆ ಇರಾನ್ ಬಹುಹಂತದ ಪ್ರಸ್ತಾವ

ಅನುಚಿತವಾಗಿ ವರ್ತಿಸಿದರೆ ಮತ್ತೆ ದಾಳಿ; ಟ್ರಂಪ್ ಎಚ್ಚರಿಕೆ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವನ್ನು ಅಂತ್ಯಗೊಳಿಸುವ ಪ್ರಯತ್ನದ ಭಾಗವಾಗಿ ಇರಾನ್ ಬಹುಹಂತದ ಪ್ರಸ್ತಾವವನ್ನು ಅಮೆರಿಕಕ್ಕೆ ರವಾನಿಸಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಹೊಸದಾಗಿ ನೀಡಿರುವ ಪ್ರಸ್ತಾವನೆಗಳನ್ನು ಪರಾಮರ್ಶೆ ಮಾಡುತ್ತಿದ್ದೇವೆ. ಆದರೆ, ಇರಾನ್ ಅನುಚಿತವಾಗಿ ವರ್ತಿಸಿದರೆ ಮತ್ತೆ ದಾಳಿ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕಳೆದ 47 ವರ್ಷಗಳಲ್ಲಿ ಮಾನವೀಯತೆ ಹಾಗೂ ಜಗತ್ತಿಗೆ ಮಾಡಿದ ತೊಂದರೆಗೆ ಇರಾನ್ ಇನ್ನೂ ದೊಡ್ಡ ಬೆಲೆಯನ್ನು ತೆತ್ತಿಲ್ಲ. ಹಾಗೊಂದು ವೇಳೆ ಇರಾನ್ ಅನುಚಿತವಾಗಿ ಏನಾದರೂ ಕೆಟ್ಟದ್ದನ್ನು ಮಾಡಿದರೆ ಅದು ಸಂಭವಿಸುವ ಸಾಧ್ಯತೆಯಿದೆ ಎಂದು

ಇರಾನ್ ಸಲ್ಲಿಸಿರುವ ಬಹುಹಂತದ ಪ್ರಸ್ತಾವದಲ್ಲಿ ಹೊರ್ಮುಜ್ ಜಲಸಂಧಿ ಮುಕ್ತಗೊಳಿಸುವುದು, ಇರಾನ್ ಮೇಲೆ ಅಮೆರಿಕ ವಿಧಿಸಿರುವ ದಿಗ್ಬಂಧನ ತೆರವುಗೊಳಿಸುವುದು ಮತ್ತು ಲೆಬನಾನ್‌ನಲ್ಲಿ ಯುದ್ಧವನ್ನು ಶಾಶ್ವತವಾಗಿ ಕೊನೆಗೊಳಿಸುವುದು ಸೇರಿದೆ.

ಇರಾನ್ ಪ್ರಸ್ತಾವನೆಯ ಪ್ರಕಾರ, ಅಂತಹ ಒಪ್ಪಂದದ ಬಳಿಕವಷ್ಟೇ ಅಣ್ವಸ್ತ್ರ ಕಾರ್ಯಕ್ರಮದ ಕುರಿತು ಒಪ್ಪಂದಕ್ಕೆ ಬರಲು ಮತ್ತೊಂದು ತಿಂಗಳ ಮಾತುಕತೆಯನ್ನು ಪ್ರಾರಂಭಿಸಲಾಗುವುದು ಎಂದು ಮೂಲಗಳನ್ನು ಉಲ್ಲೇಖಿಸಿ ಆಕ್ಸಿಯೋಸ್ ವರದಿ ಮಾಡಿದೆ.

ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರಿನ ವಿಶ್ವೇಶ್ವರನಗರದ ವೀವರ್ಸ್ ಕಾಲೋನಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಯೂತ್ ಅಸೋಸಿಯೇಷನ್‌ನಿಂದ ಡಾ.ಅಂಬೇಡ್ಕರ್ ಅವರ ಜಯಂತಿಯನ್ನು ಬುದ್ಧ ಪೂರ್ಣಿಮೆ ದಿನದಂದು ಆಚರಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಂಬೇಡ್ಕರ್ ಭಾವಚಿತ್ರದ ಅನಾವರಣಗೊಳಿಸಿ ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಆಶ್ರಯ ಸಮಿತಿ ಮಾಜಿ ಸದಸ್ಯ ಟಿ.ವಿ. ಸುಂದರ್‌ಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಬಾಲಕೃಷ್ಣ, ಯುವ ಮುಖಂಡರಾದ ದೀಕ್ಷಿತ್, ಶಶಾಂಕ್, ಹಿತೇಶ್, ದಿವಾಕರ್, ಸುಹಾಸ್, ರಕ್ಷಿತ್, ಯಶವಂತ್, ಭಾಸ್ಕರ್, ರವಿ, ರಾಜು, ಗಣೇಶ್, ಗೌರವ್, ಪ್ರಜ್ವಲ್ ಇದ್ದರು.

ಪಿಹೆಚ್.ಡಿ ಪದವಿ




ಮೈಸೂರು,ಮೇ 3–ಪ್ರೊ.ಸಿ.ಎಸ್.ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಶ್ರೀಮತಿ ಅಸ್ಮತುನ್ನಿಸಾ.ಜಿ. ಅವರು ಕಾನೂನು ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ 'ಎ ಕ್ರಿಟಿಕಲ್ ಎವಾಲ್ಯುಯೇಷನ್ ಆಫ್ ಪ್ರೊಸೆಷುವಲ್ ಡೈಮೆನ್ಷನ್ಸ್ ಆಫ್ ಟ್ರಯಲ್ ಆಫ್ ಆಫೆನ್ಸಸ್ ಆಗೇನೆಸ್ಟ್ ವುಮನ್' ಎಂಬ ಮಹಾ ಪ್ರಬಂಧವನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ. ಶ್ರೀಮತಿ ಅಸ್ಮತುನ್ನಿಸಾ.ಜಿ. ಮೈಸೂರಿನ ಚಂಪಾ ಕಾನೂನು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ನಾಳೆ ಶ್ರೀ ಅನ್ನಪೂರ್ಣೇಶ್ವರಿ; ಬಲಮುರಿ ಗಣಪತಿ ದೇವಸ್ಥಾನದ 21ನೇ ವಾರ್ಷಿಕೋತ್ಸವ

ಮೈಸೂರು: ಸ್ವಸ್ತಿಶ್ರೀ ವಿಜಯಭ್ಯುದಯ ಶಾಲಿವಾಹನಶಕ, ಪರಾಭವ ನಾಮ ಸಂವತ್ಸರೇ, ಉತ್ತರಾಯಣೇ ವಸಂತರ್ತೌ, ವೈಶಾಖ ಮಾಸ ಕೃಷ್ಣಪಕ್ಷ ಮೇ 5ರಂದು ಮಂಗಳವಾರ ಸಂಕಷ್ಟಹರ ಚತುರ್ಥಿಯಂದು ಲಕ್ಷ್ಮೀಪುರಂ 2ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ಹಾಗೂ ಬಲಮುರಿ ಗಣಪತಿ ದೇವಸ್ಥಾನದ 21ನೇ ವಾರ್ಷಿಕೋತ್ಸವ ಆಚರಿಸಲಾಗುವುದು. ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಲು ಕೋರಿದೆ. ಸಂಜೆ 5ಕ್ಕೆ ಪಂಚಾಮೃತ ಅಭಿಷೇಕ; ಸಂಜೆ 6.30ಕ್ಕೆ ಮಹಾಗಣಪತಿ, ಅನ್ನ ಪೂರ್ಣೇಶ್ವರಿ ಹೋಮ; ರಾತ್ರಿ 8.00ಕ್ಕೆ ಪೂರ್ಣಾಹುತಿ; ರಾತ್ರಿ 8.30ಕ್ಕೆ ಮಹಾ ಮಂಗಳಾರತಿ, ನಂತರ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಭುವಂತ್‌ಗೆ ಉನ್ನತ ಶ್ರೇಣಿ



ಮೈಸೂರು: ಮೈಸೂರಿನ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಭುವಂತ್.ವಿ 2026ನೇ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 600ಕ್ಕೆ 563 (ಶೇ.94) ಅಂಕ ಗಳಿಸಿ, ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ವಿದ್ಯಾರಣ್ಯಪುರಂ ನಿವಾಸಿ ವೆಂಕಟೇಶ್ ಹಾಗೂ ಸೌಭಾಗ್ಯ ದಂಪತಿ ಪುತ್ರ.

ಕೃಷಿಯತ್ತ ಮುಖ ಮಾಡುವಂತೆ ಮಾಡಿದ 'ಬಂಗಾರದ ಮನುಷ್ಯ'
ಡಾ.ರಾಜ್ ಜನ್ಮದಿನೋತ್ಸವ, ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ

ಮೈಸೂರು,ಮೇ.3(ಎಂಟಿವೈ)– ಕಲಾತಪಸ್ವಿಯಾಗಿದ್ದ ವರನಟ ಡಾ.ರಾಜ್‌ಕುಮಾರ್ ಅವರ 'ಬಂಗಾರದ ಮನುಷ್ಯ' ಚಲನಚಿತ್ರ ಅನೇಕರ ಮೇಲೆ ಪರಿಣಾಮ ಬೀರಿ ಕೃಷಿ ಚಟುವಟಿಕೆಯತ್ತ ಮುಖ ಮಾಡುವಂತೆ ಮಾಡಿದೆ ಎಂದು ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ ತಿಳಿಸಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಇಂಚರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಡಾ.ರಾಜ್ ಜನ್ಮದಿನೋತ್ಸವ ಹಾಗೂ ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವರನಟ ಡಾ.ರಾಜ್‌ಕುಮಾರ್ ಕೇವಲ ವ್ಯಕ್ತಿಯಾಗಿರಲಿಲ್ಲ, ಅವರೊಂದು ಶಕ್ತಿ, ದೈವತಾರೆ, ಸಾಂಸ್ಕೃತಿಕ ಶಕ್ತಿ, ಬದುಕಿನ ಆದರ್ಶವಾಗಿದ್ದರು. ರಂಗಭೂಮಿಯಿಂದ ಬೆಳ್ಳಿ ತೆರೆವರೆಗೆ ನಡೆದು ಬಂದ ಕಲಾತಪಸ್ವಿಯ ಹಾದಿ ಎಲ್ಲರಿಗೂ ಮಾದರಿ ಎಂದರು.

ಡಾ.ರಾಜ್ ಕುಮಾರ್ ಅವರ ಚಲನಚಿತ್ರಗಳು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ಚಿತ್ರಗಳ ಮೂಲಕ ಕನ್ನಡ ಹಾಗೂ ಕನ್ನಡಿಗರಿಗೆ ಸಂಸ್ಕೃತಿಯನ್ನು, ಬದುಕಿನ ನೈತಿಕತೆಯನ್ನು ಎಲ್ಲರಿಗೂ ತಿಳಿಸುವ ಸಂದೇಶ ಸಾರಿದರು. ಅವರು ಅಭಿನಯಿಸಿದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಕೌಟುಂಬಿಕ ಚಿತ್ರಗಳಲ್ಲಿ ಸಮಾಜದ ಉತ್ತಮ ಸಂದೇಶವನ್ನೇ ನೀಡಿದ್ದಾರೆ. ಎಲ್ಲಾ ಬಗೆಯ ಚಲನಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರದಲ್ಲಿ ನಟಿಸಿದ ಏಕೈಕ ನಟ ಎನಿಸಿದ್ದಾರೆ. ಅವರು ಕಲಾತಪಸ್ವಿ, ನಮ್ಮ ಹೆಮ್ಮೆ, ನಮ್ಮ ಆತ್ಮ ಆಗಿದ್ದಾರೆ. ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದು ದಾಖಲೆ ನಿರ್ಮಿಸಿದ್ದಾರೆ ಎಂದು ಬಣ್ಣಿಸಿದರು.

ಕಲೆಗೆ ಸಮರ್ಪಣೆ ಮಾಡಿಕೊಂಡಿದ್ದ ಡಾ.ರಾಜ್‌ಕುಮಾರ್ ಅವರು ಚಲನಚಿತ್ರಗಳಲ್ಲಿ ಅಭಿನಯಿಸುವಾಗ ಆಯಾ ಪಾತ್ರದಲ್ಲಿ ತಲ್ಲೀನರಾಗಿರುತ್ತಿದ್ದರು. ಜೀವನಚೈತ್ರ ಚಲನಚಿತ್ರದ 'ನಾದಮಯ ಈ ಲೋಕವೆಲ್ಲ' ಹಾಡಿನ ಚಿತ್ರೀಕರಣದಲ್ಲಿ ಹಿಮಾಲಯ ಪರ್ವತದಲ್ಲಿ ಕೊರೆಯುವ ಚಳಿಯಲ್ಲಿ ಸ್ವೆಟರ್ ಹಾಕದೆ, ಚಪ್ಪಲಿ ಹಾಕದೆ ನಟಿಸಿದ್ದಾರೆ. ಭಕ್ತಿಯ ಪರಾಕಾಷ್ಠೆ ತಲುಪುತ್ತಿದ್ದರು. ರಾಘವೇಂದ್ರಸ್ವಾಮಿ ಚಲನಚಿತ್ರದ ಚಿತ್ರೀಕರಣ ಮುಗಿಯುವವರೆಗೂ ಮಾಂಸಹಾರ ತ್ಯಜಿಸಿದ್ದರು. ಪ್ರತಿಯೊಂದು ಚಲನಚಿತ್ರದಲ್ಲೂ ಯುವಕರಿಗೆ ಮಾದರಿಯಾಗಿದ್ದರು. ಯಾವ ಚಿತ್ರದಲ್ಲೂ ಧೂಮಪಾನ, ಮದ್ಯಪಾನ ಮಾಡಲಿಲ್ಲ. ಇದರಿಂದ ಯುವಜನರು ದುಶ್ಚಟದಿಂದ ದೂರ ಇರುವಂತೆ ಸಂದೇಶ ಸಾರಿದ ನಟರಾಗಿದ್ದಾರೆ ಎಂದು ತಿಳಿಸಿದರು.

ನಾಡು–ನುಡಿ ಹೋರಾಟಕ್ಕೆ ಸೈ: ಡಾ.ರಾಜ್‌ಕುಮಾರ್ ಅವರು ನಾಡು–ನುಡಿಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಈ ಹಿಂದೆ ನಡೆದ ಗೋಕಾಕ್ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಇದರಿಂದ ಸಾಕಷ್ಟು ಬದಲಾವಣೆಯಾಯಿತು. ರಾಜಕೀಯ ಉದ್ದೇಶದ ಚಳುವಳಿ, ಕಾರ್ಯಕ್ರಮಕ್ಕೆ ಅವರು ಬರುತ್ತಿರಲಿಲ್ಲ ಎಂದು ಹೇಳಿದರು.

ರಾಜನಾದ ಮೇಲೆ ಮಂತ್ರಿ ಏಕೆ: ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಡಾ.ರಾಜ್‌ಕುಮಾರ್ ಅವನ್ನು ರಾಜಕೀಯಕ್ಕೆ ಬರುವಂತೆ ಆಹ್ವಾನಿಸಿದ್ದರು. ಅದಕ್ಕೆ ಅವರು ರಾಜಕೀಯ ಬೇಡ ಎಂದು ತಿರಸ್ಕರಿಸಿದ್ದರು. ಈ ವೇಳೆ ಡಾ.ರಾಜ್ ಅವರು ರಾಜಕೀಯಕ್ಕೆ ಬಂದರೆ ಏನಾಗುತ್ತದೆ ಎಂದು ಆತ್ಮೀಯರೊಂದಿಗೆ ಕೇಳಿದ್ದರು. ಅದಕ್ಕೆ ರಾಜಕೀಯಕ್ಕೆ ಬಂದರೆ ನೀವು ಮುಖ್ಯಮಂತ್ರಿಯಾಗುತ್ತೀರಿ ಎಂಬ ಮಾತಿಗೆ ಡಾ.ರಾಜ್‌ಕುಮಾರ್ ಅವರು ಪ್ರತಿಕ್ರಿಯಿಸಿ ಕನ್ನಡಿಗರು ನನ್ನನ್ನು ರಾಜನನ್ನಾಗಿ ಮಾಡಿದ್ದಾರೆ. ರಾಜಕೀಯಕ್ಕೆ ಬಂದು ಮಂತ್ರಿಯಾಗಲೇ ಎಂದು ರಾಜಕೀಯ ತಿರಸ್ಕರಿಸಿದ್ದರು ಎಂದು ಹೇಳಿದರು.

ರೈತರು ಪ್ರಾತಃಸ್ಮರಣೀಯರು: ರೈತರೊಬ್ಬರಿಗೆ ಡಾ.ರಾಜ್‌ಕುಮಾರ್ ಪ್ರಶಸ್ತಿ ನೀಡುತ್ತಿರುವುದು ಸ್ವಾಗತಾರ್ಹ. ರೈತ ಸಾಧನೆ, ತ್ಯಾಗ ಗುರುತಿಸಬೇಕು. ರೈತರಿಲ್ಲದಿದ್ದರೆ ಅನ್ನ, ಬದುಕು, ಜೀವನವಿಲ್ಲ. ರೈತ ಕಾಣದ ದೇವರು, ನೆಲದೊಳಗಿನ ಬೇರಿನಂತೆ ಕತ್ತಲಿಲ್ಲಿ ಇದ್ದುಕೊಂಡು ಅಜ್ಞಾತವಾಗಿ ಬದುಕುತ್ತಾನೆ. ಅವರ ಶ್ರಮವನ್ನು ನೆನೆಯಬೇಕು. ರೈತರ ಶ್ರಮ ನೋಡದೆ ನಾವು ಊಟ ಮಾಡುತ್ತೇವೆ. ಊಟ ಮಾಡುವಾಗ ಪ್ರತಿ ಅಗುಳಿನಲ್ಲೂ ರೈತರ ಶ್ರಮ, ರಕ್ತ ತ್ಯಾಗ ಇರುತ್ತದೆ. ಮುಂದಿನ ಸಂತತಿಗೆ ಅನ್ನ ಸಿಗಬೇಕು ಎಂದರೆ ರೈತರನ್ನು ಗೌರವಿಸಬೇಕು. ರೈತರ ಬಾಳಿಗೆ ಭದ್ರತೆ ಇಲ್ಲ. ಆಹಾರ ಭದ್ರತೆ ದೇಶಕ್ಕೆ ಬಹಳ ಮುಖ್ಯ. ಆ ಆಹಾರವನ್ನು ನೀಡುವುದು ರೈತರು ಮಾತ್ರ ಎಂದು ತಿಳಿಸಿದರು.

ಡಾ.ರಾಜ್ ಸಾಧನಾ ಪ್ರಶಸ್ತಿ: ಇದೇ ವೇಳೆ ಹವ್ಯಾಸಿ ರಂಗಭೂಮಿ ಕಲಾವಿದ ಸ್ವಾಮಿ ಮಹಾಮನೆ, 'ಮೈಸೂರು ಮಿತ್ರ' ಪತ್ರಿಕಾ ಛಾಯಾಗ್ರಾಹಕ ಎಂ.ಎನ್. ಲಕ್ಷ್ಮೀನಾರಾಯಣ ಯಾದವ್, ಗಾಯಕ ರಾ.ಬಿ. ನಾಗರಾಜ್, ಸಮಾಜ ಸೇವಕ ಎಸ್.ವೆಂಕಟೇಶ್, ರೈತ ಜಯರಾಮ್, ಸಮಾಜ ಸೇವಕ ಆರ್.ಲಕ್ಷ್ಮಣ್, ಯೋಗ ಕ್ಷೇತ್ರದಿಂದ ಅನಂತ್ ಅವರಿಗೆ ಡಾ.ರಾಜ್ ಸಾಧನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ವಿದ್ಯಾರ್ಥಿನಿ ಎಂ.ಪಿ.ನಿಧಿಶ್ರೀ ಅವರಿಗೆ ಡಾ.ರಾಜ್ ಪ್ರತಿಭಾ ಪುಸ್ಕಾರ ವಿತರಿಸಲಾಯಿತು.

ಕಾರ್ಯಕ್ರಮದ ಸಾನಿಧ್ಯವನ್ನು ಮೇಲುಕೋಟೆ ವಂಗೀಪುರ ನಂಬೀಮಠದ ಪೀಠಾಧ್ಯಕ್ಷ ಇಳೈ ಆಳ್ವಾರ್ ಸ್ವಾಮೀಜಿ ವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಡಾ.ನಾಗರಾಜ್ ವಿ.ಭೈರಿ, ಸಮಾಜಸೇವಕ ಡಾ.ರಘುರಾಂ ವಾಜಪೇಯಿ, ರಂಗಕರ್ಮಿ ಡಾ.ರಾಜಶೇಖರ್ ಕದಂಬ, ಹಿರಿಯ ಲೇಖಕ ಡಾ.ಸತೀಶ್ ಚಂದ್ರ, ಉಪನ್ಯಾಸಕಿ ನಿವೇದಿತಾ, ಇಂಚರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ರಂಗನಾಥ್ ಮೈಸೂರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಇಂಚರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಡಾ.ರಾಜ್ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು.

ಅರ್ಜಿ ಆಹ್ವಾನ

ಮೈಸೂರು: ಸರ್ಕಾರಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳ ಆಗಸ್ಟ್–2026ನೇ ಸಾಲಿನ CTS ಮತ್ತು PPP ವಿಭಾಗದಲ್ಲಿ ಮೆರಿಟ್‌ಮ್ ರಿಸರ್ವೇಷನ್ ಫಿಟ್ಟರ್, ಟರ್ನರ್, ಕೊಪ, ಎಲೆಕ್ಟ್ರಿಷಿಯನ್, ಇ/ಎಂ ಪ್ರವೇಶಗಳಿಗಾಗಿ ಕ್ರಮವಾಗಿ ಆನ್‌ಲೈನ್ ಮತ್ತು ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಮೇ 8ರೊಳಗೆ ಕಚೇರಿ ಸಂಪರ್ಕಿಸಿ ಅರ್ಜಿ ಪಡೆದು ಸಲ್ಲಿಸಬಹುದು. ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬೆಳಕವಾಡಿ ದೂ.ಸಂ: 0821–2950951 ಸಂಪರ್ಕಿಸಬಹುದು.

ಇಂದು, ನಾಳೆ ಮೈಸೂರಿನ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಮೇ.3–ಆಯರಹಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮೇ 5ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವರಕೋಡು ವಿ.ವಿ ಕೇಂದ್ರದ ವ್ಯಾಪ್ತಿಯ ಪಿಲ್ಲಹಳ್ಳಿ, ಮೋಸಂಬಾಯನಹಳ್ಳಿ, ವರುಣ, ಜೆಎಸ್‌ಎಸ್ ಬಡಾವಣೆ 4ನೇ ಹಂತ, ಹೊಸಕೋಟೆ, ಮೊರಾರ್ಜಿ ಶಾಲೆ, ನಿರ್ಮಾಣ್‌ನಗರ ಬಡಾವಣೆ, ಟ್ರೋಪಿಕಲ್ ವಿಲೇ ರೆಸಾರ್ಟ್, ವರಕೋಡು ಮೊರಾರ್ಜಿ ಶಾಲೆ, ವರಕೋಡು ಗೇಟ್, ವರುಣ ವುಡ್ಸ್, ಅಕ್ಷಯ್ ವುಡ್ಸ್, ಬಿ.ಟಿ.ಎ ಎನ್‌ಕ್ಲೇವ್, ವರಕೋಡು ಪೇಪರ್ ಫ್ಯಾಕ್ಟರಿ, ಟಿ. ನರಸೀಪುರ ಮುಖ್ಯ ರಸ್ತೆ ಹಾಗೂ ಸುತ್ತ–ಮುತ್ತ. ಆಯರಹಳ್ಳಿ ವಿ.ವಿ ಕೇಂದ್ರದ ವ್ಯಾಪ್ತಿಯ ದೇವಲಾಪುರ, ಕಿರಾಳು, ಚಿಕ್ಕೇಗೌಡನಹುಂಡಿ, ಜಂತಗಳ್ಳಿ, ಸಜ್ಜೆಹುಂಡಿ, ಮರಿಗೌಡನಹುಂಡಿ, ಟಿ.ಎಂ.ಹುಂಡಿ, ರಾಯನ ಹುಂಡಿ, ಸೋಮೇಶ್ವರಪುರ, ಆಯರಹಳ್ಳಿ, ಕುಂಬರಹಳ್ಳಿ, ಕುಂಬರಹಳ್ಳಿ ಮಠ, ಬಸಹಳ್ಳಿಹುಂಡಿ, ಹಡಜನ, ಮಾರಶೆಟ್ಟಿಹಳ್ಳಿ, ಪ್ರಶಾಂತ್ ಛಾಯಾ ಬಡಾವಣೆ, ಶ್ರೀಷಾ ಹಿಲ್ ವ್ಯೂ ಬಡಾವಣೆ, ಮಲ್ಲರಾಜನಹುಂಡಿ, ಹದಿನಾರು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಇಂದು ವಿದ್ಯುತ್ ವ್ಯತ್ಯಯ: ರಾಮಾನುಜ ಫೀಡರ್ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕೆಲಸದ ನಿಮಿತ್ತ ಮೇ 4ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ರಾಮಾನುಜ ರಸ್ತೆ 1ರಿಂದ 19ನೇ ಕ್ರಾಸ್, ಹೊಸಬಂಡಿಕೇರಿ, ಮೇದರ ಕೇರಿ, ಚಾಮುಂಡಿಪುರ ವೃತ್ತ, ಸೈಂಟ್ ಮೇರಿಸ್ ಸ್ಕೂಲ್ ಹಾಗೂ ಸುತ್ತ–ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಹಡಿಯಿಂದ ಮನೆಗೆ ನುಗ್ಗಿ ಚಿನ್ನ ಕಳವು

ಮೈಸೂರು, ಮೇ 3(ಎಂಕೆ)– ಮನೆ ಮಹಡಿಯಿಂದ ಒಳನುಗ್ಗಿರುವ ಕಳ್ಳರು, ಬೀರುವಿನ ಬಾಗಿಲು ಮೀಟಿ 14 ಗ್ರಾಂ ಚಿನ್ನ ದೋಚಿರುವ ಘಟನೆ ಎನ್‌ಆರ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ನಾತೀಹಾ ಖಾನಂ ಚಿನ್ನ ಕಳೆದುಕೊಂಡವರು. ಏ.27 ರಂದು ಕುಟುಂಬ ಸಮೇತ ಸಂಬಂಧಿಕರ ಮನೆಗೆ ತೆರಳಿ, ಮೇ 1ರಂದು ಮಧ್ಯಾಹ್ನ 2.30ಕ್ಕೆ ವಾಪಸ್ ಬಂದು ನೋಡಿದಾಗ 9 ಗ್ರಾಂ ಮತ್ತು 5 ಗ್ರಾಂ ಉಂಗುರ ಕಳ್ಳತನವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಎನ್‌ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೇಖಕ ಆಲಕೆರೆ ಜೆ.ರಾಮಲಿಂಗೇಗೌಡರು ಅನುವಾದಿಸಿದ ಕೃತಿಗಳ ಬಿಡುಗಡೆ

ಮೈಸೂರು, ಮೇ3(ಎಂಕೆ)– ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಪರ ಆಯುಕ್ತ ಹಾಗೂ ಲೇಖಕ ಆಲಕೆರೆ ಜೆ.ರಾಮಲಿಂಗೇಗೌಡ ಅನುವಾದಿತ ಕೃತಿಗಳಾದ 'ನಂಬಲ ಸಾಧ್ಯವಾದ ಸಾಯಿಬಾಬಾ', 'ಡೀಪ್ ವರ್ಕ್', 'ನೇತಾಜಿ' ಮತ್ತು 'ಸಮುದ್ರದತ್ತ ಸವಾರರು' ಕೃತಿಗಳನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಕ್ಲಬ್ ಪಶ್ಚಿಮ ಶಾಲೆ ಸಭಾಂಗಣದಲ್ಲಿ ಪ್ರೊ.ಕೆ.ವೆಂಕಟಗಿರಿಗೌಡ ಸಾಂಸ್ಕೃತಿಕ–ಶೈಕ್ಷಣಿಕ ಪರಿಷತ್ ಮತ್ತು ಹನ್ಯಾಳು ಪ್ರಕಾಶನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಲ್ಕು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲೇಖಕ ಪ್ರಸನ್ನಕುಮಾರ್ ಕೆರಗೋಡು ಮಾತನಾಡಿ, ಅನುವಾದ ಎನ್ನುವುದು ಕೇವಲ ಭಾಷಾಂತರವಲ್ಲ, ಬದಲಾಗಿ ಒಂದು ದೇಶ, ಪ್ರಾಂತ್ಯ ಮತ್ತು ಸಂಸ್ಕೃತಿಯನ್ನು ಇನ್ನೊಂದು ಭಾಷೆಗೆ ಯಥಾವತ್ತಾಗಿ ವರ್ಗಾಯಿಸುವ ಸೂಕ್ಷ್ಮ ಪ್ರಕ್ರಿಯೆಯಾಗಿದೆ. ಇದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಪ್ರಕ್ರಿಯೆಯಾಗಿದ್ದು, ಅನುವಾದ ಎಂಬುದು ಕೇವಲ ಅಕ್ಷರ ರೂಪದಲ್ಲಿ ಮಾತ್ರವಲ್ಲದೆ ಸಾಂಸ್ಕೃತಿಕ ರೂಪದಲ್ಲಿ ಇರಲಿದೆ. ಈ ನಿಟ್ಟಿನಲ್ಲಿ ಆಲಕೆರೆ ಜೆ.ರಾಮಲಿಂಗೇಗೌಡ ಉತ್ತಮವಾಗಿ ಅನುವಾದ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಇದಕ್ಕೂ ಮುನ್ನ ಮಹಾರಾಣಿ ಮಹಿಳಾ ಕಾಲೇಜು ಸ್ನಾತಕೋತ್ತರ ಕೇಂದ್ರದ ಸಹ ಪ್ರಾಧ್ಯಾಪಕಿ ಡಾ.ಬಿ.ಎಸ್.ದಿವ್ಯ, ನಿವೃತ್ತ ಹಿಂದಿ ಪ್ರಾಧ್ಯಾಪಕ ಪ್ರೊ.ಜಿ.ಚಂದ್ರಶೇಖರ್, ಮಹಾರಾಣಿ ಕಲಾ ಕಾಲೇಜು ಸಹ ಪ್ರಾಧ್ಯಾಪಕಿ ರೇಖಾ ಮ್ಯಾಥ್ಯೂ ಕೃತಿಗಳ ಕುರಿತು ಮಾತನಾಡಿದರು. ಪ್ರೊ.ಕೆ. ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್ ಕಾರ್ಯದರ್ಶಿ ಎನ್.ಸಿ. ತಮ್ಮಣ್ಣಗೌಡ, ಪ್ರಕಾಶಕ ಹೆಚ್.ಎಸ್. ಗೋವಿಂದಗೌಡ ಮತ್ತಿತರರಿದ್ದರು.



ಲೇಖಕ ಆಲಕೆರೆ ಜೆ.ರಾಮಲಿಂಗೇಗೌಡ ಅನುವಾದಿತ ನಾಲ್ಕು ಕೃತಿಗಳನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

> **"ಪ್ರತೀ ಪದವನ್ನು ಭಾಷಾಂತರ ಮಾಡದೆ ಮೂಲ ಲೇಖಕರ ಆಶಯವನ್ನು ಮತ್ತೊಂದು ಭಾಷೆಗೆ ತರುವುದಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅನುವಾದ ಎನ್ನುವುದು ಎರಡನೇ ದರ್ಜೆಯ ಕೆಲಸ ವಲ್ಲ. ಅದೂ ಕ್ರಿಯಾತ್ಮಕ, ಸೃಜನಶೀಲ ಕೆಲಸವಾಗಿದೆ. ಮೂಲ ಕೃತಿಕಾರರಿಗಿಂತ ಅನುವಾದಕರ ಶ್ರಮವೂ ದೊಡ್ಡ ಮಟ್ಟದಲ್ಲಿರಲಿದೆ. –ಪ್ರಸನ್ನಕುಮಾರ್ ಕೆರಗೋಡು**

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.5.2026 ಸೋಮವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರಿಂದ ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಶ್ರೀಮತಿ ಲೀಲಾ ನಾಗರಾಜ್ ಅವರ ಸ್ವಗೃಹ, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4ಕ್ಕೆ.
- **ಕಾವೇರಿ ಬಳಗ, ಹಿರಣ್ಮಯಿ ಪ್ರತಿಷ್ಠಾನ:** 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಆಯ್ದ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಶ್ರೀ ಶಿರಡಿ ಸಾಯಿಬಾಬ ಉಪಾಸಕರಾದ ಗೋಪಾಲಸ್ವಾಮಿ, ಪ್ರತಿಭಾ ಪುರಸ್ಕಾರ ಪ್ರದಾನ:ಮಂಡ್ಯ ಡಯಟ್ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಪುರುಷೋತ್ತಮ್, ಸ್ಥಳ:ಶಿರಡಿ ಸಾಯಿಬಾಬ ಮಂದಿರ, 9ನೇ ಕ್ರಾಸ್, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ–ಡಾ.ಎ.ಎಸ್.ಬಾಲಸುಬ್ರಹ್ಮಣ್ಯ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶುಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 9.00 ನೆನಪಿನಂಗಳ–(1) ಕನ್ನಡದ ಕಣ್ವ ಬಿ.ಎಂ.ಶ್ರೀ ಅವರ ಕೃತಿಗಳ ಕುರಿತು ಆಯೋಜಿತವಾಗಿದ್ದ ವಿಚಾರ ಗೋಷ್ಠಿಯಲ್ಲಿ ಪ್ರೊ.ಸಿ.ಪಿ.ಕೆ ಅವರು ನೀಡಿದ್ದ ಉಪನ್ಯಾಸದ ಆಯ್ದಭಾಗದ ಧ್ವನಿ ಮುದ್ರಣ. (2)ತಿ.ನಂ.ಶ್ರೀ ಅವರ ಸ್ವರಚಿತ ಕವನ ವಾಚನದ ಧ್ವನಿಮುದ್ರಣ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ.ಕೆ.ಸರಸ್ವತಿ–ವೀಣಾವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಗೇಮ್ ಷೋ, ಪ್ರಸ್ತುತಿ–ದಿಗ್ವಿಜಯ್.ಬಿ, ಮಧ್ಯಾಹ್ನ 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ–ಅಲರ್ಜಿ ಮತ್ತು ಅಸ್ತಮಾ ಲಕ್ಷಣಗಳು ಹಾಗೂ ಚಿಕಿತ್ಸೆ ಕುರಿತು ತಿಳಿಸಿಕೊಡುತ್ತಾರೆ, ಶ್ವಾಸಕೋಶ ತಜ್ಞರಾದ ಡಾ.ಮುರಳಿ ಬಿ. ಮೋಹನ್. ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಜನ್ ಧನ್ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ಉಲ್ಲಾಸ್ ಗುಣಗ. 1.20–ಭಾವಗೀತೆಗಳು–ಪಂಡಿತ್ ಭೀಮ್ ಸೇನ್ ಜೋಶಿ, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಧುರೈ ಮಣಿ ಅಯ್ಯರ್ ಅವರ ಹಾಡುಗಾರಿಕೆಯಲ್ಲಿ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು. 4.00 ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮೈಸೂರಿನ ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಕೀಲರಾದ ಅಂಜಲಿ ರಾಮಣ್ಣ, ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಡಾ.ಸ್ಮಿತಾ ಚಿಪ್ಳೂಣ್ಕರ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾ ಪತ್ರ 6.50 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಕೃಷಿ ಬೆಳೆಗಳಲ್ಲಿ ಬರ ನಿರ್ವಹಣೆ ಈ ಕುರಿತು ಮಂಡ್ಯದ, ವಿ.ಸಿ.ಫಾರಂ, ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಕೆ.ವಿ.ಶಿವಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: 2025–26ನೇ ಸಾಲಿನ ದ್ವಿತೀಯ PUC ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಾದ ಕಲಾ ವಿಭಾಗದ ಸಂಜನಾ, ವಿಜ್ಞಾನ ವಿಭಾಗದ ಸಹನಾ ಟಿ.ಎಸ್., ವಾಣಿಜ್ಯ ವಿಭಾಗದ, ಫೈಜ ಅಲಿ ಸೈಯದ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್.ಬಿ, 8.30 ಹಿಂದಿ ಚಿತ್ರಗೀತೆಗಳು, 9.30– ಕರ್ನಾಟಕ ಶಾಸ್ತ್ರೀಯ ಸಂಗೀತ–ಎಚ್.ಕೆ.ನರಸಿಂಹಮೂರ್ತಿ ವಯೋಲಿನ್ ವಾದನ, 10.00 ಶ್ರೀ ವಿದ್ಯಾವಿಶಾರದ ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30–ಸವಿನೆನಪು.

ನಾನು ಉನ್ನತ ಹುದ್ದೆ ಅಲಂಕರಿಸಲು ಡಾ.ರಾಜ್ ಆಶೀರ್ವಾದ, ಉತ್ತೇಜನ ಕಾರಣ

ಸಂಗೀತ ಸಂಜೆ ಕಾರ್ಯಕ್ರಮ ಉದ್ಘಾಟಿಸಿ ಕೆಎಫ್‌ಸಿಸಿ ಅಧ್ಯಕ್ಷೆ ಡಾ.ಜಯಮಾಲಾ ಸ್ಮರಣೆ



ಸಂಗೀತ ಸಂಜೆ ಕಾರ್ಯಕ್ರಮವನ್ನು ಕೆಎಫ್‌ಸಿಸಿ ಅಧ್ಯಕ್ಷೆ ಡಾ.ಜಯಮಾಲಾ ಉದ್ಘಾಟಿಸಿದರು.

ಮೈಸೂರು,ಮೇ 3(ಪಿಎಂ)– ನಾನು ಯಾವುದೇ ಉನ್ನತ ಹುದ್ದೆ ಅಲಂಕರಿಸಲು ಡಾ.ರಾಜ್‌ಕುಮಾರ್ ಅವರ ಆಶೀರ್ವಾದ ಮತ್ತು ಉತ್ತೇಜನವೇ ಕಾರಣ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ಅಧ್ಯಕ್ಷೆ ಹಾಗೂ ಹಿರಿಯ ನಟಿ ಡಾ.ಜಯಮಾಲಾ ಸ್ಮರಿಸಿದರು.

ಮೈಸೂರಿನ ವಿಶ್ವೇಶ್ವರನಗರದ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಕೇಂದ್ರದ ಎಂಬಿಸಿಟಿ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಅರುಣರಾಗ ಕ್ರಿಯೇಷನ್ಸ್ ವತಿಯಿಂದ 'ರಾಜ್ ಸಂಗಮ–ಗಿರಿಕನ್ಯೆ ಸಂಭ್ರಮ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಡಾ.ರಾಜ್‌ಕುಮಾರ್, ಡಾ.ಜಯಮಾಲಾ ಮತ್ತು ಡಾ.ಪುನೀತ್ ರಾಜ್‌ಕುಮಾರ್ ಅವರ ಚಿತ್ರಗಳ ಸಂಗೀತ ಸಂಜೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ರಾಜ್‌ಕುಮಾರ್ ಅವರ ಸ್ವರವೇ ಒಂದು ಸಂಚಲನ. ಅವರೊಬ್ಬ ಮಹಾನ್ ನಟ. ಅವರೊಂದಿಗೆ ಅಭಿನಯಿಸುವುದು ಸುಲಭವಾಗಿರಲಿಲ್ಲ. 1975ರಲ್ಲಿ ಪ್ರೇಮದ ಕಾಣಿಕೆ ಚಿತ್ರದಲ್ಲಿ ಅವರ ಜೊತೆ ಅಭಿನಯಿಸಲು ನನಗೆ ಅವಕಾಶ ಸಿಕ್ಕಿತು. ರಾಜ್‌ಕುಮಾರ್ ಆಗಾಗಲೇ ಗೌರಿಶಂಕರದಷ್ಟು ಎತ್ತರಕ್ಕೆ ಏರಿದ್ದರು. ಮಂಗಳೂರಿನಲ್ಲಿ ಹುಟ್ಟಿ ಚಿಕ್ಕಮಗಳೂರಲ್ಲಿ ಬೆಳೆದ ನನಗೆ ಆಗಿನ್ನೂ 16 ವರ್ಷ ಎಂದು ನೆನಪಿಸಿಕೊಂಡರು.

ರಾಜ್‌ಕುಮಾರ್ ಅವರ ಪತ್ನಿ ಪಾರ್ವತಮ್ಮನವರು ನನಗೆ ತಾಯಿ ಇದ್ದಂತೆ. ಇವರಿಬ್ಬರ ಆಶೀರ್ವಾದದಿಂದ ಇಂದು ಈ ಮಟ್ಟಕ್ಕೆ ಬೆಳೆದಿದ್ದೇನೆ. ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿಯಾದರೂ ಡಾ.ರಾಜ್‌ಕುಮಾರ್ ಅವರನ್ನು ಭೇಟಿ ಮಾಡುತ್ತಿದ್ದರು. ಎಂ.ವೀರಪ್ಪ ಮೊಯ್ಲಿ, ಹೆಚ್.ಡಿ.ದೇವೇಗೌಡರು ಭೇಟಿ ಮಾಡಿದಾಗ ಕಲಾವಿದರ ಕೋಟಾದಿಂದ ವಿಧಾನ ಪರಿಷತ್‌ಗೆ ನನ್ನನ್ನು ನಾಮನಿರ್ದೇಶನ ಮಾಡುವಂತೆ ರಾಜ್‌ಕುಮಾರ್ ಶಿಫಾರಸು ಮಾಡಿದ್ದರು. ಕಾರಣಾಂತರದಿಂದ ಆಗ ಅವಕಾಶ ನನಗೆ ದೊರೆಯಲಿಲ್ಲ ಎಂದರು.

ಸರ್ಕಾರದಲ್ಲಿ ಉನ್ನತ ಹುದ್ದೆ ಅಲಂಕರಿಸಿ ಒಳ್ಳೆಯ ಕೆಲಸ ಮಾಡುತ್ತೀಯಾ ಎಂದು ರಾಜ್‌ಕುಮಾರ್ ನನಗೆ ಆಶೀರ್ವದಿಸಿದ್ದರು. ಬಹುಶಃ ಅದೇ ಈ ಮಟ್ಟಕ್ಕೆ ನನ್ನನ್ನು ಬೆಳೆಸಿದೆ. ರಾಜ್‌ಕುಮಾರ್ ಅವರೊಂದಿಗೆ ಏಳು ಸಿನಿಮಾ ಮಾಡಿದ್ದೇನೆ. ಆ ಏಳು ಸಿನಿಮಾಗಳು ನನ್ನ ಜೀವನದಲ್ಲಿ ಸಪ್ತ ಸಾಗರ ದಾಟಿದಾಗೆ. ಭಾರತೀಯ ಚಿತ್ರರಂಗದ ಅತ್ಯಂತ ಸುಂದರ ನಾಯಕಿಯರು ರಾಜ್‌ಕುಮಾರ್ ಅವರ ಜೊತೆ ಒಂದು ಸಿನಿಮಾ ಮಾಡಿದರೆ ಸಾಕು ಎಂದು ತುದಿಗಾಲಲ್ಲಿ ನಿಂತಿದ್ದರು. ಅಂತಹ ಸಂದರ್ಭದಲ್ಲಿ ಕೇವಲ 16ನೇ ವಯಸ್ಸಿಗೆ ಏಳು ಸಿನಿಮಾಗಳಲ್ಲಿ ಅವರೊಂದಿಗೆ ಅಭಿನಯಿಸುವ ಅವಕಾಶ ದೊರೆಯಿತು ಎಂದು ಹರ್ಷ ವ್ಯಕ್ತಪಡಿಸಿದರು.

ಇವತ್ತಿನ ಹಾಡುಗಳನ್ನು ಕೇಳಿದರೆ ಒಂದೂ ನೆನಪಿನಲ್ಲಿ ಉಳಿಯುವುದಿಲ್ಲ. ಅಂದಿನ ಹಾಡುಗಳು ಕುಳುತ್ತಿದ್ದರೆ ಗುನುಗುಟ್ಟುತ್ತವೆ. ಅಂದಿನ ಹಾಡುಗಳೇ ನಿಜಕ್ಕೂ ಅದ್ಭುತ. ಎಷ್ಟು ಸಾರಿ ಕೇಳಿದರೂ ಕೇಳೋಣ ಎನಿಸುತ್ತವೆ. ಆಗ ಅಂತಹ ಸಾಹಿತಿಗಳು, ಸಂಗೀತ ನಿರ್ದೇಶಕರು, ಹಾಡುಗಾರರು, ಸಂಗೀತಗಾರರು ಇದ್ದರು. ನಿಜವಾಗಲೂ ಅವರನ್ನು ಸ್ಮರಿಸಬೇಕು ಎಂದು ಹೇಳಿದರು.

ಡಾ.ರಾಜ್‌ಕುಮಾರ್, ಡಾ.ಪುನೀತ್ ರಾಜ್‌ಕುಮಾರ್ ಹಾಗೂ ಡಾ.ಜಯಮಾಲಾ ಅಭಿನಯಿಸಿರುವ ಚಿತ್ರಗಳ ಗೀತೆಗಳನ್ನು ಗಾಯಕರು ಸಾದರಪಡಿಸಿದರು. ಪಾರ್ವತಮ್ಮ ಅವರ ಸಹೋದರ, ಚಲನಚಿತ್ರ ನಿರ್ಮಾಪಕ ಶ್ರೀನಿವಾಸ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಕಾರ್ಯದರ್ಶಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಮೈಸೂರು ಜಿಲ್ಲಾ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ ವಿ.ಬೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ. ಶೋಭಾ, ಮುಖಂಡರಾದ ಗೋಲ್ಡನ್ ಸುರೇಶ್, ಎಡೆಯೂರು ಸಮೀವುಲ್ಲಾ, ಅರುಣರಾಗ ಕ್ರಿಯೇಷನ್ಸ್ ಮುಖ್ಯಸ್ಥೆ ಹಾಗೂ ವೈದ್ಯೆ ಡಾ.ರೇಖಾ ಅರುಣ್ ಮತ್ತಿತರರು ಹಾಜರಿದ್ದರು.

ಸಾಧಕರಿಗೆ ಶಂಕರಾಚಾರ್ಯರ ಸದ್ಭಾವನಾ ಪ್ರಶಸ್ತಿ ಪ್ರದಾನ

ಸಾಮೂಹಿಕ ಪ್ರಾರ್ಥನೆ, ಸನಾತನಿಗಳ ಜಯಂತಿ ಆಚರಿಸಲು ಶಾಸಕ ಶ್ರೀವತ್ಸ ಕರೆ



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐವರಿಗೆ ಶಂಕರಾಚಾರ್ಯರ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮೇ 3(ವಿವಿಹೆಚ್)– ಮೈಸೂರಿನ ನಜರಬಾದ್ ನಿಂಬುಜಾದೇವಿ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಹಿಮಾಲಯ ಪ್ರತಿಷ್ಠಾನ ಹಾಗೂ ಎಸ್‌ಎಸ್‌ಜೆಜಿ ಮತ್ತು ನಂಬುಜಾದೇವಿ ಅಮ್ಮನವರ ದೇವಸ್ಥಾನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಭಾನುವಾರ ಆದಿಗುರು ಶಂಕರಾಚಾರ್ಯರ ಜಯಂತಿ ಹಾಗೂ ಸಾಧಕರಿಗೆ ಶಂಕರಾಚಾರ್ಯರ ಸದ್ಭಾವನಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಶಾಸಕ ಟಿ.ಎಸ್.ಶ್ರೀವತ್ಸ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಿ.ಎನ್.ದಿವಾಕರ್ (ಆಡಳಿತ ಸೇವೆ), ಎಂ.ಎಸ್.ರಾಜಶ್ರೀ (ಸಾರ್ವಜನಿಕ ಆಡಳಿತ ಸೇವೆ), ಜಿ.ರಾಘವೇಂದ್ರ (ಪತ್ರಿಕಾರಂಗ), ವಿ.ನಾಗರಾಜು (ಸಮಾಜ ಸೇವೆ), ಮಧುಸೂಧನ್ (ಸಂಗೀತ) ಅವರಿಗೆ ಶಂಕರಾಚಾರ್ಯ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಿದರು.

ಬಳಿಕ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳು, ಸಾಮೂಹಿಕ ಪ್ರಾರ್ಥನೆಗಳು ಸನಾತನ ಧರ್ಮವನ್ನು ಉಳಿಸುವ ಜೊತೆಗೆ ನಮ್ಮನ್ನು ಬಲಶಾಲಿಯನ್ನಾಗಿ ಮಾಡುತ್ತದೆ. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯರಾದಿಯಾಗಿ ಅನೇಕ ಮಹಾಪುರುಷರ ಜಯಂತಿಗಳನ್ನು ಆಚರಿಸಬೇಕು. ಜೊತೆಗೆ ಅಂತಹ ಮಹಾಪುರುಷರ ಜೀವನ, ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಪರಿ, ಅಸ್ಪೃಶ್ಯತೆ ನಿವಾರಣೆಗೆ ಪಣತೊಟ್ಟು ಮಾಡಿದ ಮಹಾನ್ ಕಾರ್ಯಗಳನ್ನು ಸ್ಮರಿಸುವ ಜೊತೆಗೆ ಪಾಲಿಸಬೇಕು. ಆ ಮೂಲಕ ಸಮಾಜದ ಬದಲಾವಣೆಗೆ ಮುಂದಾಗಬೇಕು ಎಂದರು.

ಇತ್ತೀಚಿಗಿನ ದಿನಗಳಲ್ಲಿ ಹಿಂದೂ ಧರ್ಮ, ಸನಾತನ ಧರ್ಮವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಲೇ ಇದೆ. ಮೊದಲು ತಿರುಪತಿ ಲಡ್ಡು ವಿವಾದ, ಶಬರಿಮಲೆ ಪ್ರವೇಶ, ಇದಾದ ಬಳಿಕ ನಮ್ಮ ರಾಜ್ಯದ ಪವಿತ್ರ ಧಾರ್ಮಿಕ ಸ್ಥಳವಾದ ಧರ್ಮಸ್ಥಳ ಬಗ್ಗೆ ಗದಾಪ್ರಹಾರ ಇದಕ್ಕೆ ಉದಾಹರಣೆಯಾಗಿದೆ. ಇವುಗಳನ್ನು ಹಿಮ್ಮೆಟ್ಟಿಸಲು ಸಾಮೂಹಿಕ ಪ್ರಾರ್ಥನೆ, ಸನಾತನಿಗಳ ಜಯಂತಿಗಳ ಆಚರಣೆಯೂ ಸಹಾಯಕಾರಿಯಾಗಲಿದೆ ಎಂದು ಅಭಿಪ್ರಾಯಿಸಿದರು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮ, ಸುತ್ತೂರು ಮಠ, ಪಡುವಾರಹಳ್ಳಿಯ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಾಲಯ ಸೇರಿದಂತೆ ಹಲವು ಕಡೆಗಳಲ್ಲಿ ಮೈಸೂರು ಸೇರಿದಂತೆ ಇತರೆ ಜಿಲ್ಲೆಗಳ 100ಕ್ಕೂ ಅಧಿಕ ಮಕ್ಕಳು, ವಿದ್ಯಾರ್ಥಿಗಳು ವೇದಾಧ್ಯಯನ, ಸಂಸ್ಕೃತ ಹಾಗೂ ಪೌರೋಹಿತ್ಯ ಕಲಿಕೆಗೆ ಮುಂದಾಗಿದ್ದಾರೆ. ಇದು ಸನಾತನ ಧರ್ಮದ ಪ್ರಭಾವವನ್ನು ಸೂಚಿಸುತ್ತದೆ ಎಂದರು.

ಈ ವೇಳೆ ವಿದ್ವಾಂಸ ಕೆ.ಅನಂತರಾಮು ಅವರು ಶಂಕರಾಚಾರ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಟ್ರಸ್ಟ್ ಉಪಾಧ್ಯಕ್ಷ ಜನಾರ್ದನ ಜೆಟ್ಟಿ, ಕಾರ್ಯದರ್ಶಿ ಎಂ.ಕಿರಣ್, ಪ್ರತಿಷ್ಠಾನ ಅಧ್ಯಕ್ಷ ಎಸ್.ಅನಂತ, ಎಸ್.ನಾಗೇಶ್ ಬಾಬು ಉಪಸ್ಥಿತರಿದ್ದರು.

ಕ್ರಿಕೆಟ್ ಪಂದ್ಯಾವಳಿ ಫೈನಲ್ ಪಂದ್ಯಕ್ಕೆ ಚಾಲನೆ...



ಮೈಸೂರು ತಾಲೂಕಿನ ವರುಣ ಗ್ರಾಮದ ಶಾಲಾ ಮೈದಾನದಲ್ಲಿ 2026ನೇ ಸಾಲಿನ ಪವರ್ ಸ್ಟಾರ್ ಕಪ್ ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹಿರಿಯ ವಕೀಲರೂ ಆದ ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರು ಟಾಸ್ ಹಾಕುವ ಮೂಲಕ ಎರಡು ತಂಡಗಳಿಗೂ ಶುಭಾಶಯ ತಿಳಿಸಿದರು. ಈ ವೇಳೆ ಮಧು, ಕಾರ್ತಿಕ್, ಸುನಿಲ್, ಚೆಲುವರಾಜು, ರಘು ಆರಾಧ್ಯ, ನಾಸೀರ್, ಸಿಕಂದರ್. ನಂದನ್, ಗಿರೀಶ್ ಮಾಂಬಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಮೇ 20ರಿಂದ ಬಸ್ ಬಂದ್ ಸಾಧ್ಯತೆ

ಬೆಂಗಳೂರು: ವೇತನ ಬಾಕಿ ಪಾವತಿಯೂ ಸೇರಿದಂತೆ ಸಾರಿಗೆ ನೌಕರರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದೆ.

ಅಂದು ಬೆಳಿಗ್ಗೆ 6ರಿಂದಲೇ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ಬಸ್‌ಗಳನ್ನು ರಸ್ತೆಗೆ ಇಳಿಸದಿರಲು ನೌಕರರು ನಿರ್ಧರಿಸಿದ್ದು, ರಾಜ್ಯದಾದ್ಯಂತ ಬಸ್ ಸಂಚಾರ ಬಂದ್ ಆಗುವ ಸಾಧ್ಯತೆಯಿದೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಜತೆಗೆ ಏಪ್ರಿಲ್ 28ರಂದು ನಡೆದಿದ್ದ ಮಾತುಕತೆ ವಿಫಲವಾದ ಬೆನ್ನಲ್ಲೇ ಮುಷ್ಕರ ನಡೆಸುವುದಾಗಿ ನೌಕರರು ಎಚ್ಚರಿಸಿದ್ದರು. ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷೆ ಜ್ಯೋತಿ ಅನಂತಸುಬ್ಬರಾವ್ ಅವರು ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಅಧಿಕೃತವಾಗಿ ಘೋಷಿಸಿದರು.

'2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇ 25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯೊಳಗೆ ಈಡೇರಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದ್ದೆವು. ಅವರು ಶೇ 7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏಪ್ರಿಲ್ 1ರಿಂದ ಪರಿಗಣಿಸುವುದಾಗಿ ಹೇಳಿದ್ದರು. ಹಾಗಾಗಿ, ಮಾತುಕತೆ ಫಲಪ್ರದವಾಗಿರಲಿಲ್ಲ. ಹೀಗಾಗಿ, ಮುಷ್ಕರಕ್ಕೆ ಕರೆ ನೀಡಲಾಗಿದೆ' ಎಂದು ಜ್ಯೋತಿ ಅನಂತಸುಬ್ಬರಾವ್ ಮಾಹಿತಿ ನೀಡಿದರು. ಕೋವಿಡ್ ಸಮಯದಲ್ಲಿ ಮೃತಪಟ್ಟವರಿಗೆ ಇದುವರೆಗೂ ಪರಿಹಾರ ನೀಡಿಲ್ಲ. ರಾಜ್ಯ ಸರ್ಕಾರಕ್ಕೆ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಪ್ರಯೋಜನ ಆಗಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಹಾರೋಹಳ್ಳಿ ಗ್ರಾಮದಲ್ಲಿ ಬಸವ ಜಯಂತಿ

ಬಸವಣ್ಣನವರ ತತ್ವ ಪಾಲನೆಯಿಂದ ಸಮಾಜದಲ್ಲಿ ಸಮಾನತೆ, ಶಾಂತಿ ನೆಲೆಸಲಿದೆ

ಶಾಸಕ ಜಿ.ಟಿ.ದೇವೇಗೌಡರು ಅಭಿಮತ



ಹಾರೋಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಭಾಗವಹಿಸಿದ್ದರು.

ಮೈಸೂರು,ಮೇ 3(ಪಿಎಂ)– ಬಸವಣ್ಣನವರ ತತ್ವಗಳನ್ನು ಪಾಲಿಸಿದರೆ ಸಮಾಜದಲ್ಲಿ ಸಮಾನತೆ, ಸಮೃದ್ಧಿ ಹಾಗೂ ಶಾಂತಿ ನೆಲೆಸಲಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಹಿರಿಯ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಮೈಸೂರು ತಾಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

12ನೇ ಶತಮಾನದ ಮಹಾನ್ ಸಮಾಜ ಸುಧಾರಕ ಬಸವಣ್ಣ. ಅವರ ತತ್ವಗಳು ಇಂದಿನ ಸಮಾಜಕ್ಕೂ ದಾರಿದೀಪವಾಗಿವೆ. ಜಾತಿ, ಲಿಂಗ ಬೇಧವಿಲ್ಲದೆ ಎಲ್ಲರೂ ಸಮಾನರು ಎಂಬ ಸಂದೇಶವನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾರಿದರು. 'ಕಾಯಕವೇ ಕೈಲಾಸ' ಎಂಬ ಅವರ ಮಂತ್ರವು ದುಡಿಮೆ, ನಿಷ್ಠೆ ಮತ್ತು ಪ್ರಾಮಾಣಿಕ ಬದುಕಿನ ಮಹತ್ವವನ್ನು ಪ್ರತಿಪಾದಿಸುತ್ತದೆ ಎಂದು ತಿಳಿಸಿದರು.

ಅನುಭವ ಮಂಟಪವನ್ನು ಸ್ಥಾಪಿಸಿ ಸಮಾನತೆಯ ಚರ್ಚಾ ವೇದಿಕೆಯನ್ನು ನಿರ್ಮಿಸಿದ ಬಸವಣ್ಣನವರು, ಸಮಾಜದಲ್ಲಿ ಸಮಗ್ರ ಬದಲಾವಣೆಗೆ ಕಾರಣರಾದರು. ಮಹಿಳೆಯರಿಗೂ ಸಮಾನ ಅವಕಾಶ ಕಲ್ಪಿಸಿದರು. ವಿಶೇಷವಾಗಿ ಅಕ್ಕ ಮಹಾದೇವಿ ಅವರಿಗೆ ಗೌರವಾನ್ವಿತ ಸ್ಥಾನ ನೀಡಿದರು ಎಂದು ಸ್ಮರಿಸಿದರು.

ಅವರ ಪ್ರಗತಿಪರ ಚಿಂತನೆಗಳು ನಮ್ಮ ಸಮಾಜಕ್ಕೆ ಅಗತ್ಯವಾಗಿದ್ದು, ಯುವ ಜನರು ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಅವರ ಕಾಯಕ ನಿಷ್ಠೆ ಮತ್ತು ಸೇವಾಭಾವ ಇಂದಿನ ಪೀಳಿಗೆಗೆ ಮಾದರಿಯಾಗಬೇಕು ಎಂದರಲ್ಲದೆ, ಮುಂದಿನ ದಿನಗಳಲ್ಲಿ ಬಸವಣ್ಣನವರ ಪ್ರತಿಮೆ ನಿರ್ಮಿಸುವುದಾಗಿ ಘೋಷಿಸಿದ ಶಾಸಕರು, ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಸದಾ ಒಳ್ಳೆಯ ಫಲ ದೊರೆಯುತ್ತದೆ ಎಂದರು.

ಈ ಸಂದರ್ಭದಲ್ಲಿ ಗಾಯಕ ಶಿವಾರ ಉಮೇಶ್, ಮುಖಂಡರಾದ ಜಯಪುರ ಜವರನಾಯಕ, ದಾರಿಪುರ ಬಸವಣ್ಣ, ಗ್ರಾಮದ ಮಹದೇವಪ್ಪ, ಬಸವಣ್ಣ, ನಾಗಣ್ಣ, ಶಿವಲಿಂಗ, ಮಲ್ಲಿಕಾರ್ಜುನ ಮತ್ತಿತರರು ಹಾಜರಿದ್ದರು.

ರಹಾನೆ–ರಘುವಂಶಿ ಭರ್ಜರಿ ಬ್ಯಾಟಿಂಗ್; ಕೆಕೆಆರ್‌ಗೆ ಹ್ಯಾಟ್ರಿಕ್ ಗೆಲುವು

ಹೈದರಾಬಾದ್, ಮೇ 3(ವಿವಿಹೆಚ್)– ನಾಯಕ ಅಜಿಂಕ್ಯ ರಹಾನೆ, ಅಂಗ್‌ಕ್ರಿಷ್ ರಘುವಂಶಿ ಅವರ ಬ್ಯಾಟಿಂಗ್ ನೆರವಿನಿಂದ ಅತಿಥೇಯ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕೋಲ್ಕತ್ತ ನೈಟ್‌ರೈಡರ್ಸ್ 7 ವಿಕೆಟ್‌ಗಳಿಂದ ಭರ್ಜರಿ ಗೆಲುವು ದಾಖಲಿಸಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಮೈದಾನದಲ್ಲಿ ನಡೆದ ಐಪಿಎಲ್–2026ರ 45ನೇ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಎಚ್ 19 ಓವರ್‌ಗಳಲ್ಲಿ ಸರ್ವಪತನ ಕಾಣುವ ಮೂಲಕ 165 ರನ್‌ಗಳಿಸಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಕೆಕೆಆರ್ ತಂಡವು 18.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 169 ರನ್ ಗಳಿಸುವ ಮೂಲಕ 10 ಎಸೆತಗಳು ಬಾಕಿ ಇರುವಂತೆಯೇ ಗೆಲುವಿನ ನಗೆ ಬೀರಿತು.



ಮೊದಲು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಎಚ್‌ಗೆ ಭರ್ಜರಿ ಆರಂಭ ಸಿಕ್ಕಿತು. ಅಭಿಷೇಕ್ ಶರ್ಮಾ 15(10) ರನ್ ಗಳಿಸಿ ಬೇಗನೇ ಔಟಾದರು. ಬಳಿಕ ಜೊತೆಯಾದ ಟ್ರಾವಿಸ್ ಹೆಡ್ 61(28ಎ, 9ಬೌ 3ಸಿ) ಹಾಗೂ ಇಶಾನ್ ಕಿಶನ್ 42 (29ಎ, 4ಬೌ, 2ಸಿ) ರನ್ ಬಾರಿಸಿವ್ರ ಮೂಲಕ ತಂಡದ ಮೊತ್ತ ಹೆಚ್ಚಿಸಲು ಸಹಕರಿಸಿದರು.

ಇವರಿಬ್ಬರ ದಾಂಡಿಗರು ನಿರ್ಗಮನದ ಬಳಿಕ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಉತ್ತಮ ಲಯದಲ್ಲಿದ್ದ ಹೆನ್ರಿಚ್ ಕ್ಲಾಸೆನ್ 11, ಸಮ್ರಾನ್ ರವಿಚಂದ್ರನ್ 4, ಅನಿಕೇತ್ ವರ್ಮಾ 6, ಸಲೀಲ್ ಅರೋರ 2, ನಾಯಕ ಪ್ಯಾಟ್ ಕಮಿನ್ಸ್ 10 ರನ್ ಗಳಿಸಿದರು.

ಕೆಕೆಆರ್ ಪರ ವರುಣ್ ಚಕ್ರವರ್ತಿ 3 ವಿಕೆಟ್, ಸುನಿಲ್ ನರೇನ್, ಕಾರ್ತಿಕ್ ತ್ಯಾಗಿ ತಲಾ 2, ವೈಭವ್ ಅರೋರ, ಗ್ರೀನ್, ಅಂಕುಲ್ ರಾಯ್ ತಲಾ ಒಂದೊಂದು ವಿಕೆಟ್ ಪಡೆದು ಗಮನಸೆಳೆದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಕೆಕೆಆರ್‌ಗೆ ಆರಂಭಿಕ ಫಿನ್ ಅಲೆನ್ ಸ್ಫೋಟಕ ಆರಂಭ ಒದಗಿಸಿದರು. 13 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸಹಿತ 29 ರನ್ ಗಳಿಸಿ ಬಂದಷ್ಟೆ ವೇಗವಾಗಿ ಪೆವಿಲಿಯನ್ ಸೇರಿದರು.

ಬಳಿಕ ಜೊತೆಯಾದ ನಾಯಕ ಅಜಿಂಕ್ಯ ರಹಾನೆ 43(36) ಹಾಗೂ ಅಂಗ್‌ಕ್ರಿಷ್ ರಘುವಂಶಿ 59(47) 84 ರನ್‌ಗಳ ಜೊತೆಯಾಟವಾಡಿದರು. ಕೊನೆಯಲ್ಲಿ ಅಬ್ಬರಿಸಿದ ರಿಂಕು ಅಜೇಯ 22(11) ರನ್ ಗಳಿಸಿದರೆ, ಕ್ಯಾಮರೋನ್ ಗ್ರೀನ್ ಅಜೇಯ 3(3) ರನ್ ಕಲೆಹಾಕಿ ಕ್ರೀಜ್‌ನಲ್ಲಿದ್ದರು.

ಎಸ್‌ಆರ್‌ಹೆಚ್ ಪರ ಪ್ಯಾಟ್ ಕಮಿನ್ಸ್, ಶಿವಾಂಗ್ ಕುಮಾರ್ ಹಾಗೂ ಶಕೀಬ್ ಹಸನ್ ತಲಾ ಒಂದೊಂದು ವಿಕೆಟ್ ಪಡೆದರು.

ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಆಕರ್ಷಕ ಜಿಆರ್‌ಎಸ್ ಸೆಲ್ಫಿ ಫ್ಯಾಕ್ಟರಿ ಆರಂಭ

4 ಸಾವಿರ ಚದರಡಿ ವಿಸ್ತೀರ್ಣದಲ್ಲಿ 20ಕ್ಕೂ ಹೆಚ್ಚು ಥೀಮ್ ಸೆಟ್‌ಗಳು

ಮೈಸೂರು,ಮೇ 3(ಪಿಎಂ)– ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಆಕರ್ಷಕ ಜಿಆರ್‌ಎಸ್ ಸೆಲ್ಫಿ ಫ್ಯಾಕ್ಟರಿ ಪ್ರಾರಂಭಗೊಂಡಿದೆ. ಇದು 4 ಸಾವಿರ ಚದರಡಿ ವಿಸ್ತೀರ್ಣದಲ್ಲಿ 20ಕ್ಕೂ ಹೆಚ್ಚು ಥೀಮ್ ಹೊಂದಿದ ಸೆಟ್‌ಗಳನ್ನು ಒಳಗೊಂಡಿದೆ.

ಜಿಆರ್‌ಎಸ್ ಸ್ನೋ ಪಾರ್ಕ್ ಸಮೀಪದ ಸಂಕೀರ್ಣದ ನೆಲಮಹಡಿಯಲ್ಲಿ ಇದನ್ನು ಸ್ಥಾಪಿತವಾಗಿದ್ದು, ಅಮ್ಯೂಸ್‌ಮೆಂಟ್ ಮತ್ತು ವಾಟರ್ ಪಾರ್ಕ್‌ಗಳಿಂದ ಪ್ರತ್ಯೇಕ ಟಿಕೆಟ್ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿಗೆ ಭೇಟಿ ನೀಡಲು ಫ್ಯಾಂಟಸಿ ಪಾರ್ಕ್‌ಗೆ ಪ್ರವೇಶಿಸುವ ಅಗತ್ಯವಿಲ್ಲ.

ಇಲ್ಲಿರುವ 20ಕ್ಕೂ ಹೆಚ್ಚಿನ ಸೆಟ್‌ಗಳಲ್ಲಿ ನಿಯಾನ್ ಡ್ರೀಮ್ಸ್, ಟ್ರಾಪಿಕಲ್ ಪ್ಯಾರಡೈಸ್, ಮಿಸ್ಟಿಕ್ ಲೈಟ್ಸ್ ಮತ್ತು ವಿಂಟೇಜ್ ವೈಬ್ಸ್ ಸಹ ಸೇರಿವೆ. ಪ್ರತಿಯೊಂದನ್ನು ವಿಶೇಷ ಹಿನ್ನೆಲೆಯಾಗಿ ವಿನ್ಯಾಸಗೊಳಿಸಲಾಗಿದೆ. ವಿಂಟೇಜ್ ವೋಕ್ಸ್‌ವ್ಯಾಗನ್ ವ್ಯಾನ್ ಒಳಗೆ ನಿರ್ಮಿಸಲಾದ ಕೆಫೆಯು ಅದೇ ಜಾಗದಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಸ್ಥಳದಲ್ಲಿ ಗಂಟೆಗೆ ಸುಮಾರು 100 ಸಂದರ್ಶಕರಿಗೆ ಅವಕಾಶವಾಗಲಿದೆ. ಜೊತೆಗೆ ಇದಕ್ಕಾಗಿ 10 ಮಂದಿ ನೌಕರರನ್ನು ನಿಯೋಜಿಸಲಾಗಿದೆ.

ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10.30ರಿಂದ ಸಂಜೆ 7ರವರೆಗೆ ಇಲ್ಲಿಗೆ ಭೇಟಿ ನೀಡಬಹುದು. ಅದೇ ರೀತಿ ವಾರಾಂತ್ಯದಲ್ಲಿ ರಾತ್ರಿ 8ರವರೆಗೆ ಭೇಟಿ ನೀಡಬಹುದು. ಪ್ರಾರಂಭದಲ್ಲಿ ಟಿಕೆಟ್ ದರವನ್ನು 199 ರೂ. ನಿಗದಿ ಮಾಡಲಾಗಿತ್ತು. ಈಗ 299 ರೂ.ಗೆ ಪರಿಷ್ಕರಿಸಲಾಗಿದೆ.



ಕೋಟಿ ವೆಚ್ಚದಲ್ಲಿ ಸ್ಥಾಪನೆ: ಮೈಸೂರಿಗರು ಮತ್ತು ಪ್ರವಾಸಿಗರಿಗೆ ವಿಶೇಷ ನೆನಪುಗಳನ್ನು ಸೃಷ್ಟಿಸಲು ಸುಮಾರು 1 ಕೋಟಿ ವೆಚ್ಚದಲ್ಲಿ ಜಿಆರ್‌ಎಸ್ ಸೆಲ್ಫಿ ಫ್ಯಾಕ್ಟರಿ ಸ್ಥಾಪಿಸಿದ್ದೇವೆ ಸೆಲ್ಫಿ ಎಂದ ಮಾತ್ರಕ್ಕೆ ಕೇವಲ ಒಬ್ಬರ ಫೋಟೋಗಳಿಗೆ ಮಾತ್ರ ಇದನ್ನು ಮಾಡಿದ್ದಲ್ಲ. ಕುಟುಂಬಗಳ ಫೋಟೋಗಳಿಗೆ ಸೂಕ್ತವಾಗಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಮೊದಲ ಮೂರು ವಾರಗಳಲ್ಲಿ ಮದುವೆ ಹಾಗೂ ಮಕ್ಕಳ ಫೋಟೋಶೂಟ್‌ಗಳಿಗಾಗಿ ಈಗಾಗಲೇ ಬುಕ್ಕಿಂಗ್‌ಗಳನ್ನು ಪಡೆದಿದ್ದೇವೆ. ನಮ್ಮ ನಿರೀಕ್ಷೆಗಿಂತ ಹೆಚ್ಚಿನ ಜನಪ್ರಿಯತೆ ವ್ಯಕ್ತವಾಗುತ್ತಿದೆ ಎಂದು ಬಾಳಿಗಾ ಇನ್ವೆಸ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಅಶ್ವಿನ್ ಡಾಂಗೆ ಹೇಳಿದರು.

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಮೈಸೂರಿನಲ್ಲಿ ಕಳೆದ 26 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಈಗ ಅಮ್ಯೂಸ್‌ಮೆಂಟ್ ಮತ್ತು ವಾಟರ್ ಪಾರ್ಕ್, ಜಿಆರ್‌ಎಸ್ ಅಪ್‌ಡೌನ್, ಜಿಆರ್‌ಎಸ್ ಸ್ನೋ ಪಾರ್ಕ್ ಹಾಗೂ ಜಿಆರ್‌ಎಸ್ ಸೆಲ್ಫಿ ಫ್ಯಾಕ್ಟರಿಯನ್ನು ಒಳಗೊಂಡಿದೆ ಪ್ರತಿ ಯೊಂದಕ್ಕೂ ಪ್ರತ್ಯೇಕ ಟಿಕೆಟ್ ವ್ಯವಸ್ಥೆಯಿದ್ದು, ಹಲವು ಆಕರ್ಷಣೆಗಳನ್ನು ಒಳಗೊಂಡ ಕಡಿತ ದರದ ಕಾಂಬೋ ಟಿಕೆಟ್‌ಗಳು https://grs.fun/ ನಲ್ಲಿ ಲಭ್ಯವಿವೆ ಎಂದು ಅವರು ತಿಳಿಸಿದ್ದಾರೆ.

ಸಾಯ್ ಸುದರ್ಶನ್, ವಾಷಿಂಗ್ಟನ್ ಸುಂದರ್ ಭರ್ಜರಿ ಆಟ; ಪಿಬಿಕೆಎಸ್ ವಿರುದ್ಧ ಜಿಟಿಗೆ ಗೆಲುವು

ಅಹಮದಾಬಾದ್, ಮೇ 3(ವಿವಿಹೆಚ್)– ಸಾಯ್ ಸುದರ್ಶನ್, ವಾಷಿಂಗ್ಟನ್ ಸುಂದರ್ ಅವರ ಜವಾಬ್ದಾರಿಯುತ ಬ್ಯಾಟಿಂಗ್‌ನಿಂದ ಗುಜರಾತ್ ಟೈಟನ್ಸ್, ಪಂಜಾಬ್ ಕಿಂಗ್ಸ್ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತು.

57ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಟೂರ್ನಿಯ 45ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಗುಜರಾತ್ ಟೈಟನ್ಸ್ 19.5 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 167 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಪರ ಉತ್ತಮ ಲಯದಲ್ಲಿದ್ದ ಪ್ರಿಯಾಂಶ್ ಆರ್ಯ 2(2), ಕೂಪರ್ ಕನೋಲಿ ಗೋಲ್ಡನ್ ಡಕ್ ಆಗಿ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಪ್ರಬ್‌ಸಿಮ್ರಾನ್ ಸಿಂಗ್ 15(14) ರಬಾಡ ಬೌಲಿಂಗ್‌ನಲ್ಲಿ ಔಟ್ ಆಗಿ ಪೆವಿಲಿಯನ್ ಸೇರಿದರು.

47 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಪಂಜಾಬ್‌ಗೆ ಯುವ ಬ್ಯಾಟರ್ ಸೂರ್ಯಾನ್ಶ್ ಶೆಡ್ಜ್ ಹಾಗೂ ಅನುಭವಿ ಆಟಗಾರ ಮಾರ್ಕಸ್ ಸ್ಟೋಯ್ನಿಸ್ 79 ರನ್‌ಗಳ ಜೊತೆಯಾಟವಾಡುವ ಮೂಲಕ ಆಸರೆಯಾದರು. ಶೆಡ್ಜ್ 29 ಎಸೆತಗಳಲ್ಲಿ 3ಬೌಂಡರಿ, 5 ಸಿಕ್ಸರ್ ಸಹಿತ 57ರನ್ ಚಚ್ಚಿದರೆ, ಸ್ಟೋಯ್ನಿಸ್ 31 ಎಸೆತಗಳಲ್ಲಿ 40 ಬಾರಿಸಿದರು.

ಉಳಿದಂತೆ ನಾಯಕ ಶ್ರೇಯಸ್ ಅಯ್ಯರ್ 19(21), ನೆಹಲ್ ವಧೇರಾ ಡಕೌಟ್, ಮಾರ್ಕೊ ಯಾನ್ಸನ್ 20(11), ಬಾರ್ಟ್ಲೆಟ್ ಗೋಲ್ಡನ್ ಡಕ್, ವೈಶಾಖ್ ವಿಜಯ್ ಅಜೇಯ 1(3) ಹಾಗೂ ಅರ್ಶ್‌ದೀಪ್ 1(1) ರನ್ ಗಳಿಸಿ ಕ್ರೀಜ್‌ನಲ್ಲಿದ್ದರು.

ಜಿಟಿ ಪರ ಜಾಸನ್ ಹೋಲ್ಡರ್ ಪ್ರಮುಖ 4 ವಿಕೆಟ್ ಪಡೆದರೆ, ಮೊಹಮ್ಮದ್ ಸಿರಾಜ್, ಕಗಿಸೊ ರಬಾಡ ತಲಾ 2, ರಶೀದ್ ಖಾನ್ 1 ವಿಕೆಟ್ ಕಿತ್ತರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಜಿಟಿಗೆ ಆರಂಭಿಕ ಆಘಾತ ಎದುರಾಯಿತು. ನಾಯಕ ಶುಭ್‌ಮನ್ ಗಿಲ್ 5(4), ಜೊಸ್ ಬಟ್ಲರ್ 26(22), ನಿಶಾಂತ್ ಸಿಂಧು 15(11) ಬೇಗನೇ ವಿಕೆಟ್ ಕಳೆದುಕೊಂಡಿತು.

ಈ ವೇಳೆ ಜವಾಬ್ದಾರಿಯುತವಾಗಿ ಬ್ಯಾಟಿಂಗ್ ಮಾಡಿದ ಸಾಯ್ ಸುದರ್ಶನ್ 41 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 57 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ರಾಹುಲ್ ತೆವಾಟಿಯಾ 2(6), ಜಾಸನ್ ಹೋಲ್ಡರ್ 5(7) ರನ್ ಗಳಿಸಿ ಔಟಾದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೆ ಮತ್ತೊಂದೆಡೆ ಸುಭದ್ರವಾಗಿ ನಿಂತು ಇನ್ನಿಂಗ್ಸ್ ಕಟ್ಟಿದ ವಾಷಿಂಗ್ಟನ್ ಸುಂದರ್ 23 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ 40ರನ್ ಗಳಿಸಿ ಕೊನೆವರೆಗೂ ನಿಂತು ಪಂದ್ಯವನ್ನು ಗೆಲ್ಲಿಸಿಕೊಟ್ಟರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಶಾಂತಿಯಿಂದ ಮಾತ್ರ ದೇಶ ಕಟ್ಟಲು ಸಾಧ್ಯ
ಗುಂಡ : ಸುಮ್ನಿರಿ ಸಾರ್. ಶಾಂತಿಗೆ ನೆಟ್ಟಗೆ ಹೂ ಕಟ್ಟೋಕೆ ಬರಲ್ಲ. ಇನ್ ದೇಶ ಹೆಂಗ್ ಕಟ್ತಾಳೆ.

ಮೈಸೂರು ಮಿತ್ರ
ಸೋಮವಾರ, ಮೇ 4, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೇರೆಯವರ ನಡತೆ ನಮ್ಮ ಮನಸ್ಸಿನ ನೆಮ್ಮದಿಯನ್ನೂ ಹಾಳು ಮಾಡಲು ಅವಕಾಶ ನೀಡಬೇಡಿ. –ದಲೈಲಾಮಾ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸಲಿಗೆ ಕೊಟ್ಟರೆ ನಾಯಿ, ನೊಸಲು (ಹಣೆ) ನೆಕ್ಕಿತ್ತು

ನಿಮ್ಮ ಪತ್ರಗಳು

ಮಕ್ಕಳಲ್ಲಿ ಸೃಜನಶೀಲ ಸಾಮರ್ಥ್ಯ ವಿಕಾಸ

ಮಾನ್ಯರೆ,

ರಾಜ್ಯದ ಎಲ್ಲಾ ಶಾಲೆಗಳಲ್ಲೂ ಪ್ರತಿದಿನ ಹತ್ತು ನಿಮಿಷ ಪ್ರಾರ್ಥನಾ ಅಧಿವೇಶನದಲ್ಲಿ ಕನ್ನಡ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕ್ರಮ ಶ್ಲಾಘನೀಯ. ಇದು ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಪ್ರೀತ್ಯಾಭಿಮಾನ ಬೆಳೆಸಲು, ಅವರಲ್ಲಿನ ಸಭಾಕಂಪನ ದೂರವಾಗಿಸಿ ಆತ್ಮವಿಶ್ವಾಸ ವೃದ್ಧಿಸಲು, ಆಲಿಸುವ ಮತ್ತು ಓದುವ ಕೌಶಲವ ವಿಸ್ತರಿಸಲು, ಅದಕ್ಕೂ ಮಿಗಿಲಾಗಿ 'ಕನ್ನಡ ಪತ್ರಿಕೋದ್ಯಮ'ದ ಉಳಿವಿಗೂ ಅತ್ಯಂತ ಸಹಕಾರಿಯಾದುದು. ಮಕ್ಕಳ ಭಾಷಿಕ ಮತ್ತು ಜ್ಞಾನಾತ್ಮಕ ವಲಯ ವಿಕಸಿಸಲು ಪೂರಕವಾದುದು ಹೌದು.

ಈ ಮೊದಲೂ ಕೂಡ ಸರ್ಕಾರಿ ಶಾಲೆಗಳಲ್ಲಿ ಕನ್ನಡ ದಿನಪತ್ರಿಕೆ ಓದಿಸುವ ಕಾರ್ಯಕ್ರಮ ಜಾರಿಯಲ್ಲಿತ್ತು. ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಈ ಮೊದಲು ಜಾರಿಯಲ್ಲಿದ್ದ 'ಇಪ್ಪತ್ತು ಅಂಶಗಳ' ಕಾರ್ಯಕ್ರಮ ಹಾಗೂ ಆನಂತರದ 'ಹತ್ತು ಅಂಶಗಳ' ಕಾರ್ಯಕ್ರಮದ ಒಂದಂಶವಾಗಿ ಪತ್ರಿಕೆ ಓದಿಸುವ ಚಟುವಟಿಕೆ ನಡೆಯುತ್ತಿತ್ತು. ಆದರೆ, ಶಿಕ್ಷಕರ ಇಚ್ಛಾಸಕ್ತಿಯ ಕೊರತೆಯಿಂದ ಅದೂ ಸಾರ್ವತ್ರಿಕವಾಗಿರಲಿಲ್ಲ. ಅಂದಿನಿಂದ ಈವರೆಗೂ ಕೆಲವು ಶಾಲೆಗಳಲ್ಲಿ ನಿತ್ಯ ಪತ್ರಿಕೆ ಓದಿಸುವ ಕಾರ್ಯ ನಡೆದಿದೆ. ನಾವು ಕೂಡ ನಮ್ಮ ಶಾಲೆಯಲ್ಲಿ ಪ್ರತಿದಿನ ಪತ್ರಿಕೆ ಓದಿಸುವುದನ್ನು ಶಾಲಾ ದಿನಚರಿಯ ಭಾಗವಾಗಿಸಿಕೊಂಡಿದ್ದೇವೆ. ಯಾವುದೇ ಯೋಜನೆ ಅಥವಾ ಕಾರ್ಯಕ್ರಮದ ಯಶಸ್ಸು ಯಾವಾಗಲೂ ಅನುಷ್ಠಾನ ಮಾಡುವವರ ಬದ್ಧತೆ ಮತ್ತು ಇಚ್ಛಾಶಕ್ತಿಯ ಮೇಲೆ ನಿಂತಿರುತ್ತದೆ. ಈ ದಿಕ್ಕಿನಲ್ಲಿ ನಮ್ಮ ಶಿಕ್ಷಕರು ಜವಾಬ್ದಾರಿ ತೋರಬೇಕು. ಇದೊಂದು 'ಯಾಂತ್ರಿಕ' ಕ್ರಿಯೆಯಾಗದೆ, 'ಸೃಜನಶೀಲ ಚಟುವಟಿಕೆ' ಆಗಬೇಕು. ಆಗ ದಿನಪತ್ರಿಕೆಯ ಓದಿನ ರುಚಿಯ ಮೂಲಕ 'ಸಾಹಿತ್ಯ ಪುಸ್ತಕ ಓದುವ ಸಂಸ್ಕೃತಿ'ಗೆ ಬಲ ತುಂಬಲು ಸಾಧ್ಯವಾಗುತ್ತದೆ.

ಹೀಗೆ ದಿನಪತ್ರಿಕೆ ಓದಿಸುವಾಗ ಅಪರಾಧ, ಸಿನಿಮಾ ಮತ್ತು ರಾಜಕೀಯ ಕೆಸರೆರಚಾಟದ ಸುದ್ದಿಗಳನ್ನು ಓದಿಸಬಾರದು. ಮಾಹಿತಿ, ತಿಳಿವಳಿಕೆ ಮತ್ತು ಜಾಗೃತಿ ಮೂಡಿಸುವ ವರದಿ ಮತ್ತು ಬರಹಗಳನ್ನು ಓದಿಸುವ ಪ್ರಬುದ್ಧತೆ ತೋರಬೇಕು. ಕೊಲೆ, ಅತ್ಯಾಚಾರ ಇತ್ಯಾದಿ ಅನಪೇಕ್ಷಿತ ವರದಿಗಳನ್ನು ಓದಿಸಿರುವುದನ್ನು ನಾನು ಗಮನಿಸಿರುವೆ. ಜೊತೆಗೆ ಈ ಬಗ್ಗೆ ಆಕ್ಷೇಪಿಸಿ ಸೂಕ್ತ ತಿಳಿವಳಿಕೆ ಸಹ ನೀಡಿರುವೆ. ಮಕ್ಕಳ ಮನೋಸ್ವಾಸ್ಥ್ಯದ ದೃಷ್ಟಿಯಿಂದ ಈ ಜಾಗ್ರತೆ ಅಪೇಕ್ಷಣೀಯ.

–ಟಿ.ಸತೀಶ್ ಜವರೇಗೌಡ, ಮಂಡ್ಯ

ಮಕ್ಕಳ ಸಾವು, ಕಳವಳಕಾರಿ ಸಂಗತಿ

ಮಾನ್ಯರೆ,

ಮೈಸೂರಿನ, ಸುತ್ತಮುತ್ತ ಜಿಲ್ಲೆಗಳ ಬಡವರ ಆಸ್ಪತ್ರೆ ಎಂದೇ ಕರೆಯಲ್ಪಡುವ ಚೆಲುವಾಂಬ ಮಕ್ಕಳ ಆಸ್ಪತ್ರೆಯಲ್ಲಿ ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಸುಮಾರು 4,566 ಶಿಶುಗಳು ಮರಣ ಹೊಂದಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದೊಂದು ಆತಂಕಕಾರಿ ಬೆಳವಣಿಗೆ. ಅಲ್ಲದೆ ಈ ವರ್ಷದ ಕಳೆದ ಮೂರು ತಿಂಗಳ ಅವಧಿಯಲ್ಲಿ 110 ಮಕ್ಕಳು ಅಸುನೀಗಿರುವುದು ಕಳವಳಕಾರಿ ಸಂಗತಿ.

ಕಳೆದ ವಾರ ಹುಟ್ಟಿದ ಶಿಶು ಒಂದು ಐಸಿಯುನಲ್ಲಿದ್ದರೂ, ಇರುವೆ ಕಚ್ಚಿ ಮಗು ಸಾವನ್ನಪ್ಪಿದೆ ಎಂದು ವೈದ್ಯರು ಹೇಳುವುದು ಆಶ್ಚರ್ಯಕರ ವಿಷಯ. ಪ್ರತಿ ವರ್ಷ ಸರಾಸರಿ 500 ಶಿಶುಗಳು ಮರಣ ಹೊಂದಿರುವ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ ಎಂದೇ ಹೇಳಬೇಕು. ಈ ಆಸ್ಪತ್ರೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜಿಲ್ಲಾ ವ್ಯಾಪ್ತಿಯಲ್ಲೇ ಬರುತ್ತದೆ. ಇದು ಮುಖ್ಯಮಂತ್ರಿಗಳ ಗಮನಕ್ಕೆ ಬಂದಿಲ್ಲವೇ? ಈ ಆಸ್ಪತ್ರೆಗೆ ದಾಖಲಾಗುವ ಗರ್ಭಿಣಿ ಸ್ತ್ರೀಯರು ಅತ್ಯಂತ ಕಡುಬಡವರು, ಕೂಲಿಕಾರರು ಮತ್ತು ತಳ ಸಮುದಾಯದ ಮಹಿಳೆಯರು, ಇಂತಹವರಿಗೆ ಸರ್ಕಾರ ಕನಿಷ್ಠ ವೈದ್ಯಕೀಯ ನೆರವನ್ನು ನೀಡಬೇಕು.

ಕೆಲವೊಂದು ಸಲ ಈ ಆಸ್ಪತ್ರೆಯಲ್ಲಿ ಸೂಕ್ತ ಸ್ಥಳಾವಕಾಶ ಇಲ್ಲದೆ ಬಾಣಂತಿಯರು ನೆಲದ ಮೇಲೆಯೇ ಮಲಗಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ನುರಿತ ವೈದ್ಯಕೀಯ ಸೌಲಭ್ಯಗಳಿಲ್ಲದೇ ಶಿಶುಗಳು ಮರಣ ಹೊಂದುತ್ತಿರಬಹುದು. ಕೆಲವೊಮ್ಮೆ ಸಿಬ್ಬಂದಿ ವರ್ಗದ ನಿರ್ಲಕ್ಷ್ಯ ಧೋರಣೆಯು ಇರಬಹುದು. ಇದರ ಸತ್ಯಾಸತ್ಯತೆ ಸಾರ್ವಜನಿಕರಿಗೆ ತಿಳಿಯಬೇಕು. ಇದರ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಬೇಕು. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ಬೆಂಗಳೂರು ನಗರ ಕರ್ನಾಟಕದ ಉತ್ತರ ಭಾಗಕ್ಕೆ ಆಸರೆ

ಮಾನ್ಯರೆ,

ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೆ ಸರಿ ಸಮಾನಾಗಿ ರಾಜ್ಯದ ಯಾವುದೇ ನಗರಗಳು ಇಲ್ಲ. ರಾಜ್ಯದ ಯಾವುದೇ ನಗರವನ್ನು ಬೆಂಗಳೂರು ನಗರಕ್ಕೆ ಹೋಲಿಕೆ ಮಾಡುವುದು ತಪ್ಪು. ಏಕೆಂದರೆ ಬೆಂಗಳೂರು ಒಂದರಲ್ಲಿ 32 ವಿಧಾನಸಭಾ ಕ್ಷೇತ್ರಗಳು 4 ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. 5 ಮಹಾನಗರ ಪಾಲಿಕೆಯನ್ನೊಳಗೊಂಡ ಗ್ರೇಟರ್ ಬೆಂಗಳೂರು ಇದೆ. ಅಲ್ಲದೇ 1.5 ಕೋಟಿಗೂ ಅಧಿಕ ಜನಸಂಖ್ಯೆ ಇದೆ. ಕರ್ನಾಟಕದ ಉತ್ತರ ಭಾಗದ ಬಹಳಷ್ಟು ಜನಕ್ಕೆ ಉದ್ಯೋಗ ಒದಗಿಸಿದ ಕೀರ್ತಿ ಬೆಂಗಳೂರಿಗೆ ಸಲ್ಲುತ್ತದೆ.

ಒಟ್ಟಿನಲ್ಲಿ ಬೆಂಗಳೂರು ನಗರ ನಿರ್ವಹಣೆ ಮಾಡುವುದು ಕಷ್ಟವಾದರೂ ತ್ವರಿತ ರೀತಿಯಲ್ಲಿ ವ್ಯವಸ್ಥೆ ಸರಿಪಡಿಸಲಾಗುತ್ತಿದೆ. ಬೃಹತ್ ಮಹಾನಗರ ಪಾಲಿಕೆಯಾಗಲು 12 ಲಕ್ಷಕ್ಕೂ ಅಧಿಕ ಜನಸಂಖ್ಯೆ ಇರಬೇಕು. ಎರಡು ವರ್ಷದ ಹಿಂದೆಯಷ್ಟೇ ಹುಬ್ಬಳ್ಳಿ – ಧಾರವಾಡ ಬೇರ್ಪಡಿಸಿ, ಎರಡು ನಗರಗಳನ್ನು ಪ್ರತ್ಯೇಕ ಮಹಾನಗರ ಪಾಲಿಕೆಯನ್ನಾಗಿ ಸರ್ಕಾರ ನಿರ್ಣಯ ತೆಗೆದುಕೊಂಡಿತು.

ಆ ಪ್ರಕ್ರಿಯೆ ರಾಜ್ಯಪಾಲರ ಬಳಿ ಬಾಕಿ ಇದೆ. ಮೊನ್ನೆ ಮೊನ್ನೆಯಷ್ಟೇ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ. ಹುಬ್ಬಳ್ಳಿ ಧಾರವಾಡ ಬೃಹತ್ ಮಹಾನಗರ ಪಾಲಿಕೆ ಮಾಡಲು ಏಕಪಕ್ಷೀಯವಾಗಿ ಠರಾವು ಪಾಸು ಮಾಡಿದ್ದಾರೆ. ರಾಜ್ಯಪಾಲರ ಬಳಿಯಿರುವ ಪೈಲ್ ವಿಲೇವಾರಿಯಾಗದೆ ಬಾಕಿ ಇದೆ. ಇಂತಹ ಸನ್ನಿವೇಶದಲ್ಲಿ ಠರಾವು ಬೇಕಾ. ಇದರಿಂದ ಎರಡು ನಗರಗಳ ಅಭಿವೃದ್ಧಿ ಮತ್ತು ಆಡಳಿತ ವ್ಯವಸ್ಥೆಗೆ ಆಗಾಗ ಸಮಸ್ಯೆಯಾಗುವುದು ಪಕ್ಕ

ಧಾರವಾಡ ಅಥವಾ ಹುಬ್ಬಳ್ಳಿಯವರು ಮೇಯರ್ ಆಗಬೇಕಿತ್ತು ಆಗಿಲ್ಲ ಮತ್ತು ಅದು ಸರಿಯಿಲ್ಲ ಇದು ಸರಿಯಿಲ್ಲ ಎಂದು ಅಭಿವೃದ್ಧಿ ಬಗ್ಗೆ ಆಕ್ಷೇಪಣೆ ದಿನನಿತ್ಯ ನೋಡುವುದು ಕಟ್ಟಿಟ್ಟ ಬುತ್ತಿ. ಅದು ಹೋಗ್ಲಿ ಬೆಂಗಳೂರು ನಗರಕ್ಕೆ ಯಾವುದೇ ನಗರವನ್ನು ಹೋಲಿಕೆ ಮಾಡಬೇಡಿ. 32 ವಿಧಾನಸಭಾ ಕ್ಷೇತ್ರ ಎಲ್ಲಿ 4 ವಿಧಾನಸಭಾ ಕ್ಷೇತ್ರ ಎಲ್ಲಿ ಎಂಬುದನ್ನು ಗಮನಿಸಬೇಕು ಅಷ್ಟೇ.

–ವೀರೇಶ ಧೂಪದಮಠ



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ನರ್ಸಮ್ಮ ಎಂಬ ಎರಡನೇ ಅಮ್ಮ....!

ಮೇ 12 ಸಕಲ ದಾದಿಯರಿಗೂ ಅಂತಾರಾಷ್ಟ್ರೀಯ ದಾದಿಯರ ದಿನದ ಶುಭಾಶಯಗಳು.

ಪ್ರಪಂಚದ ಮೊದಲ ದಾದಿ ಅರ್ಥಾತ್ ನರ್ಸ್ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವಾದ ಮೇ 12ರಂದು ಅಂತಾರಾಷ್ಟ್ರೀಯ ನರ್ಸ್ ದಿನವನ್ನಾಗಿ ಆಚರಿಸಲಾಗುತ್ತದೆ. ಇಂಗ್ಲೆಂಡ್ ದೇಶದ ನೈಟಿಂಗೇಲ್ ಅವರು ಲೇಡಿ ವಿತ್ ದ ಲ್ಯಾಂಪ್ ಎಂದೇ ಖ್ಯಾತರಾಗಿದ್ದವರು. ಗಾಯಗೊಂಡ ಸೈನಿಕರಿಗೆ ರಾತ್ರಿ ವೇಳೆ ದೀಪ ಹಿಡಿದು ಬಂದು ಸೇವೆ ಸಲ್ಲಿಸಿ, ಸ್ವಚ್ಛತೆ ಹಾಗೂ ಕಾಳಜಿಯಿಂದ ಸೇವೆ ಸಲ್ಲಿಸಿದ ಕಾರಣಕ್ಕೆ ಅವರಿಗೆ ಆ ಬಿರುದು ದೊರಕಿದೆ. ಹಾಗೆಯೇ ಅವರ ಸೇವೆಯ ಕಾರಣಕ್ಕೆ ಸೈನಿಕರ ಮರಣದ ಸಂಖ್ಯೆಯಲ್ಲಿ ಇಳಿಮುಖವಾಗಿತ್ತು. ಪ್ರಪಂಚದ ಮೊದಲ ನರ್ಸಿಂಗ್ ಶಾಲೆಯನ್ನು ಸ್ಥಾಪಿಸಿದ ಖ್ಯಾತಿಗೆ ಭಾಜನರಾಗಿರುವ ಅವರು ದಾದಿಯರ ಸೇವೆಗೆ ಒಂದು ಘನತೆ ಹಾಗೂ ಮೌಲ್ಯವನ್ನು ತಂದುಕೊಟ್ಟ ಮಹಾಚೇತನವಾಗಿ ಗುರುತಿಸಿಕೊಂಡಿದ್ದಾರೆ.

ಪರಿಶುದ್ಧತೆಯ ಸಂಕೇತವಾದ ಶ್ವೇತವಸ್ತ್ರ ಧರಿಸಿ, ನಗುಮುಖದಿಂದ, ಕರುಣೆ ತುಂಬಿದ ಕಂಗಳಿಂದ, ಕಾಳಜಿಯುಕ್ತ ಕೈಗಳಿಂದ, ಧೈರ್ಯ ತುಂಬಿದ ಕಾಲ್ನಡಿಗೆಯಿಂದ ತಮ್ಮ ಕಾಯಕವನ್ನು ಮಾಡುವ ನರ್ಸ್‌ಗಳ ಸೇವೆಯು ಭಗವಂತನೂ ಮೆಚ್ಚುವಂತದ್ದಾಗಿದೆ. ವೈದ್ಯರ ಮಾರ್ಗದರ್ಶನವನ್ನು ಶ್ರದ್ಧೆಯಿಂದ ಪಾಲಿಸುವ, ಗಾಯಗಳಿಗೆ ಬೇಸರವಿಲ್ಲದೆ ಡ್ರೆಸ್ ಮಾಡುವ, ಹೊತ್ತಲ್ಲದ ಹೊತ್ತಿನಲ್ಲಿ ಬಿ.ಪಿ., ಶುಗರ್, ಇ.ಸಿ.ಜಿ., ಆಕ್ಸಿಜನ್ ಪ್ರಮಾಣ ಪರೀಕ್ಷಿಸುವ ಸೇವೆಯನ್ನು ನಿರಂತರವಾಗಿ ಒದಗಿಸುವ ಸಂಯಮ ಅವರಿಗಿದೆ. ರಾತ್ರಿ ವೇಳೆ ರೋಗಿಯ ಸಂಬಂಧಿಗಳು ನಿದ್ರಿಸುತ್ತಿದ್ದರೂ, ನಿದ್ರೆಗೆಟ್ಟು ರೋಗಿಗಳಿಗೆ ಸೇವೆ ನೀಡುವ, ಕಾಲಕಾಲಕ್ಕೆ ಔಷಧೋಪಚಾರ ಮಾಡುವ ವಿಶೇಷ ವೃತ್ತಿ ಅವರದ್ದಾಗಿದೆ. ಈ ವೃತ್ತಿಯನ್ನು ಅವರು by chance ಅಥವಾ by choice ಆರಿಸಿಕೊಂಡಿದ್ದರೂ ಸೇವೆ ಒದಗಿಸುವುದು ಮಾತ್ರ ಅವರ ಕರ್ತವ್ಯವಾಗಿರುತ್ತದೆ. ಯಾರೋ ಒಂದಿಬ್ಬರು ತಮ್ಮ ಈ ಪೂಜ್ಯನೀಯವಾದ ವೃತ್ತಿಗೆ ದ್ರೋಹ ಮಾಡಿದರೂ ಎಂದಾಕ್ಷಣ ಎಲ್ಲರೂ ಹಾಗೆಯೇ ಮಾಡುತ್ತಾರೆ ಎಂದು ಹೇಳಲಾಗದು. ರಕ್ತ ಸಂಬಂಧಿಗಳಿಗಿಂತಲೂ ಅಕ್ಕರೆ ತೋರಿಸುವ ದಾದಿಯರ ಪ್ರೀತಿ ಮಾತ್ರ **ವರ್ಣಿಸಲಸದಳ**.

ಪ್ರತಿಯೊಬ್ಬರ ಮಹತ್ವ ಅವರ ಅವಶ್ಯಕತೆ ಇದ್ದಾಗ ಅರಿವಿಗೆ ಬರುತ್ತದೆ. ಅನಾರೋಗ್ಯ ಪೀಡಿತರಾಗಿ ಆಸ್ಪತ್ರೆ ಸೇರಿದಾಗ, ಶಸ್ತ್ರ ಚಿಕಿತ್ಸೆ ಮಾಡುವ, ನೋವು ನಿವಾರಿಸುವ ವೈದ್ಯರು ದೇವರಂತೆ ಕಾಣುತ್ತಾರೆ. ಹಾಗೆಯೇ ವೈದ್ಯರು ತಿಳಿಸುವ ಚಿಕಿತ್ಸೆ ನಂತರ ಉಪಚಾರ ಮಾಡುವುದು ಅಷ್ಟೇ ಮುಖ್ಯವಾಗಿರುತ್ತದೆ ಅಂದರೆ ಚಿಕಿತ್ಸೆಯಷ್ಟೆ ಶುಶ್ರೂಷೆಯು ಅಗತ್ಯವಾಗಿರುತ್ತದೆ. ಹೇಗೆ ತಾಯಿಯೊಬ್ಬಳು ಬೇಸರವಿಲ್ಲದ ತನ್ನ ಮಕ್ಕಳ ಸೇವೆ ಮಾಡುತ್ತಾಳೆಯೋ ಹಾಗೆಯೇ ಆಸ್ಪತ್ರೆಯಲ್ಲಿ ರೋಗಿಯ ಸೇವೆಯನ್ನು ಶುಶ್ರೂಷಕಿಯರು ಮಾಡುವರು. ಹಾಗಾಗಿ ತಾಯಿಯನ್ನು ಮೊದಲ ದಾದಿ ಎಂದು ಕರೆದರೆ, ದಾದಿಯನ್ನು ಎರಡನೆ ತಾಯಿ ಎಂದು ಕರೆಯಬಹುದು. ನರ್ಸ್‌ಗಳನ್ನು ಸಿಸ್ಟರ್, ದಾದಿ, ಶುಶ್ರೂಷಕಿ ಹಾಗೆ ನರಸಮ್ಮ ಎಂದು ಕರೆಯುವುದು ಉಂಟು. ದಾದಿಯರ ನಿಸ್ವಾರ್ಥ ಸೇವೆ ಅನನ್ಯ, ಅಮೋಘ ಹಾಗೂ ಅವರ್ಣನೀಯ. ಇತ್ತೀಚಿಗೆ ಪುರುಷರು ಸಹ ಈ ಅಮೂಲ್ಯ ಸೇವೆಗೆ ಬರುತ್ತಿರುವುದರಿಂದ ಅವರನ್ನು ಮಾತೃ ಹೃದಯಿಗಳು ಎಂದು ಕರೆಯಬಹುದು.

ಆಸ್ಪತ್ರೆಯಲ್ಲಿ ಜನಿಸುವ ಬಹುಪಾಲು ಮಕ್ಕಳು ಹೆತ್ತ ತಾಯಿಯ ಮುಖ ನೋಡುವ ಮುನ್ನ ದಾದಿಯ ಮುಖ ನೋಡುತ್ತಾರೆ, ಹಾಗೆಯೇ ಆಸ್ಪತ್ರೆಯಲ್ಲಿ ನಿಧನ ಹೊಂದುವ ಹಿರಿಯರು ಅಥವಾ ರೋಗಿಗಳು ಕೊನೆಯದಾಗಿ ನೋಡುವ ಮುಖವು ದಾದಿಯರದ್ದೇ ಆಗಿರುತ್ತದೆ. ದಾದಿಯರನ್ನು ಸಿಸ್ಟರ್ ಹೆಸರಿನಲ್ಲಿ ಕರೆಯುವುದೇ ಹೆಚ್ಚು, ಅಂದರೆ ಒಬ್ಬಳು ಸಹೋದರಿಯ ಮಾದರಿಯಲ್ಲಿ ಅವರು ರೋಗಿಗಳ ಜೊತೆಗೆ ಭಾವ ಜೀವಿಯಾಗಿ ವರ್ತಿಸುತ್ತಾರೆ. ಮಮತೆ, ಕರುಣೆ ತುಂಬುತ್ತಾರೆ. ಸಂಬಳಕ್ಕಾಗಿ ಅನೇಕ ವೃತ್ತಿಗಳು ಇವೆ. ಆದರೆ ಎಲ್ಲಾ ವೃತ್ತಿಗಳಲ್ಲಿಯೂ ಸವಾಲಿನ ಕೆಲಸಗಳು ಇರುವುದಿಲ್ಲ. ಆದರೆ ದಾದಿಯರ ವೃತ್ತಿ ಕೇವಲ ಒಂದು ವೃತ್ತಿಯಲ್ಲ, ಅದೊಂದು ಅನಿರ್ವಚನೀಯ ಸೇವೆ. ಎಲ್ಲರೂ ಆಯ್ಕೆ ಮಾಡಿಕೊಳ್ಳಲಾಗದ ಸೇವೆ. ಸೇವಾ ಮನೋಭಾವ, ಶುಶ್ರೂಷೆಯ ಅಗತ್ಯ ಜ್ಞಾನ ಹಾಗೂ ಕೌಶಲ, ಸಂಯಮ, ಧೈರ್ಯ, ಸಮಯ ಪ್ರಜ್ಞೆ, ಸಹಕಾರ ಮನೋಭಾವ, ತ್ಯಾಗ, ನಿಸ್ವಾರ್ಥ...... ಹೀಗೆ ಅನೇಕ ಸಂಗತಿಗಳನ್ನು ಹೊಂದಿರುವ ವಿಶಿಷ್ಟವಾದ ಸೇವಾವೃತ್ತಿ ದಾದಿಯರ ವೃತ್ತಿ.



> **"** ಇಡೀ ವಿಶ್ವವನ್ನೇ ನಲುಗಿಸಿದ ಕೋವಿಡ್–19 ಮಹಾಮಾರಿ ಸಂದರ್ಭದಲ್ಲಿ ದಾದಿಯರ ಸೇವೆಯು ಅನನ್ಯವಾಗಿತ್ತು. ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಸೇವೆ ಮಾಡಬೇಕಾದ ಅನಿವಾರ್ಯತೆ ಉಂಟಾಗಿತ್ತು. ತಮ್ಮ ಮನೆಗೆ ಬಂದರು, ತಮ್ಮ ಕುಟುಂಬ ಸದಸ್ಯರ ಹತ್ತಿರಕ್ಕೆ ಹೋಗಲಾಗದ, ತಮ್ಮ ಮಕ್ಕಳಿಗೆ ಅಪ್ಪುಗೆ ನೀಡಲಾಗದ ಅಸ್ಪೃಶ್ಯರಂತೆ, ಸಮಯಕ್ಕೆ ಸರಿಯಾಗಿ ಊಟ–ತಿಂಡಿ ಮಾಡಲಾಗದ ಪರಿಸ್ಥಿತಿಯಲ್ಲಿ ಸವಾಲಿನ ರೀತಿಯಲ್ಲಿ ಅವರು ಸೇವೆ ಸಲ್ಲಿಸಿರುತ್ತಾರೆ. ಆ ಕಾರಣಕ್ಕೆ ಅವರು ಅಭಿನಂದನಾರ್ಹರು. ಹಾಗೆಯೇ ಕೇರಳಾ ರಾಜ್ಯದಲ್ಲಿ 2018ರಲ್ಲಿ ನಿಫಾ ವೈರಸ್ ಕಾಣಿಸಿಕೊಂಡಾಗ, ರೋಗಿಗೆ ಚಿಕಿತ್ಸೆ ನೀಡುತ್ತಿದ್ದ 28 ವರ್ಷದ ಲಿನಿ ಪುತುಸ್ಸೆರಿ ಎಂಬ ದಾದಿಯು ತಮ್ಮ ಜೀವವನ್ನೇ ಬಲಿದಾನ ಮಾಡಿದ್ದಾರೆ. ಯುದ್ಧಭೂಮಿಯಲ್ಲಿ ಹೋರಾಡುವ ಸೈನಿಕರಿಗಿಂತ ಭಿನ್ನವಾಗಿಲ್ಲ ಇಂತಹ ಕಠಿಣ ಪರಿಸ್ಥಿತಿಗಳು. ಯುದ್ಧಭೂಮಿಯಲ್ಲಿ ಶತ್ರುಗಳ ದಾಳಿಯನ್ನು ಊಹೆ ಮಾಡಬಹುದು. ಆದರೆ ವೈರಸ್‌ಗಳ ದಾಳಿಯನ್ನು ಊಹೆ ಮಾಡುವುದು ಕಷ್ಟ. ಹಾಗಾಗಿ ಇವರ ಸೇವೆಯು ಸಹ ದೇಶ ಸೇವೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

'ಅರಿವು' ಅಂಕಣದ 50ನೇ ಲೇಖನ

ತಾಯಿಯೊಬ್ಬಳು ಒಮ್ಮೆಗೆ ಎರಡು ಮೂರು ಮಕ್ಕಳನ್ನು ಕಾಳಜಿ ಮಾಡಬಹುದು. ಆದರೆ ಒಂದಿಡೀ ವಾರ್ಡಿನ ಹತ್ತಾರು ರೋಗಿಗಳನ್ನು ನಿರಂತರವಾಗಿ ಕಾಳಜಿ ಮಾಡುವ ಜವಾಬ್ದಾರಿಯು ಸಾಮಾನ್ಯವಾದುದಲ್ಲ. ಅದಕ್ಕೆ ಒಂದು ವಿಶೇಷ ಶಕ್ತಿಯೇ ಬೇಕು. ಅಂತಹ ಸ್ತ್ರೀಶಕ್ತಿ ದಾದಿಯರಿಗೆ ಮಾತ್ರ ಸಾಧ್ಯ ಎನ್ನಬಹುದು. ಪ್ರತಿಯೊಂದು ವೃತ್ತಿಯಲ್ಲಿಯೂ ಸವಾಲಿನ ಕೆಲಸ ಎಂಬುದು ಇರುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ದಾದಿಯರ ಸೇವೆಯು ಒಬ್ಬರ ಸಾವು–ಬದುಕಿನ ಹೋರಾಟ ನಿಭಾಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮನೆಯ ಸದಸ್ಯರಲ್ಲಿ ಒಬ್ಬರು ರೋಗಿಯಾಗಿದ್ದು, ಅವರು ಮೂರ್‍ನಾಲ್ಕು ದಿನಗಳಲ್ಲಿ ಗುಣಮುಖರಾಗದೇ ಇದ್ದರೆ, ಮನೆಯ ಸದಸ್ಯರು ಅವರ ಸೇವೆ ಮಾಡಿದ ನಂತರ ಊಟತಿಂಡಿ ಮಾಡಲು ಬೇಸರಿಸಿಕೊಳ್ಳುತ್ತಾರೆ. ಆದರೆ ದಾದಿಯರು ಹತ್ತಾರು ರೋಗಿಗಳ ಗಾಯಗಳಿಗೆ ಹಚ್ಚುವ ಮುಲಾಮು, ಡ್ರೆಸಿಂಗ್, ಟಿಂಚರ್ ವಾಸನೆ ಇತ್ಯಾದಿಗಳ ನಡುವೆ ಬಿಡುವಿನ ವೇಳೆಯಲ್ಲಿ ಊಟ–ತಿಂಡಿ ಮಾಡಬೇಕೆಂದರೆ ಅವರ ಮನಸ್ಥಿತಿ ಹೇಗಿರಬೇಡ. ಅದನ್ನೇ ತ್ಯಾಗ ಎಂದು ಕರೆಯುವುದು.

ದಾದಿಯರ ದಿನಚರಿ ಒಂದೇ ರೀತಿ ಇರುತ್ತದೆ ಎಂದು ಹೇಳಲಾಗದು. ಅವರಿಗೆ ನಿತ್ಯವೂ ಸಾಮಾನ್ಯ ಪಾಳಿ (ಶಿಫ್ಟ್) ಇರುವುದಿಲ್ಲ. ಕೆಲವು ದಿನಗಳು ರಾತ್ರಿ ಪಾಳಿಯಲ್ಲಿಯೂ ಕೆಲಸ ಮಾಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಮನೆಯ ಸದಸ್ಯರಿಗೂ ಅಗತ್ಯ ಸಿದ್ಧತೆ ಮಾಡಿ, ಅವರ ಮಕ್ಕಳು, ಮನೆಯ ಹಿರಿಯರಿಗೆ ಸೇವೆ ಒದಗಿಸಿ ಆಸ್ಪತ್ರೆಗೆ ಬಂದು ತಮ್ಮ ಕರ್ತವ್ಯ ನಿರ್ವಹಿಸಬೇಕಾದರೆ ಎಂತಹ ಗಟ್ಟಿ ಮನಸ್ಥಿತಿ ಇರಬೇಕು ಎಂಬುದು ದಾದಿ ಸೇವೆ ಮಾಡಿರುವವರಿಗೆ ತಿಳಿದಿರುತ್ತದೆ. ಅದರಿಂದ ಕೆಲವರಿಗೆ ಒತ್ತಡ ನಿರ್ಮಾಣವಾಗುತ್ತದೆ. ಅಂತಹ ಸಂದರ್ಭದಲ್ಲಿಯೇ ರೋಗಿಗಳು ಕಿರಿಕಿರಿ ಮಾಡಿದಾಗ, ವೈದ್ಯರು ವಿನಾಕಾರಣ ಅವರನ್ನು ದೂಷಿಸಿದಾಗ ದಾದಿಯರು ರೇಗುವುದು ಸಹ ಉಂಟು. ಎಲ್ಲರೂ ಹೀಗೆ ಇರುತ್ತಾರೆ ಎಂದು ಹೇಳಲಾಗದು. ಬಹುತೇಕರು ಸಹನಾ ಮೂರ್ತಿ ದಾದಿಯರು ಇರುತ್ತಾರೆ. ಭಾರತೀಯ ಮಹಿಳೆಗೆ ಸಂಯಮ ಕೊಂಚ ಹೆಚ್ಚು, ಆ ಕಾರಣಕ್ಕೆ ವಿದೇಶಗಳಲ್ಲಿ ಭಾರತೀಯ ದಾದಿಯರಿಗೆ ಬೇಡಿಕೆ ಹೆಚ್ಚು. ಫಿಲಿಪೈನ್ಸ್ ದೇಶ ಬಿಟ್ಟರೆ ಭಾರತೀಯ ದಾದಿಯರು ಅತಿಹೆಚ್ಚಿನ ಸಂಖ್ಯೆಯಲ್ಲಿ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದಕ್ಕೆ ಭಾರತೀಯರಾದ ನಾವುಗಳು ಸಹ ಹೆಮ್ಮೆ ಪಡಬೇಕು.

ಇಡೀ ವಿಶ್ವವನ್ನೇ ನಲುಗಿಸಿದ ಕೋವಿಡ್–19 ಮಹಾಮಾರಿ ಸಂದರ್ಭದಲ್ಲಿ ದಾದಿಯರ ಸೇವೆಯು ಅನನ್ಯವಾಗಿತ್ತು. ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಸೇವೆ ಮಾಡಬೇಕಾದ ಅನಿವಾರ್ಯತೆ ಉಂಟಾಗಿತ್ತು. ತಮ್ಮ ಮನೆಗೆ ಬಂದರು, ತಮ್ಮ ಕುಟುಂಬ ಸದಸ್ಯರ ಹತ್ತಿರಕ್ಕೆ ಹೋಗಲಾಗದ, ತಮ್ಮ ಮಕ್ಕಳಿಗೆ ಅಪ್ಪುಗೆ ನೀಡಲಾಗದ **ಅಸ್ಪೃಶ್ಯರಂತೆ,** ಸಮಯಕ್ಕೆ ಸರಿಯಾಗಿ ಊಟ–ತಿಂಡಿ ಮಾಡಲಾಗದ ಪರಿಸ್ಥಿತಿಯಲ್ಲಿ ಸವಾಲಿನ ರೀತಿಯಲ್ಲಿ ಅವರು ಸೇವೆ ಸಲ್ಲಿಸಿರುತ್ತಾರೆ. ಆ ಕಾರಣಕ್ಕೆ ಅವರು ಅಭಿನಂದನಾರ್ಹರು. ಹಾಗೆಯೇ ಕೇರಳಾ ರಾಜ್ಯದಲ್ಲಿ 2018ರಲ್ಲಿ ನಿಫಾ ವೈರಸ್ ಕಾಣಿಸಿಕೊಂಡಾಗ, ರೋಗಿಗೆ ಚಿಕಿತ್ಸೆ ನೀಡುತ್ತಿದ್ದ 28 ವರ್ಷದ ಲಿನಿ ಪುತುಸ್ಸೆರಿ ಎಂಬ ದಾದಿಯು ತಮ್ಮ ಜೀವವನ್ನೇ ಬಲಿದಾನ ಮಾಡಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಗಳು ಯುದ್ಧಭೂಮಿಯಲ್ಲಿ ಹೋರಾಡುವ ಸೈನಿಕರಿಗಿಂತ ಭಿನ್ನವಾಗಿಲ್ಲ. ಯುದ್ಧಭೂಮಿಯಲ್ಲಿ ಶತ್ರುಗಳ ದಾಳಿಯನ್ನು ಊಹೆ ಮಾಡಬಹುದು, ಆದರೆ ವೈರಸ್‌ಗಳ ದಾಳಿಯನ್ನು ಊಹೆ ಮಾಡುವುದು ಕಷ್ಟ. ಹಾಗಾಗಿ ಇವರ ಸೇವೆಯು ಸಹ ದೇಶ ಸೇವೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಇಂದಿನ ತಂತ್ರಜ್ಞಾನ ಯುಗದಲ್ಲಿ ಎಐ ಎಂಬುದು ಬಹಳ ಸದ್ದು ಮಾಡುತ್ತಿದೆ. ಎಐ ಎಂಬುದು ಅನೇಕ ವೃತ್ತಿಗಳಿಗೆ ಕಂಟಕವಾಗುತ್ತಿದೆ. ನೂರು ಜನರು ಮಾಡುವ ಕೆಲಸವನ್ನು ಎಐ ಸಹಾಯದಿಂದ ಒಬ್ಬರೇ ನಿರ್ವಹಿಸಬಹುದು ಎಂಬಾ ಊಹಾಪೋಹಗಳು ಹರಿದಾಡುತ್ತಿವೆ. ಹಾಗೆಯೇ ಕೆಲವು ಕಂಪನಿಗಳು ಉದ್ಯೋಗಿಗಳ ಸಂಖ್ಯೆಯನ್ನು ಕಡಿತಗೊಳಿಸಿದ್ದಾವೆ ಕೂಡ. ಆದರೆ ಬದಲಿಸಲಾಗದ ಕೆಲವೇ ವೃತ್ತಿಗಳಲ್ಲಿ ದಾದಿಯರ ವೃತ್ತಿಯು ಒಂದು ಎಂಬುದು ವಿಶೇಷ. ಎಐ ಸಹಾಯದಿಂದ ನರ್ಸ್‌ಗಳ ಸೇವೆಯನ್ನು ಒದಗಿಸಲಾಗದು. ಇಲ್ಲಿ ಯಂತ್ರ ಹಾಗೂ ತಂತ್ರಜ್ಞಾನವು ಮನುಷ್ಯನ ಸೇವೆಯನ್ನು ಒದಗಿಸಲಾಗದು. ವೈದ್ಯರು ನೀಡುವ ಔಷಧದಷ್ಟೇ ದಾದಿಯರು ಉಪಚಾರದ ವೇಳೆ ಆಡುವ ಭರವಸೆಯ ಮಾತುಗಳು ಔಷಧದಂತೆ ಕಾರ್ಯನಿರ್ವಹಿಸುತ್ತವೆ. ಹಾಗಾಗಿ ಬದಲಿಸಲಾಗದ ವಿಶೇಷ ವೃತ್ತಿ ದಾದಿಯರ ವೃತ್ತಿ ಎಂಬುದನ್ನು ಅರಿತು ದಾದಿಯರು ಹೆಮ್ಮೆ ಪಡಬೇಕಿದೆ.

ಭಾರತೀಯರ ಮನಸ್ಥಿತಿಯ ಒಂದು ವಿಡಂಬನೆ ಇಲ್ಲಿ ಉಲ್ಲೇಖನೀಯ. ಆಸ್ಪತ್ರೆಯಲ್ಲಿ ಜನಿಸಿದ ಮಗು ಹೆಣ್ಣು ಎಂದು ಗೊತ್ತಾದಾಗ ಬೇಸರಿಸಿಕೊಳ್ಳುತ್ತಾರೆ. ಮಗುವು ಗಂಡೇ ಆಗಲಿ, ಹೆಣ್ಣೇ ಆಗಲಿ ಆ ಮಗುವಿನ ಶುಶ್ರೂಷೆ ಹಾಗೂ ಆರೈಕೆ ಮಾಡುವುದು ಮಾತ್ರ ದಾದಿಯರೆ ಎಂಬುದು ವಿಡಂಬನೆ ಅಲ್ಲವೇ? ಲಿಂಗ ತಾರತಮ್ಯ ಮಾಡದೆ ತಮಗಾದ ಹೆಣ್ಣು ಮಗುವಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡಿಸಿದರೆ ಹೆಣ್ಣು ಕೇವಲ Tension ಅಲ್ಲ Ten sonಗೆ ಸಮ ಎಂದು ಅರಿವಾಗುತ್ತದೆ. ವೃತ್ತಿ ಯಾವುದೇ ಇರಲಿ ಪ್ರತಿಯೊಂದು ವೃತ್ತಿಗೂ ಅದರದೇ ಆದ ಮೌಲ್ಯ, ಗೌರವ ಹಾಗೂ ಘನತೆ ಇರುತ್ತದೆ. ಅದನ್ನು ಅರಿತು ನಡೆಯುವುದು ಸೂಕ್ತ. ಆಸ್ಪತ್ರೆಗೆ ಹೋದಾಗ ಬಾಯಲ್ಲಿ ಸಿಸ್ಟರ್ ಅಂತಾ ಕರೆದರಷ್ಟೇ ಸಾಲದು, ಅವರನ್ನು ತಮ್ಮ ಸಹೋದರಿಯಂತೆ ಗೌರವಿಸಿ ಆದರಿಸಿದರೆ ಅವರಿಗೆ ಅಮಿತಾನಂದವಾಗುತ್ತದೆ. ಎಲ್ಲಾ ದಾದಿಯರ ಬದುಕು ಹಸನಾಗಲಿ ಎಂದು ಹಾರೈಸುತ್ತೇನೆ.

ಹೂರಣ: **ರೋಗಕ್ಕೆ ಮದ್ದು ಮಾತ್ರ ಪರಿಹಾರವಲ್ಲ, ದಾದಿಯರ ಮಾತುಗಳು ಸಹ ಒಂದು ಮದ್ದು.**

ಚೆಸ್ಕಾಂ ನಿವೃತ್ತ ಎಂಡಿ ಮುನಿಗೋಪಾಲರಾಜು ಸೇರಿ ಇಬ್ಬರಿಗೆ 'ಕಾಯಕ ಸೇವಾ' ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅನಿಕೇತನ ಸೇವಾ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲರಾಜು ಹಾಗೂ ಪುಟ ವಿನ್ಯಾಸಕ ರಂಗು ಸಂದೇಶ್ ಅವರಿಗೆ 'ಕಾಯಕ ಸೇವಾ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮೇ3(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಅನಿಕೇತನ ಸೇವಾ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲ ರಾಜು ಮತ್ತು ಪುಟ ವಿನ್ಯಾಸಕ ರಂಗು ಸಂದೇಶ್ ಅವರಿಗೆ 'ಕಾಯಕ ಸೇವಾ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ದೀಪಕ್ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಪ್ರಶಸ್ತಿ ನೀಡಿ ಅಭಿನಂದಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಅನಿಕೇತನ ಸೇವಾ ಟ್ರಸ್ಟ್‌ನಿಂದ ಪ್ರಶಸ್ತಿಗೆ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡಿದ್ದಾರೆ. ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್ ಒಳ್ಳೆ ಕೆಲಸವನ್ನು ಮಾಡುವವರನ್ನು ಗುರುತಿಸಿದ್ದಾರೆ ಎಂದರು.

ಮುನಿಗೋಪಾಲರಾಜು ಅವರ ಕೆಲಸವನ್ನು ತಾಂತ್ರಿಕವಾಗಿ ಅರಿತುಕೊಳ್ಳಬೇಕು. ಅವರು ಮೈಸೂರಿನಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. 60 ಸ್ಟೇಷನ್‌ಗಳನ್ನು ನಿರ್ಮಿಸಿದ್ದಾರೆ. ಮೈಸೂರು ದಸರಾ ದೀಪಾಲಂಕಾರಕ್ಕೆ ಹೆಚ್ಚಿನ ಮೆರಗು ಬರುವಂತೆ ನೋಡಿಕೊಂಡು ಎಲ್ಲರ ಮೆಚ್ಚುಗೆ ಗಳಿಸಿ ತಮ್ಮ ಹೆಗ್ಗುರುತು ಮೂಡಿಸಿದ್ದಾರೆ. ಸರ್ಕಾರ ಇವರನ್ನು ಯಾವುದಾದರೂ ಸಲಹಾ ಸಮಿತಿಗೆ ನೇಮಕ ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತೇನೆ ಎಂದರು.

ರಂಗು ಸಂದೇಶ್ ತಮ್ಮ ಉತ್ತಮ ಪುಟ ವಿನ್ಯಾಸದ ಮೂಲಕವೇ ಗುರುತಿಸಿಕೊಂಡಿದ್ದು, ರಾಜ್ಯ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಯಾವುದೇ ಆಡಂಬರವಿಲ್ಲದೇ ಗೌಪ್ಯವಾಗಿ ಕೆಲಸ ಮಾಡಿ ಗುರುತಿಸಿಕೊಂಡಿದ್ದಾರೆ. ನೈಜ್ಯ ಪತ್ರಕರ್ತರಿಗೆ ಸವಾಲುಗಳಿವೆ. ಈ ಸವಾಲುಗಳ ನಡುವೆ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಮೂಗೂರು ನಂಜುಂಡಸ್ವಾಮಿ, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಜೂಜಾಡುತ್ತಿದ್ದ 7 ಮಂದಿ ಸೆರೆ: 40,980 ರೂ. ವಶ

ಮೈಸೂರು, ಮೇ 3(ಎಂಕೆ)–ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ವರುಣಾ ಠಾಣೆ ಪೊಲೀಸರು 7 ಮಂದಿಯನ್ನು ಬಂಧಿಸಿ, ಪಣಕ್ಕಿಟ್ಟಿದ್ದ 40,980 ರೂ. ನಗದು ಹಣ ವಶಕ್ಕೆ ಪಡೆದಿದ್ದಾರೆ. ಮೈಸೂರು ತಾಲೂಕಿನ ವಾಜಮಂಗಲ ಗ್ರಾಮದ ಪ್ರಸನ್ನ ಕುಮಾರ್, ನಾರಾಯಣ ನಾಯಕ, ಮಧು, ನವೀನ, ಮಂಜುನಾಥ, ಮನು, ಚಂದ್ರು ಬಂಧಿತ ಆರೋಪಿಗಳು. ಮೇ 1ರಂದು ಮಧ್ಯಾಹ್ನ 4 ಗಂಟೆ ಸುಮಾರಿಗೆ ಗ್ರಾಮದ ಮಾವಿನ ತೋಟದಲ್ಲಿ ಹಣ ಪಣಕ್ಕಿಟ್ಟು ಇಸ್ಪೀಟ್ ಜೂಜಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು, ಜೂಜಾಡುತ್ತಿದ್ದ 7 ಮಂದಿಯನ್ನು ಬಂಧಿಸಿ, ಪಣಕ್ಕಿಟ್ಟಿದ್ದ ಹಣವನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ವರುಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂಜು ಅಡ್ಡೆ ಮೇಲೆ ದಾಳಿ: ಮೂವರ ಸೆರೆ, 12 ಸಾವಿರ ವಶ

ಮೈಸೂರು, ಮೇ 3(ಎಂಕೆ)– ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು 3 ಮಂದಿಯನ್ನು ಬಂಧಿಸಿ, ಪಣಕ್ಕಿಟ್ಟಿದ್ದ 12,030 ರೂ. ನಗದು ಹಣ ವಶಕ್ಕೆ ಪಡೆದಿದ್ದಾರೆ. ಮೈಸೂರು ತಾಲೂಕಿನ ತಳೂರು ಗ್ರಾಮದ ಮಂಜುನಾಥಸ್ವಾಮಿ, ಕುಮಾರ ಮತ್ತು ಎಂ.ಕುಮಾರ ಬಂಧಿತರು. ಮೇ 2ರಂದು ಮಧ್ಯಾಹ್ನದ ವೇಳೆ ಗ್ರಾಮದ ಲಿಂಗರಾಜು ಎಂಬುವರ ಮನೆಯ ಹಿಂಭಾಗದ ಕೆರೆ ಏರಿ ಮೇಲಿನ ಮರದ ಕೆಳಗೆ 7 ಮಂದಿ ಹಣ ಪಣಕ್ಕಿಟ್ಟು ಅಂದರ್–ಬಾಹರ್ ಇಸ್ಪೀಟ್ ಜೂಜಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ನಾಲ್ವರು ಪರಾರಿಯಾಗಿದ್ದು, ಮೂವರು ಸಿಕ್ಕಿಬಿದ್ದಿದ್ದಾರೆ. ಈ ವೇಳೆ ಬಂಧಿತರಿಂದ ಪಣಕ್ಕಿಟ್ಟಿದ್ದ 12,030 ರೂ. ವಶಕ್ಕೆ ಪಡೆದು, 7 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಮಾರಾಟಕ್ಕೆ ಇದೆ
3/4 ಮುಕ್ಕಾಲು ಎಕರೆ ಜಮೀನು ಮಾರಾಟಕ್ಕೆ ಇದೆ, ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ, ಶ್ರೀರಂಗಪಟ್ಟಣ ಟೋಲ್ ಬಳಿ, ಸಂಪರ್ಕಿಸಿ:
7899871415
(ಮಾಲೀಕರು)

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಸೇತುವೆ ಮತ್ತು ಕಲ್ಲಹಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC
ಸಂಬಳ : 18000 (26 days)
ESI, PF ಸೌಲಭ್ಯವಿರುತ್ತದೆ.
9620667819
9620777819

SITE FOR SALE
ವಿಜಯನಗರ 4ನೇ ಹಂತ ಪಕ್ಕದ "ಶೌರ್ಯ ಲೇಔಟ್"
30x36 North Face ಸೈಟ್
ಬೆಲೆ: 48 ಲಕ್ಷ
Mob: 9886048471

ಬೇಕಾಗಿದ್ದಾರೆ
ಕಂಪ್ಯೂಟರ್ ಉಪಯೋಗಿಸಲು ಬರುವವರು ಹಾಗೂ ವಿಡಿಯೋ ಎಡಿಟಿಂಗ್ ತಿಳಿದಿರುವ ಯುವಕ ಹಾಗೂ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ
9110455297| 9591557126

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

Nypunya School of Excellence MYSURU DATTAGALLI and R.T.NAGAR
ಬೇಕಾಗಿದ್ದಾರೆ
ಶಾಲಾ ವಾಹನ ಮತ್ತು ಚೇರ್‌ಮೆನ್ ಕಾರು ಚಲಾಯಿಸಲು ಬೆಂಗಳೂರು ಮಾರ್ಗಗಳ ಪರಿಚಯವಿರುವ, ಆಟೋಮೇಟಿಕ್ ಕಾರು ಓಡಿಸಲು ಬಲ್ಲ, ಹೆವಿ ಲೈಸನ್ಸ್ ಉಳ್ಳ, ನಜರ್‌ಬಾದ್, ಹೆಬ್ಬಾಳ, ಸಾಹುಕಾರ ಹುಂಡಿ, ಜೆ.ಪಿ.ನಗರ ವ್ಯಾಪ್ತಿಯ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ
96069 59451

ಸೈಟು ಮಾರಾಟಕ್ಕಿದೆ
30x40 E/F 38 ಲಕ್ಷ ಸುವರ್ಣನಗರ, ಬೋಗಾದಿ
20x42 East North Corner,. 55 ಲಕ್ಷ ವಿಜಯನಗರ 4ನೇ ಹಂತ ಪಕ್ಕ, ಮೈಸೂರು
9845765573
9986856999

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿಯ ಪ್ರೀತಿ ಗ್ರಾನೈಟ್ ಮತ್ತು ರಾಣಿ ಮದ್ರಾಸ್‌ನಲ್ಲಿ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 20500 + W/o(8 hrs)
9880727819
9620667819

ಬೇಕಾಗಿದ್ದಾರೆ
ಮೈಸೂರಿನ ಮನೆಯಲ್ಲಿ ಅಡುಗೆ ಮತ್ತು ಮನೆ ಕೆಲಸಕ್ಕೆ ಆರೋಗ್ಯವಂತ ಪುರುಷರು ಬೇಕಾಗಿದ್ದಾರೆ. ಉತ್ತಮ ಸಂಬಳ, ಆಹಾರ, ಬಟ್ಟೆ, ವೈದ್ಯಕೀಯ ಆರೈಕೆ ಮತ್ತು ವಸತಿ ಒದಗಿಸಲಾಗುವುದು. ವಯಸ್ಸು, ಭಾಷೆ, ಜಾತಿ ಧರ್ಮ ವೈವಾಹಿಕ ಸ್ಥಿತಿ ಯಾವುದೇ ನಿರ್ಬಂಧವಿಲ್ಲ, ಮಾಲೀಕರನ್ನು ಸಂಪರ್ಕಿಸಿ
9449008336

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279



Solar Water Heater SALES & SERVICE BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಹೆಂಗಸರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ನಜರ್‌ಬಾದ್, ಮೈಸೂರು–10
Ph: 9739816440

ಬೇಕಾಗಿದ್ದಾರೆ
ಧಾರ್ಮಿಕ ಟ್ರಸ್ಟ್‌ಗೆ 300+ ಅರೆಕಾಲಿಕ (part time) SSLC/PUC/ ಪದವೀಧರರು Work From Home ವೇತನ: ಕಾರ್ಯಕ್ಷಮತೆ ಆಧಾರಿತ ಗೆ ಅರ್ಜಿಯನ್ನು ಕಳುಹಿಸಿ
gautamatrst@gmail.com
(ವಿವರಗಳು ಇಮೇಲ್ ಮೂಲಕ)

For sale ರಿಂಗ್ ರಸ್ತೆ ಸಮೀಪ
ವಿಜಯನಗರ 30x40 - 1.2 Cr.
ವಸಂತನಗರ 40x75 - 1.24 Cr.
ಜೆ.ಪಿ. ನಗರ 50x80 - 2.5 Cr. / 40x60 - 1.12 Cr.
ದಟ್ಟಗಳ್ಳಿ–ರಾಯಲ್ ಓಕ್ ಸಿಗ್ನಲ್ 1.15 Cr.
10–20 ಗುಂಟೆ ಲ್ಯಾಂಡ್ 6–8 ಲಕ್ಷ ಗುಂಟೆಗೆ (ಸಿಟಿಗೆ ಕೇವಲ 12 ರಿಂದ 15 ಕಿ.ಮೀ).
ವಿಜಯನಗರ, ಬಸವನಳ್ಳಿ 30x40 - 64 ಲಕ್ಷ.
Call: 8123075038
BROKERS EXCUSE

HOUSE FOR SALE
Independent duplex house, 3 BHK with Built-up area 1440 sft., in Kergally, Mysuru, near Christ Public School.
BROKERS EXCUSE
9810844717

ಬೇಕಾಗಿದ್ದಾರೆ
ಗ್ಯಾಸ್ ಏಜನ್ಸಿಯಲ್ಲಿ ಸಿಲಿಂಡರ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಸರಕು ಸಾಗಾಣೆ ಮಾಡುವ ಆಟೋ/ಮಿನಿ ವ್ಯಾನ್ ಇದ್ದವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ
7975409456
9686202867

ಬೇಕಾಗಿದ್ದಾರೆ
ಹೋಟೆಲ್ ಉದ್ಯಮದಲ್ಲಿ ಹೌಸ್‌ಕೀಪಿಂಗ್ ಮತ್ತು ವೇಟರ್ ಅನುಭವಿ ಮಹಿಳೆಯರು ಮತ್ತು ಪುರುಷರಿಗೆ ಅವಕಾಶ, ಹೋಟೆಲ್ ಗೋಲ್ಡನ್ ಕ್ಯಾಸಲ್, ನಂ. 3615/1 28/1 ಹಳೆಯ ಆರ್.ಎಂ. ಎದುರು, ಟಿವಿಎಸ್ ಪಕ್ಕ, ಸಯ್ಯಾಜಿ ರಾವ್ ರಸ್ತೆ, ಮೈಸೂರು–570021,
ಇ–ಮೇಲ್: gemysuru@gmail.com
9845293146
9108011851

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ತಕ್ಷಣ ಬೇಕಾಗಿದ್ದಾರೆ
ಕೆಂಪಮ್ಮ ಚೌಡೇಗೌಡ ಪೆಟ್ರೋಲ್ ಬಂಕ್
ಬಂಡಿಪಾಳ್ಯ ಯಾರ್ಡ್, ಎಪಿಎಂಸಿ ಹಿಂಭಾಗ, ಹೊಸಹುಂಡಿ ಗೇಟ್, ಮೈಸೂರು
2 pm to 10 pm, Salary: 13,000
9900339977

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವೃದ್ಧರ ವಿವಾಹ ವೇದಿಕೆ
51 ವರ್ಷ ಮೇಲ್ಪಟ್ಟಿರುವ ವಿಧವೆ, ವಿಧುರ, ವಿಚ್ಛೇದಿತ, ಅವಿವಾಹಿತ ಆರೋಗ್ಯವಂತರಿಗೆ ವಿವಾಹ ಮಾಡಿಕೊಡಲಾಗುವುದು. ಪುರುಷರಿಗೆ ತಿಂಗಳಿಗೆ ರೂ.20,000/– ವರಮಾನ ಇರಬೇಕು.
ಆಸಕ್ತರು ಸಂಪರ್ಕಿಸಿ:
ನೇತಾಜಿ ವೃದ್ಧಾಶ್ರಮ ನಂ.72/7, ಕಾಡೆಹಳ್ಳಿ ರಸ್ತೆ, ಮಸಣಾಪುರ, ಚಾಮರಾಜ ನಗರ – 571313
9980738384

ಗಾರೆ ಕೆಲಸಕ್ಕೆ ಬೇಕಾಗಿದ್ದಾರೆ (ಮೇಸನ್)
ಒಂದು ವಾರದ ಕೆಲಸ
ಕೂಲಿ ದಿನಕ್ಕೆ ರೂ.1500/–
ಸ್ಥಳ : ಪಿರಿಯಾಪಟ್ಟಣ
8618221383

ನಮ್ಮ ಸಂಸ್ಥೆಗೆ ಬೇಕಾಗಿದ್ದಾರೆ
ಸಮೂಹ ಸೇವಾ ಮನೋಭಾವದ ಕನ್ನಡ ಮತ್ತು ಇಂಗ್ಲೀಷ್ ಕಂಪ್ಯೂಟರ್ ಜ್ಞಾನವುಳ್ಳ ವಿದ್ಯಾವಂತ ಯುವತಿಯರು ನಮ್ಮ ಸಂಸ್ಥೆಗೆ ಕೆಲಸ ಮಾಡಲು ಬೇಕಾಗಿದ್ದಾರೆ.
ನೇರ ಸಂಪರ್ಕಿಸಿ. ಆಕರ್ಷಕ ಸಂಬಳ.
6361740552, 9449408551

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಆಡಿಟರ್ ಆಫೀಸ್‌ನಲ್ಲಿ ಕೆಲಸಕ್ಕೆ ಬಿ.ಕಾಂ. ಆಗಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಕುವೆಂಪುನಗರ ಸುತ್ತಮುತ್ತಲಿನವರಿಗೆ ಆದ್ಯತೆ.
Mob: 9880692485

Urgent MUDA Auction SITE FOR SALE
30x40 North face, Vijayanagar 4th Stage, 2nd Phase, close to Ring Road and 80 feet Road. Serious buyers call me, time passers please stay away.
Call: 9731310243

ಬೇಕಾಗಿದ್ದಾರೆ
ಟೈಲ್ಸ್ ಶೋರೂಂನಲ್ಲಿ ಪ್ರತಿದಿನ ಟೈಲ್ಸ್ ವಿಡೀಯೋ ಮಾಡಿ, ಸೋಷಿಯಲ್ ಮೀಡಿಯಾಗೆ ಅಪ್ಲೋಡ್ ಮಾಡಲು (ಕಂಟೆಂಟ್ ಕ್ರಿಯೇಟಿವ್ ವಿಡಿಯೋ) / ಹುಡುಗಿಯರು ಮಾತ್ರ, ದಟ್ಟಗಳ್ಳಿ, ನೇತಾಜಿ ಸರ್ಕಲ್, ಮೈಸೂರು
Mob: 9353756586

WANTED
We need a Male Staff for 2 months only for our Ice Cream shop having experience in preparing Role Ice Cream, Stone Ice Cream, Sundays, Sandwiches, Juices / Milk Shakes etc. For May and June only. Please call:
Mob: 8970773012

ವಾಣಿಜ್ಯ ನಿವೇಶನಗಳು ಮಾರಾಟಕ್ಕಿದೆ
1) 45 X 60 ಉತ್ತರ ಮುಖ, ಆದಿಚುಂಚನಗಿರಿ 80 ಅಡಿ ಮುಖ್ಯರಸ್ತೆ, ಕುವೆಂಪುನಗರ 'ಎನ್' ಬ್ಲಾಕ್, ಬಸ್ ಡಿಪೋ ಹತ್ತಿರ, ಮೈಸೂರು
2) 50 X 80 ಪಶ್ಚಿಮ ಮುಖ, ಆದಿಚುಂಚನಗಿರಿ 80 ಅಡಿ ರಸ್ತೆ, KHB 5ನೇ ಫೇಸ್, RMP ಕ್ವಾರ್ಟರ್ಸ್ ಹತ್ತಿರ, ಕುವೆಂಪುನಗರ, ಮೈಸೂರು
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9448166798

JOB OPENINGS AT BANK
Required Experience and Fresher Candidates
For Personal loan dept.
Qualification : 2nd PUC
Salary + Incentive
Location : Mysuru
9035230231

ಹಳೆಯ ಮನೆ ಮಾರಾಟಕ್ಕಿದೆ
15x50 ಪೂರ್ವ ದಿಕ್ಕು, ವಿದ್ಯಾರಣ್ಯಪುರಂ, 24ನೇ ಕ್ರಾಸ್.
Mob: 6366556050

WANTED
Teachcing staff for reputed institution (Experience preferred) for all subjects. Transport facilities available. Drop your resume through Whatsapp. Contact:
8971577685, 9980631121

ಮಾಂಸದ ಅಂಗಡಿ ಬಾಡಿಗೆಗೆ ದೊರೆಯುತ್ತದೆ
ಹೊಸ ಹುಂಡಿ ಗೇಟ್, ಬಂಡಿಪಾಳ್ಯ ಎಪಿಎಂಸಿ ಹಿಂಭಾಗ, ಮೈಸೂರು.
9900339977, 9448474997

ತಕ್ಷಣ ಬೇಕಾಗಿದ್ದಾರೆ
ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್‌ಗಳು.
ಸ್ಥಳ: 1) ವಿದ್ಯಾರಣ್ಯಪುರಂ, (2) ಮಂಡಕಳ್ಳಿ, (3) ಹೊಸಹಳ್ಳಿ (ಕೆಆರ್‌ಎಸ್ ರಸ್ತೆ). ಊಟ / ವಸತಿ / ESI / PF / Salary.
9686422400, 9242406261

ಖರೀದಿಗೆ ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ. ಒಳಗೆ 1 ರಿಂದ 3 ಎಕರೆ ಜಮೀನು ಖರೀದಿಗೆ ಬೇಕಾಗಿದೆ. ಮಾಲೀಕರು ಮಾತ್ರ ಕರೆ ಮಾಡಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 6364795551

ಪ್ರವಾಸ
09.05.2026, 10.06.2026 ರಿಂದ 14 ದಿನಗಳು ಚಾರ್‌ಧಾಮ ಪ್ರವಾಸ, 28.06.2026, 10.07.2026 ರಿಂದ 8/13 ದಿನಗಳು ಅಮರನಾಥ್, ಕಾಶ್ಮೀರ ಪ್ರವಾಸ 25.07.2026 ರಿಂದ 13 ದಿನಗಳು ರಿಯಾಯಿತಿ ದರದಲ್ಲಿ ಮಾನಸ ಸರೋವರ, ಕೈಲಾಸ ಪರ್ವತ, ನೇಪಾಳ
ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು
9342287551
9986624447, 9986254573

ಕೆಲಸಕ್ಕೆ ಬೇಕಾಗಿದ್ದಾರೆ
Manpower Agency ಯಲ್ಲಿ ಕನಿಷ್ಠ 5 ವರ್ಷ ಅನುಭವವಿರುವ ಕೆಲಸಗಾರರು ಬೇಕಾಗಿದ್ದಾರೆ.
ಸ್ಥಳ : ಮೈಸೂರು
8867567199
9731251118

REQUIRED
Male Accountant
Qualification: B.Com. & Having good handling Accounts independently also knowledge of basic Excel at Irwin Road, Mysuru.
Mob: 8884788006

ಭೋಗ್ಯಕ್ಕೆ ಮನೆ ಬೇಕಾಗಿದೆ
ಮೈಸೂರು–ಹೆಬ್ಬಾಳು, ವಿಜಯನಗರ 1ನೇ ಹಾಗೂ 2ನೇ ಹಂತ, ಗೋಕುಲಂ, ವಿ.ವಿ. ಮೊಹಲ್ಲಾ, ಮೇಟಗಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ, ಶುದ್ಧ ಸಸ್ಯಾಹಾರಿ ಕುಟುಂಬಕ್ಕೆ 30x40 independent ಮನೆ ಭೋಗ್ಯಕ್ಕೆ ಬೇಕಾಗಿದೆ. ಸಂಪರ್ಕಿಸಿ: ಪ್ರಿಯಾ
Mob: 6364795551

Job Opportunity
VRS, Rtd (ಬ್ಯಾಂಕ್, ರಾಜ್ಯ, ಕೇಂದ್ರ, Public Sector, Pvt.) ವಿದ್ಯಾವಂತ ಗೃಹಿಣಿಯರಿಗೆ ಹಾಗೂ ಬಿಸಿನೆಸ್ ವಲಯದವರಿಗೆ Seminar 5-5-2026 ಮಂಗಳವಾರ, ಸಾಯಂಕಾಲ 4.30 ಗಂಟೆ, ಹೋಟೆಲ್ ಮಯೂರ ಹೊಯ್ಸಳ (ಮೆಟ್ರೋ ಪೋಲ್ ಹೋಟೆಲ್ ಎದುರು), ಮೈಸೂರು.
HI-TEA ARRANGED.
7349052084, 9845458130, 8861918556, 7892810890

ವರ ಬೇಕಾಗಿದ್ದಾರೆ
Govt. Job ಇರುವ ಮಕ್ಕಳಿಲ್ಲಂತಹ ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ. Beautiful Hindu 43 / 5.5 / B.Sc. Govt. Health Dept Officer. Salary: 85000 ಇರುವಂತಹ ವಿಚ್ಛೇದಿತೆಗೆ ವಿಧುರ / ವಿಚ್ಛೇದಿತ / ನೌಕರಸ್ಥ ವ್ಯಾಪಾರಸ್ಥ / ವಿದ್ಯಾವಂತ / ವರಬೇಕಾಗಿದ್ದಾರೆ. ಯಾವುದೇ ಜಾತಿಯ ಅಭ್ಯಂತರ ಇಲ್ಲ. (ಮಕ್ಕಳಿದ್ದರೂ ಪರವಾಗಿಲ್ಲ). ಮೈಸೂರು
Mob: 9742458242

ಬೇಕಾಗಿದ್ದಾರೆ
ಗುಡ್‌ವಿಶ್ ಫೌಂಡೇಷನ್ (ರಿ) ಮೈಸೂರು
ಸಂಸ್ಥೆಯೊಂದರಲ್ಲಿ, ವಸತಿ ಮೇಲ್ವಿಚಾರಕರ ಹುದ್ದೆಗೆ BA ಅಥವಾ MSW ಅಭ್ಯರ್ಥಿ ಬೇಕಾಗಿದ್ದಾರೆ.
7795708156
8970208156
9148502314

HOUSE FOR RENT
2 BHK 1st Floor
2nd Stage,
Gayathripuram
Mysuru
8088914826

ಮನೆ ಮಾರಾಟಕ್ಕಿದೆ
20 X 30 Sq. Ft.
1207, East Facing
Lal Bahadur Shasthri Nagar, Mysuru
6363185131
9740516938

WANTED
Sales Executives for Two Wheeler Service Centre. Experience/ Fresher's,
Salary 25K to 30K
9380010600

SITE FOR SALE
40×41 North-facing, Panchacharya Layout, Vijyanagara, Mysore.
9740088990

ತಕ್ಷಣ ಬೇಕಾಗಿದ್ದಾರೆ
ಬಂಬೂಬಜಾರ್, ಸಿದ್ಧಾರ್ಥನಗರ, ಹಿನಕಲ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಒಂಟಿಕೊಪ್ಪಲ್ ಹತ್ತಿರ ಕೆಲಸ ಮಾಡಲು ಹೌಸ್‌ಕೀಪಿಂಗ್‌ಗೆ ಮಹಿಳೆಯರು ಬೇಕಾಗಿದ್ದಾರೆ.
9380990535

20x40 ಸೈಟು
ದಟ್ಟಗಳ್ಳಿ – 65 ಲಕ್ಷ, ಮನೆ, ಸೈಟು ಮಾರುವವರು, ಕೊಳ್ಳುವವರು ಸಂಪರ್ಕಿಸಿ
ಶ್ರೀ ಬನಶಂಕರಿ ಎಂಟರ್‌ಪ್ರೈಸಸ್
ಮಹಾಪನೆ ಸರ್ಕಲ್, ದಟ್ಟಗಳ್ಳಿ, ಮೈಸೂರು.
9945042875

ಉದ್ಯೋಗಾವಕಾಶ
WALK-IN-INTERVIEW
ದಿನಾಂಕ 05/05/2026 & 06/05/2026 ಶ್ರೀ ಅರುಣೋದಯ ITI ಮೈಸೂರು ಸಂಸ್ಥೆಗೆ ಪ್ರಾಂಶುಪಾಲರು ಹಾಗೂ ಕಿರಿಯ ತರಬೇತಿ ಅಧಿಕಾರಿ (ಎಲೆಕ್ಟ್ರಾನಿಕ್ ಮೆಕ್ಯಾನಿಕ್) ಹುದ್ದೆಗೆ ಡಿಪ್ಲೊಮಾ/ಬಿ.ಇ ಎಲೆಕ್ಟ್ರಾನಿಕ್ ಪದವಿ ಪಡೆದಿರುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ಕೂಡಲೇ ಸಂಪರ್ಕಿಸಿ
9845004150
9663185115

SITE BUY & SELE
MUDA APPROVED
Ananda Sagara
Pragathi Nagara
Nityananda Sagara
Paramananda Sagara
Kuberananda Sagara
30 x 40, 50x80 & 40 x 60
JK: 8951144240

ದೇವ್ ಡ್ರೈಗೋಬಿ ಕಾರ್ನರ್‌ನಲ್ಲಿ ಕೆಲಸಕ್ಕೆ ಜನ ಬೇಕಾಗಿದ್ದಾರೆ
ಫ್ರೈಡ್ ಐಟಂಗಳು (ಗೋಬಿ ಮಂಚೂರಿಯನ್ ಇತ್ಯಾದಿ) ತಯಾರಿಸಲು ಅನುಭವ ಇರುವ ಅಡುಗೆದಾರರು ಹಾಗೂ ಹೆಲ್ಪರ್‌ಗಳು ಬೇಕು. ಸ್ಟ್ರೀಟ್ ಫುಡ್/ಫಾಸ್ಟ್ ಫುಡ್ ಅಂಗಡಿಯಲ್ಲಿ ಕೆಲಸ ಮಾಡಿದ ಅನುಭವ ಇದ್ದವರಿಗೆ ಆದ್ಯತೆ. ಉತ್ತಮ ಸಂಬಳ ನೀಡಲಾಗುತ್ತದೆ. ಅನುಭವದ ಮೇಲೆ ಸಂಬಳವನ್ನು ಮಾತನಾಡಿ ತೀರ್ಮಾನಿಸಬಹುದು. ಸ್ಥಳ : ಮೈಸೂರು,
7675915610
7760041282

ಮನೆ ಮಾರಾಟಕ್ಕಿದೆ
LIG ಮುಡಾ ಪ್ರಾಪರ್ಟಿ
17+33 ಅಳತೆ
ನೆಲ ಮಹಡಿ, ಮೊದಲನೇಮಹಡಿ, ಶಾರದಾದೇವಿನಗರ, ಮೈಸೂರು
8970630124

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕೆ.ಆರ್.ಎಸ್ ರೋಡಿನಲ್ಲಿರುವ ಪ್ರತಿಷ್ಠಿತ ಫ್ಯಾಕ್ಟರಿ ಒಂದರಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ತಿಂಗಳಿಗೆ ಆಕರ್ಷಕ ಸಂಬಳ, ಇಎಸ್‌ಐ, ಪಿಎಫ್ ಲಭ್ಯವಿರುತ್ತದೆ. ಯಾವುದೇ ವಿದ್ಯಾ ಅರ್ಹತೆ ಬೇಕಾಗಿರುವುದಿಲ್ಲ.
9916075959

SITE FOR SALE
40×60 North-facing, DTS Rao Nagar Layout, Sathgalli Village , Mysore.
9986621579

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, 50 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ. SSLC, PUC ವಿದ್ಯಾರ್ಹತೆ ಇರಬೇಕು. ಕೂರ್ಗಳ್ಳಿ, ಮೇಟಗಳ್ಳಿ, ಗೋಕುಲಂ, ಒಂಟಿಕೊಪ್ಪಲ್, ಹೆಬ್ಬಾಳು, ವಿಜಯನಗರ, ಮಂಟಿ, ಸ್ಯಾದನಹಳ್ಳಿ ಹಾಗೂ ಸುತ್ತಾ–ಮುತ್ತಲಿನವರು.
7259598615

A leading MNC Company is HIRING
Profile : House wives, Insurance agent, Retired persons/ NRIs/Teachers, Self employed, Auto mobile distributor.
Benefits: Flexible working hours Earn minimum 50k pm, Promotion Reward and recognition Foreign trips.
Suryakala:
9845543874

WANTED TEACHERS
JNANAJYOTHI VIDYALAYA
BEERIHUNDI. (English Medium) High school.(State Syllabus)
Wanted Teachers for English-1, Social Science-1. Contact Immediately.
9845390377
8197057626

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಜೆ.ಪಿ ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ
ಬೋಗಾದಿ ಟ್ರೆಂಡ್ಸ್ ಫ್ಲಾಟ್ ಹತ್ತಿರ 36 ಲಕ್ಷ
ವಿದ್ಯಾವಿಕಾಸ್, MPRO ಹಿಂಬಾಗ 34.75 ಲಕ್ಷ
ವಸಂತನಗರ/ಪೊಲೀಸ್ ಲೇಔಟ್ ಪಕ್ಕ 32 ಲಕ್ಷ
ಹುಣಸೂರು ರಸ್ತೆ, ಇಲವಾಲ 27–36 ಲಕ್ಷ
Call : 81230 75038
Broker Excuse 0% Commission

ಸಪ್ಲೈಯರ್ ಬೇಕಾಗಿದ್ದಾರೆ
ಕೊಡಗಿನ ಹೋಟೆಲ್‌ವೊಂದಕ್ಕೆ ಸಪ್ಲೈಯರ್ ಬೇಕಾಗಿದ್ದಾರೆ.
9986669892
6362610799

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ. ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು
Mob: 9916905188

WANTED
For Boys Luxury Coffee Cart. Good Communication Skill Attractive Salary + Incentives
Location - Mysore City
Call - 7829601307

ಪ್ರವಾಸ
9 ದಿನಗಳ ಅಯೋಧ್ಯಾ ನೇಪಾಳ ಮುಕ್ತಿನಾಥ ಪ್ರವಾಸ 4–6–26.
4 ದಿನಗಳ ಕಾಶಿ ಪ್ರವಾಸ 4–6–26.
10 ದಿನಗಳ ಕಾಶ್ಮೀರ ಲೇಹ್ ಲಡಾಕ್ ಪ್ರವಾಸ 16–6–26.
13 ದಿನಗಳ ಚಾರ್ ಧಾಮ್ ಪ್ರವಾಸ 26–5–26
ಸುವರ್ಣ ಯಾತ್ರಾ
9019462508 / 9008381022

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ
ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ, ಹಾಗೂ ಸಿವಿಲ್ ಅಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ.
VASANTHA BUILDERS
8151035074, 9035012579

WANTED
Female Customer care Executive for a Reputed Matrimony Consultancy Any Degree/Diploma/PUC, Computer Knowledge Must
9343175000

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷ / ಮಹಿಳೆ) * ಸೆಕ್ಯೂರಿಟಿ ಸೂಪರ್‌ವೈಸರ್ * ಹೌಸ್‌ಕೀಪಿಂಗ್ (ಪುರುಷ / ಮಹಿಳೆ) * ಹೌಸ್‌ಕೀಪಿಂಗ್ ಸೂಪರ್‌ವೈಸರ್ * ವಾರ್ಡ್ ಬಾಯ್ * ಪೋರ್ಟರ್ ಬಾಯ್. ಸ್ಥಳ: ಆಲನಹಳ್ಳಿ, ಉತ್ತನಹಳ್ಳಿ, ಕುವೆಂಪುನಗರ, ಮೇಟಗಳ್ಳಿ ಪ್ರದೇಶದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ. ಸೌಲಭ್ಯ: ಸೆಕ್ಯೂರಿಟಿ ಗಾರ್ಡ್‌ಗಳಿಗೆ ಉಚಿತ ವಸತಿ ವ್ಯವಸ್ಥೆ ಇದೆ. ಸಂಪರ್ಕಿಸಿ:
Mob: 8884286321
8884286123, 9380922109

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ನಿವೃತ್ತಿ ಹೊಂದಿರುವವರು, ವಯಸ್ಸಿನ ಮಿತಿ ಇಲ್ಲ. ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ಮೊಬೈಲ್ ವಾಟ್ಸಾಪ್, ಟೈಪಿಂಗ್, ಪೆನ್ಸಿಲ್ ಪ್ಯಾಕಿಂಗ್, ಫ್ಲವರ್ ಪ್ಯಾಕಿಂಗ್, ಫಿಶ್‌ಫುಡ್ ಪ್ಯಾಕಿಂಗ್ ಹಾಗೂ ಮನೆಯಿಂದಲೇ ಕರಕುಶಲ ಪ್ಯಾಕಿಂಗ್ ಹುದ್ದೆಗಳನ್ನು ಮಾಡಲು ಎಲ್ಲರಿಗೂ ಮುಕ್ತ ಅವಕಾಶ. ಗಳಿಸಿ ಸಂಬಳ ತಿಂಗಳಿಗೆ 30,000 ದಿಂದ 40,000 ದವರೆಗೆ.
Mob: 9606983268

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC and IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ಇಎಸ್‌ಐ / ಪಿಎಫ್ ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ + ಓಟಿ 15,000 – 86000.
Mob: 8884970663

ಬೇಕಾಗಿದ್ದಾರೆ
1) ಟೈಲರುಗಳು, (2) ಹೆಲ್ಪರ್‌ಗಳು, (3) ಅನುಭವವುಳ್ಳ ಅಕೌಂಟೆಂಟ್‌ಗಳು, (4) ಡ್ರೈವರ್‌ಗಳು, (5) ಡ್ರೈವರ್ ಕಂ ಮಾರ್ಕೆಟಿಂಗ್, (6) ಡಿಪ್ಲೋಮೋ ಹುಡುಗರು. ಸಂಪರ್ಕಿಸಿ:
8105249880, 7795285485

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

20x30 ಅಳತೆಯ ಸೈಟ್ ಮಾರಾಟಕ್ಕಿದೆ
ಇಲವಾಲದ ಬಸ್ ನಿಲ್ದಾಣದಿಂದ 1 k.m. ಅಂತರದಲ್ಲಿರುವ ಕಟೀಲ್‌ನಗರ D.T.C.P. ಬಡಾವಣೆಯಲ್ಲಿ ಡೈರೆಕ್ಟ್ ಓನರ್ ವ್ಯಾಪಾರ ಬೆಲೆ 20 ಲಕ್ಷ ನೆಗೋಷಿಯಬಲ್
ಸಿಪಾಯಿ ನಂಜುಂಡಸ್ವಾಮಿ ಹೆಚ್.ಎಸ್.
9483862050

PRAKRUTHI PROPERTIES
FOR SALE
30x50+Sites Opp Park@ 60ft & 50ft Road Approach, Available Nr Defence Apartments
From blueprint to doorstep—we build and deliver.
Near Rainbow School Bogadi
20x30 2BHK 45L
20x30 3BHK 60L
20x30 4BHK 62L
Bank Loan Available
2&3 BHK Apartments @ Prime Location in Ramakrishna Nagar
95386 90359, 90359 90359

Nypunya School of Excellence MYSURU DATTAGALLI and R.T.NAGAR
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ನಜರ್‌ಬಾದ್, ಹೆಬ್ಬಾಳ, ಜೆ.ಪಿ.ನಗರ, ಉತ್ತನಹಳ್ಳಿ ಅಥವಾ ಹೊಸಹುಂಡಿಯ ವ್ಯಾಪ್ತಿಯಲ್ಲಿರುವ ಮಹಿಳಾ ಆಯಾ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ
96069 59451

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

ಸೈಟು ಬೇಕಾಗಿದೆ
ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ, JSS ಲೇಔಟ್, ನಿರ್ಮಾಣ್ ಲೇಔಟ್, ಬಸವೇಶ್ವರ ಲೇಔಟ್, ಸಪ್ತಮಾತೃಕ, LBS ಲೇಔಟ್, ವರುಣ, ವಾಜಮಂಗಲ, ವರಕೋಡು ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ.
9686071750

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಮೈಸೂರು ಮಿತ್ರ 47 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 9ನೇ ಪುಟ ನೋಡಿ

ಹೆಚ್.ಕೆ.ವೀರಣ್ಣಗೌಡ, ಎಸ್.ಎಂ.ಕೃಷ್ಣರದ್ದು ಮೇರು ವ್ಯಕ್ತಿತ್ವ

ಮದ್ದೂರು, ಮೇ3– ಮಂಡ್ಯ ಜಿಲ್ಲೆ ಅಕ್ಷರದಲ್ಲಿ ದೂರವಿದ್ದ ಕಾಲದಲ್ಲೇ ಪತ್ರಿಕೆಯನ್ನು ಪ್ರಾರಂಭಿಸಿದ ಮುತ್ಸದ್ಧಿ ನಾಯಕರಾದ ಹೆಚ್.ಕೆ.ವೀರಣ್ಣಗೌಡರು ಹಾಗೂ ರಾಜಕೀಯವಾಗಿ ಎಲ್ಲಾ ಸ್ಥರಗಳಲ್ಲೂ ತಮ್ಮದೇ ಆದ ಚಾಪನ್ನು ಮೂಡಿಸಿದ್ದ ಎಸ್.ಎಂ.ಕೃಷ್ಣರವರುಗಳದ್ದು ಬಹಳ ಅಪರೂಪದ ಮೇರುವ್ಯಕ್ತಿತ್ವ ಎಂದು ರಾಯಚೂರು ಸಂಸದ ಜಿ. ಕುಮಾರ್ ನಾಯಕ್ ಶ್ಲಾಘಿಸಿದರು.

ಎಂ.ಎಚ್.ಚನ್ನೇಗೌಡ ವಿದ್ಯಾನಿಲಯ ವತಿಯಿಂದ, ಗುರುಸೇವಾ ಧುರೀಣ, ಕೀರ್ತಿಶೇಷ, ಎಚ್.ಕೆ.ವೀರಣ್ಣಗೌಡ ಮತ್ತು ಡಾ. ಎಸ್.ಎಂ. ಕೃಷ್ಣ ಅವರ ಜನ್ಮ ಜಯಂತಿಯನ್ನು ಉದ್ಘಾಟಿಸಿ, ಮಂಡ್ಯ ಕಾವೇರಿಯ ಮಡಿಲು. ಒಕ್ಕಲಿಗರ ಹೃದಯ ಭಾಗ. ಆಲೆಮನೆ ಕಬ್ಬಿನ ಮನೆಯ ನೆಲೆಬೀಡು ಎಂಬಂತಿದ್ದ ಮಂಡ್ಯ ಜಿಲ್ಲೆ ಇಂದು ಪುಸ್ತಕದ ಮನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಶ್ಲಾಘಿಸಿದರು.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಎಸ್.ಎಂ.ಕೃಷ್ಣ ಹಾಗೂ ಎಚ್.ಕೆ. ವೀರಣ್ಣಗೌಡರು ರಾಜಕೀಯವಾಗಿ ಗುರುತರವಾದ ಕಾರ್ಯಗಳನ್ನು ಮಾಡಿದ್ದು, ವೈಯಕ್ತಿಕವಾಗಿ ಇಬ್ಬರೂ ಸಹ ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಿದ್ದಾರೆ ಎಂದರು.



ಎಚ್.ಕೆ.ವೀರಣ್ಣಗೌಡ ಸಾಹಿತ್ಯ ಪ್ರಶಸ್ತಿಗೆ ಭಾಜನರಾದ ಪದ್ಮಶ್ರೀ ಎಂ.ಅಂಕೇಗೌಡ ಮತ್ತು ವಿಜಯಲಕ್ಷ್ಮಿ ಅಂಕೇಗೌಡರನ್ನು ಗೌರವಿಸಲಾಯಿತು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್ ಗೌಡ ಮಾತನಾಡಿ, ಶಿವಪುರ ಧ್ವಜ ಸತ್ಯಾಗ್ರಹ ಚಳುವಳಿ ಮೂಲಕ ಇಡೀ ಭರತ ಖಂಡದಲ್ಲೇ ಕಾಲ್ನಡಿಗೆಯಲ್ಲಿ ಬಹಳ ದೊಡ್ಡ ಮಟ್ಟದ ಚಳುವಳಿಯನ್ನು ಮಾಡಿದ ಕೀರ್ತಿ ವೀರಣ್ಣಗೌಡರಿಗೆ ಸಲ್ಲುತ್ತದೆ ಒಂದು ವೇಳೆ ವೀರಣ್ಣಗೌಡರು, ಬದುಕು ಮೆಲುಕು ಪುಸ್ತಕವನ್ನು ಹೊರತರದಿದ್ದರೆ ಇಂದು ನಮಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹೋರಾಟಗಾರರ ಬಗ್ಗೆ ಸರಿಯಾದ ಮಾಹಿತಿ ದೊರೆಯುತ್ತಿರಲಿಲ್ಲ ಎಂದರು.

ಎಚ್.ಕೆ.ವೀರಣ್ಣಗೌಡ ಸಾಹಿತ್ಯ ಪ್ರಶಸ್ತಿಗೆ ಭಾಜನರಾದ ಪದ್ಮಶ್ರೀ ಎಂ.ಅಂಕೇಗೌಡ ಮತ್ತು ವಿಜಯಲಕ್ಷ್ಮಿ ಅಂಕೇಗೌಡರನ್ನು ಸನ್ಮಾನಿಸಲಾಯಿತು. ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದ ನಿವೃತ್ತ ಸಿಬ್ಬಂದಿ ವರ್ಗದವರನ್ನು, ಹಿರಿಯ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆದರ್ಶ ಮರಿಯಪ್ಪ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಗೌರವ ಅಧ್ಯಕ್ಷ ಕೆ.ಟಿ.ಚಂದು, ಅಧ್ಯಕ್ಷ ಸ್ವರೂಪ್ ಚಂದ್, ಕಾರ್ಯದರ್ಶಿ ಸಿ.ಅಪೂರ್ವ ಚಂದ್ರ, ಖಜಾಂಚಿ ಶಿವರಾಮು ಸಂಸ್ಥೆಗಳ ಮುಖ್ಯಸ್ಥರು, ಸಂಘ–ಸಂಸ್ಥೆಗಳ ಸದಸ್ಯರು, ಉಪಸ್ಥಿತರಿದ್ದರು.

ಎಸ್.ಎಂ.ಕೃಷ್ಣ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ ಮಾದರಿ ನಾಯಕ

ಮಂಡ್ಯ,ಮೇ3– ರಾಜಕೀಯದಲ್ಲಿ ಸಾಕ್ಷಿಗುಡ್ಡೆ ಬಿಟ್ಟು ಹೋದ ಎಸ್.ಎಂ.ಕೃಷ್ಣ ಅವರು ಅಂತರ ರಾಷ್ಟ್ರೀಯ ಕಂಪನಿಗಳಿಗೆ ಹೆಚ್ಚು ಒತ್ತು ನೀಡಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ ಮಾದರಿ ನಾಯಕರು ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಶ್ಲಾಘಿಸಿದರು.

ನಗರದ ವಕೀಲರ ಸಂಘದಲ್ಲಿ ನಡೆದ ಕೃಷ್ಣ ಸಂಸ್ಮರಣೆ ಹಾಗೂ ಜಂಟಲ್‌ಮನ್ ರಾಜಕಾರಣಿಯ ನೆನಪಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಮುಖ್ಯ ಮಂತ್ರಿಯಾಗಿ ಬಜೆಟ್ ಗಾತ್ರವನ್ನು ಹೆಚ್ಚಿಸಿ ಅಭಿವೃದ್ಧಿಗೆ ನಾಂದಿಯಾಡಿದ ಎಸ್.ಎಂ.ಕೃಷ್ಣ ಅವರು, ಕೆಂಗಲ್ ಹನುಮಂತಯ್ಯನವರು ವಿಧಾನ ಸೌಧ ನಿರ್ಮಾಣ ಮಾಡಿದರೆ ಅದರ ಪಕ್ಕ ದಲ್ಲಿಯೇ ವಿಕಾಸ ಸೌಧ ನಿರ್ಮಿಸಿ ಮಾದರಿಯಾದ ಹಾಗೂ ದೂರದೃಷ್ಟಿಯುಳ್ಳ ಚಿಂತಕರೆನಿಸಿದರು ಎಂದು ಶ್ಲಾಘಿಸಿದರು.

ಮೈಸೂರಿನ ರಾಮಕೃಷ್ಣ ಆಶ್ರಮ ಅಧ್ಯಕ್ಷ ಮುಕ್ತಿದಾನಂದ ಮಹಾರಾಜ್ ಸ್ವಾಮೀಜಿ ಮಾತನಾಡಿ, ಎಸ್.ಎಂ.ಕೃಷ್ಣ ಅವರು ಯಾವ ಪರಿಸ್ಥಿತಿಯಲ್ಲಿಯೂ ಯಾವುದೇ ಒತ್ತಡಕ್ಕೆ ಒಳಗಾಗದೇ ಸಹಜವಾಗಿಯೇ ಕೆಲಸ ನಿರ್ವಹಿಸುತ್ತಿದ್ದರು. ಅವರ ವ್ಯಕ್ತಿತ್ವ ಪ್ರಸ್ತುತ ರಾಜಕಾರಣಿಗಳಿಗೆ ಅವಶ್ಯವಾಗಿ ಬೇಕಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.


ಹಿರಿಯ ವಕೀಲ ಹಾಗೂ ಮಾಜಿ ಶಾಸಕ ಎಂ.ಶ್ರೀನಿವಾಸ್ ಅವರನ್ನು ಅಭಿನಂದಿಸಲಾಯಿತು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಹತ್ತಿರದಿಂದ ನಾನು ಎಸ್.ಎಂ.ಕೃಷ್ಣ ಅವರನ್ನು ನೋಡಿಲ್ಲ, ಆದರೆ ರಾಜಕಾರಣದಲ್ಲಿ ಉನ್ನತ ಹುದ್ದೆ ಪಡೆದರು. ಮುಖ್ಯಮಂತ್ರಿ ಸ್ಥಾನದಿಂದ ಹಿಡಿದು ವಿದೇಶಾಂಗ ಸಚಿವ ಸ್ಥಾನದವರೆಗೂ ಉತ್ತಮ ಕೆಲಸ ಮಾಡಿದ ಮಹಾನ್ ವ್ಯಕ್ತಿಯಾಗಿದ್ದರು. ಇವರ ಆಡಳಿತಾವಧಿಯಲ್ಲಿ ಬರಗಾಲ ಬಂದರೂ ಅದನ್ನು ನಿಭಾಯಿಸಿದ್ದ ಮಹನೀಯರು, ಬೆಂಗಳೂರಿಗೆ ಕೊಟ್ಟಂತಹ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಎಂ.ಶ್ರೀನಿವಾಸ್‌ರನ್ನು ಅಭಿನಂದಿಸಲಾಯಿತು. ರಾಜ್ಯ ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್. ಆತ್ಮಾನಂದ, ಮುಖಂಡ ಎಚ್. ಎನ್. ಯೋಗೇಶ್, ಚಲುವರಾಜು, ಜೋಗೀಗೌಡ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಟಿ.ಎಸ್. ಸತ್ಯಾನಂದ ಭಾಗವಹಿಸಿದ್ದರು.

ಸಂಸದ ದಿ.ಲಕ್ಕಪ್ಪ ಪತ್ನಿ ಪುಟ್ಟಮ್ಮಲಕ್ಕಪ್ಪ ನಿಧನ

ಭಾರತೀನಗರ, ಮೇ 3–ತುಮಕೂರು ಲೋಕಸಭಾ ಸದಸ್ಯರಾಗಿದ್ದ ದಿ.ಕೆ.ಲಕ್ಕಪ್ಪ ಅವರ ಧರ್ಮಪತ್ನಿ, ಜಿ.ವಿ.ಪುಟ್ಟಮ್ಮಲಕ್ಕಪ್ಪ ಅನಾರೋಗ್ಯದಿಂದ ಭಾನುವಾರ ನಿಧನರಾದರು.



ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಸ್ವಗ್ರಾಮವಾದ ಗೂಳೂರು ಹೋಬಳಿಯ ಕೊಂಡಾಪುರ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ 12 ಗಂಟೆಗೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಂತಾಪ: ಜಿ.ವಿ.ಪುಟ್ಟಮ್ಮಲಕ್ಕಪ್ಪರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಎಚ್.ಟಿ. ಮಂಜು, ದರ್ಶನ್‌ಪುಟ್ಟಣ್ಣಯ್ಯ, ಪಿ.ಎಂ. ನರೇಂದ್ರಸ್ವಾಮಿ, ಮಧು ಜಿ. ಮಾದೇಗೌಡ, ದಿನೇಶ್ ಗೂಳಿಗೌಡ, ವಿವೇಕಾನಂದ್, ಗಣಿಗರವಿ, ಕೆ.ಎಂ. ಉದಯ್, ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ ಸಂತಾಪ ವ್ಯಕ್ತಪಡಿಸಿದ್ದಾರೆ.

ಮದ್ದೂರಮ್ಮನ ಜಾತ್ರೆ: ದಸರಾ ಮಾದರಿ ದೀಪಾಲಂಕಾರ

ಮದ್ದೂರು: ಶ್ರೀ ಮದ್ದೂರಮ್ಮನವರ ಜಾತ್ರಾ ಮಹೋತ್ಸವ, ಶ್ರೀ ನರಸಿಂಹಸ್ವಾಮಿ ಬ್ರಹ್ಮೋತ್ಸವದ ಹಾಗೂ ಮದ್ದೂರು ಉತ್ಸವ ಅಂಗವಾಗಿ ಮದ್ದೂರಿನಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ದಸರಾ ದೀಪಾಲಂಕಾರ ರೀತಿಯಲ್ಲೇ ಚಾಲನೆ ನೀಡಲಾಗುತ್ತಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಶನಿವಾರ ಸಂಜೆ ನಗರದ ಪ್ರವಾಸಿ ಮಂದಿರ ಬಳಿ ವಿದ್ಯುತ್ ದೀಪಾಲಂಕಾರಕ್ಕೆ ಚಾಲನೆ ನೀಡಿ ಮಾತನಾಡಿ, ಕಳೆದ ಬಾರಿಗಿಂತ ಈ ವರ್ಷ ಶ್ರೀ ಮದ್ದೂರಮ್ಮ ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಮೆರಗು ನೀಡಲಾಗಿದ್ದು, ನಗರಸಭೆ ಹಾಗೂ ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ನಗರದಾದ್ಯಂತ ವಿಶೇಷ ದೀಪಾಲಂಕಾರ ಮಾಡಲಾಗಿದೆ. ಇದರಿಂದ ಹಬ್ಬದ ಉತ್ಸವ ಸಾರ್ವಜನಿಕರಲ್ಲಿ ಇಮ್ಮಡಿಗೊಂಡಿದೆ ಎಂದರು.

ಕಳೆದ ಬಾರಿ ಹಬ್ಬವನ್ನು ಅದ್ದೂರಿಯಾಗಿ ಮಾಡಲು ಸಮಯದ ಅಭಾವವಿತ್ತು. ಆದರೆ ಈ ಬಾರಿ ಮದ್ದೂರಿನ ಜನತೆಗೆ ದಸರಾ ಮಾದರಿಯ ಅನುಭವ ನೀಡಬೇಕೆಂಬ ಹಂಬಲದಿಂದ 8 ದಿನಗಳ ಕಾಲ ಸತತವಾಗಿ ಈ ದೀಪಾಲಂಕಾರ ಕಣ್ಮನ ಸೆಳೆಯುವಂತೆ ಮಾಡಲಾಗಿದೆ. ಮುಂದಿನ ವರ್ಷದಿಂದ ಮತ್ತಷ್ಟು ಅದ್ದೂರಿಯಾಗಿ ಮಾಡಲಾಗುವುದು ಎಂದರು.


ಶಾಸಕ ಕೆ.ಎಂ.ಉದಯ್ ವಿದ್ಯುತ್ ದೀಪಾಲಂಕಾರಕ್ಕೆ ಚಾಲನೆ ನೀಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ್, ನಗರಸಭಾ ಪೌರಾಯುಕ್ತೆ ಎಸ್.ಎನ್.ರಾಧಿಕಾ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಚಲುವರಾಜು, ನಿರ್ದೇಶಕ ಪಿ.ಸಂದರ್ಶ, ಮುನ್‌ಮುಲ್ ನಿರ್ದೇಶಕ ಹರೀಶ್ ಬಾಬು, ತಹಸೀಲ್ದಾರ್ ಸೋಮಶೇಖರ್, ಸಿಪಿಐ ನವೀನ್ ಕುಮಾರ್, ನಗರಸಭಾ ಮಾಜಿ ಉಪಾಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಮಾಜಿ ಸದಸ್ಯ ಸಿದ್ದರಾಜು, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಮಮತಾ, ಮಾಜಿ ಸೈನಿಕ ಸಿಪಾಯಿ ಶ್ರೀನಿವಾಸ್, ಮುಖಂಡರಾದ ಎಂ.ಡಿ.ಮಹಾಲಿಂಗಯ್ಯ, ತಿಮ್ಮೇಗೌಡ, ಮಹದೇವಯ್ಯ, ರಾಜೇಂದ್ರ, ಅರುಣ್, ವಿಜಯ್ ಕುಮಾರ್ ಇದ್ದರು.

ಗಡ್ಡ ಚಂದ್ರಶೇಖರ್ ಬಣಕ್ಕೆ ಅಧಿಕಾರ ಚುಕ್ಕಾಣಿ

ಪಾಂಡವಪುರ: ರಾಜ್ಯ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ತಾಲೂಕು ಸಂಘದ ಕಾರ್ಯಕಾರಿ ಸಮಿತಿಯ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಿಕ್ಷಕ ಗಡ್ಡ ಚಂದ್ರಶೇಖರ್ ಅವರ ಬಣದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುವ ಮೂಲಕ ಸಂಘದ ಆಡಳಿತ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಒಟ್ಟು 7 ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗಡ್ಡ ಚಂದ್ರಶೇಖರ್ ತಂಡದ 5 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದಾರೆ. ಕೆಂಪೇಗೌಡ ತಂಡದ ಇಬ್ಬರು ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ. ಗಡ್ಡ ಚಂದ್ರಶೇಖರ್ ತಂಡದಲ್ಲಿ ಸಾಮಾನ್ಯ ವರ್ಗದಿಂದ ಬಿ.ವಿ. ಕೀರ್ತಿ (230), ಮಹದೇವಪ್ಪ(191), ಕೆಂಪೇಗೌಡ(179) ಮಹಿಳಾ ಮೀಸಲು ಕೆ.ಸಿ. ಸುಮಿತ್ರ(205), ನಾಗರತ್ನಮ್ಮ(181), ಶಿಕ್ಷಕ ಕೆಂಪೇಗೌಡ ತಂಡದಿಂದ ಸಾಮಾನ್ಯ ಎಸ್.ಎನ್. ಕೆಂಪೇಗೌಡ(171), ಎಂ.ಡಿ. ಕುಮಾರ್ (170) ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಮರೀಸ್ವಾಮಿಗೌಡ, ಘೋಷಿಸಿದರು.


ತಾಲೂಕು ಶಿಕ್ಷಕರ ಸಮಿತಿಗೆ ನಡೆದ ಚುನಾವಣೆಯಲ್ಲಿ ಶಿಕ್ಷಕ ಗಡ್ಡ ಚಂದ್ರಶೇಖರ್ ಬಣದ ಅಭ್ಯರ್ಥಿಗಳು ವಿಜಯೋತ್ಸವ ಆಚರಿಸಿದರು.

ಗಡ್ಡಚಂದ್ರಶೇಖರ್ ಬಣದ ನಿರ್ದೇಶಕರನ್ನು ಬೆಂಬಲಿಗರು ಅಭಿನಂದಿಸಿದರು. ಶಿಕ್ಷಕ ಗಡ್ಡಚಂದ್ರಶೇಖರ್ ಮಾತನಾಡಿ, ಶಿಕ್ಷಕ ಮತದಾರರು ನಮ್ಮ ಬಣ್ಣದ ಐದು ಮಂದಿ ಅಭ್ಯರ್ಥಿಗಳಿಗೆ ಗೆಲ್ಲಿಸಿಕೊಡುವ ಮೂಲಕ ಸಂಘದ ಅಧಿಕಾರ ಚುಕ್ಕಾಣಿ ಹಿಡಿಯಲು ಸಹಕರಿಸಿದ್ದಾರೆ. ಈ ಹಿಂದಿನ ಆಡಳಿತ ಮಂಡಳಿಯವರು ಹಲವು ಷಡ್ಯಂತರದಿಂದ ನಮ್ಮ ಬಣದ 82 ಶಿಕ್ಷರ ಮತವನ್ನು ಅನರ್ಹಗೊಳಿಸಿದ್ದರು. ಇದರ ವಿರುದ್ಧ ಕೋರ್ಟ್ ಆದೇಶವಿದ್ದರೂ ಅದನ್ನು ಉಲ್ಲಂಘಿಸಿ ಚುನಾವಣೆ ನಡೆಸಿದರು. ಆದರೆ, ಪ್ರಜ್ಞಾವಂತ ಶಿಕ್ಷಕ ಮತದಾರರು ನಮ್ಮ ಯಾವುದೇ ಷಡ್ಯಂತರಕ್ಕೂ ಒಳಗಾಗದೆ ನಮ್ಮ ಅಭ್ಯರ್ಥಿಗಳಿಗೆ ಹೆಚ್ಚಿನ ಮತಕೊಟ್ಟು ಗೆಲ್ಲಿಸಿದ್ದಾರೆ. ಅದಕ್ಕಾಗಿ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಶಿಕ್ಷಕರಾದ ಕೇಶವಮೂರ್ತಿ, ಶಿವಕುಮಾರ್, ಕೆ.ಯುವರಾಜು, ಕರುಣಾಕರ್, ವಿಜಯ್‌ಕುಮಾರ್, ಯೋಗನರಸಿಂಹೇಗೌಡ, ಕಿರಣ್‌ಕುಮಾರ್, ಜಯಚಂದ್ರನ್, ಸೋಮಶೇಖರ್, ಸುರೇಂದ್ರಕುಮಾರ್, ಬಸವಲಿಂಗಪ್ಪ, ಸುಬ್ರಮಣ್ಯ, ಬಿ.ಸಿ.ಪಾರ್ಥ, ಶಂಭುಲಿಂಗಪ್ಪ, ಮೊದಲಾದವರಿದ್ದರು.



ಭರ್ಜರಿ ಗೆಲುವು

ಕೆ ಆರ್ ಪೇಟೆ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಸಿ.ಕೆ. ಶಿವರಾಮೇಗೌಡರ ಬಣದ 9 ಮಂದಿ ಗೆಲುವು ಸಾಧಿಸಿದ್ದಾರೆ.

ಒಂದನೇ ಪುಟದಿಂದ

ಬಿಜೆಪಿಯ ಜೀವರಾಜ್‌ಗೆ ಗೆಲುವು

ಆದರೆ ಅಂತಿಮವಾಗಿ ಜೀವರಾಜ್ ಅವರು 55 ಮತಗಳಿಂದ ಮುಂದಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತರು ನಿನ್ನೆ ತಡರಾತ್ರಿ ಸಂಭ್ರಮಾಚರಣೆ ನಡೆಸಿದ್ದರು. ಇದರಿಂದ ಗೊಂದಲ ಸೃಷ್ಟಿಯಾಗಿತ್ತು.

ರಾಜೇಗೌಡರು ಪಡೆದಿದ್ದ 569 ಅಂಚೆಮತಗಳ ಪೈಕಿ 255 ಅಸಿಂಧು ಆಗಿದ್ದು, ಅವರ ಮತ 314ಕ್ಕೆ ಕುಸಿದಿತ್ತು. ಹೀಗಾಗಿ 201 ಮತಗಳ ಅಂತರದಲ್ಲಿ ಸೋತಿದ್ದ ಬಿಜೆಪಿಯ ಜೀವರಾಜ್‌ಗೆ 52 ಮತ ಮುನ್ನಡೆ ಸಿಕ್ಕಂತಾಗಿತ್ತು. ಆದರೆ ಚುನಾವಣಾಧಿಕಾರಿಗಳು ಅಧಿಕೃತ ಫಲಿತಾಂಶವನ್ನು ಘೋಷಣೆ ಮಾಡದ ಕಾರಣ ಚುನಾವಣಾಧಿಕಾರಿಗೆ ಜೀವರಾಜ್ ಪರ ವಕೀಲರು ಲೀಗಲ್ ನೋಟಿಸ್ ನೀಡಿ, ನ್ಯಾಯಾಂಗ ನಿಂದನೆ ಕೇಸ್ ದಾಖಲಿಸುವುದಾಗಿ ಎಚ್ಚರಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ್ದ ಚುನಾವಣಾಧಿಕಾರಿ, ಹೈಕೋರ್ಟ್ ಆದೇಶದಂತೆ ಮರು ಎಣಿಕೆ ಮಾಡಲಾಗಿದೆ. ಆದರೆ, ಫಲಿತಾಂಶ ಘೋಷಿಸುವಂತೆ ಆದೇಶದಲ್ಲಿ ಇಲ್ಲ. ಹೀಗಾಗಿ ಮರು ಮತ ಎಣಿಕೆ ವಿವರವನ್ನು ಚುನಾವಣಾ ಆಯೋಗಕ್ಕೆ ಕಳುಹಿಸಲಾಗಿದೆ ಎಂದು ಸಮಜಾಷಿಯಿ ನೀಡಿದ್ದರು. ಅಂತಿಮವಾಗಿ ಅಭ್ಯರ್ಥಿಗಳಿಗೆ ಇ–ಮೇಲ್ ಮೂಲಕ ಫಲಿತಾಂಶವನ್ನು ಕಳುಹಿಸುವ ಮೂಲಕ ಜೀವರಾಜ್ ಅವರ ಗೆಲುವನ್ನು ಘೋಷಿಸಿದ್ದಾರೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ರಾಜೇಗೌಡ 201 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದರು. ಅಲ್ಪ ಮತಗಳ ಅಂತರದಿಂದ ಸೋತಿದ್ದ ಜೀವರಾಜ್ ತಾವು ಪಡೆದಿದ್ದ ಅಂಚೆ ಮತಗಳಲ್ಲಿ ಅಸಿಂಧುವಾಗಿದ್ದ 279 ಮತಗಳ ಮರು ಎಣಿಕೆ ಮಾಡುವಂತೆ ಪಟ್ಟು ಹಿಡಿದಿದ್ದರು. ಆದರೆ ಅಂದಿನ ಚುನಾವಣಾಧಿಕಾರಿ ಜೀವರಾಜ್ ಮನವಿಗೆ ಸ್ಪಂದಿಸದೆ ಫಲಿತಾಂಶ ಘೋಷಣೆ ಮಾಡಿದ್ದರು. ಬಳಿಕ ಜೀವರಾಜ್ ನ್ಯಾಯಾಲಯದ ಮೊರೆ ಹೋಗಿ ಸತತ ಮೂರು ವರ್ಷಗಳ ಕಾನೂನು ಹೋರಾಟ ನಡೆಸಿದ್ದರ ಫಲವಾಗಿ ಹೈಕೋರ್ಟ್ ಸೂಚನೆಯಂತೆ ಅಂಚೆ ಮತಗಳ ಮರು ಎಣಿಕೆ ನಡೆಸಲಾಗಿದೆ. ಈ ವಿಚಾರವಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರ ವಾಕ್ಸಮರ ಮಾತ್ರ ಮುಂದುವರೆದಿದೆ.

ಮಗು ಸೇರಿ ಮೂವರ ದುರ್ಮರಣ

ಸಹಕಾರದೊಂದಿಗೆ ಸಂಚಾರಕ್ಕೆ ಅಡ್ಡಲಾಗಿ ನಿಂತಿದ್ದ ಲಾರಿ ಮತ್ತು ಕಾರನ್ನು ತೆರವುಗೊಳಿಸಿ ಕಾರಿನಲ್ಲಿ ಸಾವನ್ನಪ್ಪಿದವರನ್ನು ಶವಾಗಾರಕ್ಕೂ, ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದರು. ಲಾರಿಯ ಚಾಲಕ ರಂಜಿತ್ ಎಂಬಾತನ ಕಾಲು ಮುರಿದಿದ್ದು ಆತನನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು.

ಅಕ್ರಮ ಪತ್ತೆ: ಈ ರಸ್ತೆ ಅಪಘಾತದಿಂದ ಗುಂಡ್ಲುಪೇಟೆ ತಾಲೂಕಿನಿಂದ ಕೇರಳಕ್ಕೆ ಅಕ್ರಮವಾಗಿ ಕಪ್ಪು ಮಣ್ಣನ್ನು ಸಾಗಿಸುತ್ತಿದ್ದುದು ಬೆಳಕಿಗೆ ಬಂದಿದ್ದು, ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿದ್ದಾರೆ.

ಉಪಸಮರದಲ್ಲಿ ಗೆಲುವು ಯಾರಿಗೆ?

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆದಿಯಾಗಿ ಇಡೀ ಸರ್ಕಾರವೇ ಉಭಯ ಕ್ಷೇತ್ರಗಳಲ್ಲಿ ಹೋರಾಟ ನಡೆಸಿದೆ. ಅಲ್ಪ ಸಂಖ್ಯಾತ ಮುಖಂಡ ಸಾದಿಕ್ ಪೈಲ್ವಾನ್‌ಗೆ ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಾಳಯದಲ್ಲಿ ಭಿನ್ನಮತ ಸ್ಫೋಟಗೊಂಡಿತಾದರೂ ನಂತರದಲ್ಲಿ ಒಗ್ಗಟ್ಟು ಪ್ರದರ್ಶನದ ಪ್ರಹಸನ ನಡೆಯಿತು.

ಇದನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿ, ಚುನಾವಣೆ ಗೆಲುವಿಗೆ ಇನ್ನಿಲ್ಲದ ಕಸರತ್ತು ನಡೆಸಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೂ ಈ ಚುನಾವಣೆ ಗೆಲುವು ಮಹತ್ವದ್ದಾಗಿದೆ. ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿ ದಂತೆ ಜೆಡಿಎಸ್ ನಾಯಕರೂ ಮೈತ್ರಿ ಅಭ್ಯರ್ಥಿಗಳ ಪರ ವ್ಯಾಪಕ ಪ್ರಚಾರ ನಡೆಸಿದ್ದಾರೆ. ಈ ಹಿಂದೆ 2024 ನವೆಂಬರ್‌ನಲ್ಲಿ ಶಿಗ್ಗಾಂವಿ, ಚನ್ನಪಟ್ಟಣ ಹಾಗೂ ಸಂಡೂರು ವಿಧಾನ ಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿತ್ತು. ಆಗ ಮೂರೂ ಕಡೆ ಆಡಳಿತಾರೂಢ ಕಾಂಗ್ರೆಸ್ ಗೆದ್ದು ಬೀಗಿತ್ತು. ಆದರೆ ಈಗಿನ ಉಪಚುನಾವಣೆಯಲ್ಲಿ ಗೆಲುವು ಸುಲಭ ಸಾಧ್ಯವಲ್ಲ ಎಂದು ವಿಶ್ಲೇಷಿಸಲಾಗಿದೆ. ದಾವಣಗೆರೆಯಲ್ಲಿ ಕಾಂಗ್ರೆಸ್ ಪಾಳೆಯದಲ್ಲಿನ ಭಿನ್ನಮತದ ಪರಿಣಾಮ ಬಿಜೆಪಿ ಗೆಲ್ಲುವ ಸಾಧ್ಯತೆ ಇದೆ ಎನ್ನಲಾಗಿದೆ. ಎರಡೂ ಕ್ಷೇತ್ರಗಳಲ್ಲಿ ಗೆಲುವು ನಮ್ಮದೇ ಎಂಬುದು ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರ ವಿಶ್ವಾಸದ ನುಡಿಯಾಗಿದೆ. ಆದರೆ ಮತದಾರರ ನಿರ್ಧಾರ ಏನೆಂಬುದು ಸೋಮವಾರ ಮಧ್ಯಾಹ್ನದ ವೇಳೆಗೆ ಬಹಿರಂಗವಾಗಲಿದೆ.

7 ಕ್ಷೇತ್ರಗಳ ಉಪಸಮರ ಫಲಿತಾಂಶ: ಕರ್ನಾಟಕದ ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರಗಳ ಜೊತೆಗೆ ಮಹಾರಾಷ್ಟ್ರದ ಬಾರಾಮತಿ, ರಾಹುರಿ, ತ್ರಿಪುರದ ಧರ್ಮನಗರ್, ನಾಗಾಲ್ಯಾಂಡ್‌ನ ಕೊರಿದಂಗ್ ಮತ್ತು ಗುಜರಾತ್‌ನ ಉಮ್ರೆತ್ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶ ಸೋಮವಾರ(ಮೇ 4) ಪ್ರಕಟವಾಗಲಿದೆ.

ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ

ಸಮೀಕ್ಷೆಗಳು ಹೇಳಿದ್ದರೆ, 2 ಸಮೀಕ್ಷೆಗಳು ಸತತ 4ನೇ ಬಾರಿಗೆ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಅಧಿಕಾರಕ್ಕೆ ಬರಲಿದೆ ಎಂದು ಹೇಳಿದ್ದು, ಅಂತಿಮವಾಗಿ ಯಾವ ಪಕ್ಷ ಗದ್ದುಗೆ ಏರಲಿದೆ ಎಂಬುದನ್ನು ಕಾದು ನೋಡಬೇಕಿದೆ.

ತಮಿಳುನಾಡು: ನೆರೆಯ ತಮಿಳುನಾಡು ಫಲಿತಾಂಶವೂ ತೀವ್ರ ಕುತೂಹಲ ಕೆರಳಿಸಿದೆ. ಆಡಳಿತರೂಢ ಡಿಎಂಕೆ, ಅಣ್ಣಾ ಡಿಎಂಕೆ–ಬಿಜೆಪಿ ಮೈತ್ರಿಕೂಟ ಮತ್ತು ಚಿತ್ರನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷಗಳ ನಡುವೆ ತ್ರಿಕೋನ ಸ್ಪರ್ಧೆ ನಡೆದಿದೆ. ಒಟ್ಟು 234 ಸದಸ್ಯ ಬಲದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು 118 ಸ್ಥಾನಗಳ ಸರಳ ಬಹುಮತದ ಅಗತ್ಯವಿದೆ. ಚುನಾವಣಾ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳು ಗ್ಯಾರಂಟಿಗಳ ಭರವಸೆಯ ಮಹಾಪೂರವನ್ನೇ ಹರಿಸಿದ್ದು, ಈ ಬಾರಿ ದಾಖಲೆಯ ಶೇ.85.10 ರಷ್ಟು ಮತದಾನ ನಡೆದಿದೆ. ಮತ್ತೆ ಡಿಎಂಕೆ ಅಧಿಕಾರಕ್ಕೆ ಬರಲಿದೆ ಎಂದು 6 ಸಮೀಕ್ಷೆಗಳು ಸುಳಿವು ನೀಡಿದ್ದರೆ, 1 ಸಮೀಕ್ಷೆ ಅಣ್ಣಾಡಿಎಂಕೆ–ಬಿಜೆಪಿ ಕೂಟದ ಗೆಲುವಿನ ಭವಿಷ್ಯ ನುಡಿದಿದೆ ಇನ್ನು ಚುನಾವಣೆಯಲ್ಲಿ ಸಂಚಲನ ಮೂಡಿಸಿದ್ದ ನಟ ವಿಜಯ್ ಅವರ ಟಿವಿಕೆ ಪಕ್ಷ ಹೆಚ್ಚು ಸ್ಥಾನ ಗೆಲ್ಲದು ಎಂದು 5 ಸಮೀಕ್ಷೆಗಳು ಹೇಳಿದ್ದರೆ, ಒಂದು ಸಮೀಕ್ಷೆ ಮಾತ್ರ ವಿಜಯ್ ಪಕ್ಷ 120 ಸ್ಥಾನ ಗೆಲ್ಲುವ ಮೂಲಕ ಇತಿಹಾಸ ಬರೆಯಲಿದೆ ಎಂದು ತಿಳಿಸಿದೆ. ಆದರೆ, ಟಿವಿಕೆ ಕಿಂಗ್ ಮೇಕರ್ ಆಗುವ ಸಾಧ್ಯತೆಯೂ ಹೆಚ್ಚಿದೆ ಎಂದು ವಿಶ್ಲೇಷಿಸಲಾಗಿದೆ.

ಕೇರಳ: ಮತ್ತೊಂದು ನೆರೆರಾಜ್ಯ ಕೇರಳದ ಚುನಾವಣೆಯೂ ಈ ಬಾರಿ ಕುತೂಹಲ ಕೆರಳಿಸಿದೆ. ಒಟ್ಟು 140ರಲ್ಲಿ 71 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಪಕ್ಷ ಅಥವಾ ಮೈತ್ರಿಕೂಟ ಸರ್ಕಾರ ರಚಿಸಲಿದೆ. ಸತತ 10 ವರ್ಷಗಳಿಂದ ಆಳ್ವಿಕೆ ನಡೆಸಿರುವ ಎಡಪಕ್ಷಗಳ ಎಲ್‌ಡಿಎಫ್ ಮೈತ್ರಿಕೂಟ ಮತ್ತೆ ಅಧಿಕಾರ ಹಿಡಿಯಲು ಪ್ರಯತ್ನ ನಡೆಸಿದ್ದರೂ ಈ ಬಾರಿ ಚುನಾವಣೆಯಲ್ಲಿ ಆಡಳಿತ ವಿರೋಧಿ ಅಲೆ ಕಂಡು ಬಂದಿದೆ ಎನ್ನಲಾಗಿದೆ. ಹಲವು ಭ್ರಷ್ಟಾಚಾರದ ಆರೋಪಕ್ಕೆ ತುತ್ತಾಗಿದ್ದ ಎಲ್‌ಡಿಎಫ್ ಮೈತ್ರಿಕೂಟ ಈ ಬಾರಿ ಅಧಿಕಾರ ಕಳೆದುಕೊಳ್ಳಲಿದ್ದು, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಟ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಸಮೀಕ್ಷೆಗಳು ಹೇಳಿವೆ. ಬಿಜೆಪಿ ಈ ಬಾರಿ ದಾಖಲೆಯ 10–14 ಸ್ಥಾನ ಗೆಲ್ಲಬಹುದು ಎಂದು ಸಮೀಕ್ಷೆಗಳಿಂದ ತಿಳಿದುಬಂದಿದೆ.

ಅಸ್ಸಾಂ: ಈ ಬಾರಿ ಕಾಂಗ್ರೆಸ್ ಹಾಗೂ ಬಿಜೆಪಿ, ಅಸ್ಸಾಂ ರಾಜ್ಯದ ಅಧಿಕಾರ ಹಿಡಿಯಲು ತೀವ್ರ ಕಸರತ್ತು ನಡೆಸಿವೆ. 126 ಸದಸ್ಯ ಬಲ ಹೊಂದಿದ್ದು, ಅಧಿಕಾರ ಹಿಡಿಯಲು 64 ಸ್ಥಾನಗಳನ್ನು ಗೆಲ್ಲಬೇಕಿದೆ. ಈ ಬಾರಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಬಹುತೇಕ ಚುನಾವಣಾ ಸಮೀಕ್ಷೆಗಳು ಹೇಳಿದ್ದು, ಇದು ದಿಟವಾದರೆ ಹಾಲಿ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮತ್ತೊಮ್ಮೆ ಸಿಎಂ ಆಗುವ ಸಾಧ್ಯತೆ ಇದೆ. ಗೆಲುವಿಗೆ ತೀವ್ರ ಕಸರತ್ತು ನಡೆಸಿರುವ ಕಾಂಗ್ರೆಸ್, ಚುನಾವಣಾ ಮತಗಟ್ಟೆ ಸಮೀಕ್ಷೆಗಳನ್ನು ನಂಬುವುದಿಲ್ಲ, ಈ ಬಾರಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದೆ.

ಪುದುಚೇರಿ: ಇನ್ನು ಕೇಂದ್ರಾಡಳಿತ ಪ್ರದೇಶ ಪುದುಚೇರಿ 30 ಕ್ಷೇತ್ರಗಳನ್ನು ಒಳಗೊಂಡಿದ್ದು, ಇದರಲ್ಲಿ 16 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಪಕ್ಷ ಅಧಿಕಾರದ ಗದ್ದುಗೆ ಏರಲಿದೆ. ಎನ್‌ಡಿಎ ಕೂಟದ ಭಾಗವಾಗಿರುವ ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್(ಎಐಎನ್‌ಆರ್‌ಸಿ) ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಒಟ್ಟಾರೆ ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಸ್ಥಳೀಯ ರಾಜಕೀಯ ಪಕ್ಷಗಳು ಪ್ರತಿಷ್ಠೆಯಾಗಿ ಸ್ವೀಕರಿಸಿ, ಚುನಾವಣೆಯಲ್ಲಿ ಹೋರಾಟ ನಡೆಸಿವೆ. ಚುನಾವಣೋತ್ತರವಾಗಿ ನಡೆಸಿರುವ ಸಮೀಕ್ಷೆಗಳಲ್ಲೂ ಮಿಶ್ರ ವರದಿ ಪ್ರಕಟವಾಗಿದೆ. ಐದರಲ್ಲಿ ಯಾವ ರಾಜ್ಯದಲ್ಲಿ ಯಾವ ಪಕ್ಷ ಜಯಭೇರಿ ಭಾರಿಸಿ, ಅಧಿಕಾರದ ಗದ್ದುಗೆ ಏರಲಿದೆ ಎಂಬ ಕುತೂಹಲಕ್ಕೆ ಸೋಮವಾರ ತೆರೆಬೀಳಿದೆ. ಮರು ಮತದಾನದ ಕಾರಣದಿಂದಾಗಿ ಪಶ್ಚಿಮ ಬಂಗಾಳದ ಫಾಲ್ಟಾ ಕ್ಷೇತ್ರದ ಫಲಿತಾಂಶ ಮಾತ್ರ ಮೇ 24ಕ್ಕೆ ಪ್ರಕಟವಾಗಲಿದೆ.

ನಾಯಕತ್ವ ಬದಲಾವಣೆ ಪ್ರಹಸನ ಕ್ಲೈಮ್ಯಾಕ್ಸ್!

ಡಿಕೆಶಿ ಪ್ರಯತ್ನಕ್ಕೆ ಬ್ರೇಕ್ ಹಾಕುವ ಯತ್ನ ನಡೆಸಿದ್ದಾರೆ.

ಇದು ಕಾಲವಲ್ಲ: ನಾಯಕತ್ವ ಬದಲಾವಣೆ ಬಗ್ಗೆ ಕೊಪ್ಪಳದಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರೂ ಆದ ಯಲಬುರ್ಗಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಈಗಿನ ಪರಿಸ್ಥಿತಿಯಲ್ಲಿ ಬದಲಾವಣೆ ಮಾಡುವುದಿಲ್ಲ ಎಂದಿದ್ದಾರೆ.

ಒಂದು ವೇಳೆ ಬದಲಾವಣೆ ಮಾಡಬೇಕೆಂದು ಪಕ್ಷ ನಿರ್ಧರಿಸಿದರೆ ಕಡ್ಡಾಯವಾಗಿ ಶಾಸಕರ ಅಭಿಪ್ರಾಯ ಕೇಳಬೇಕು, ಅವರಿಗೆ ಪರ್ಯಾಯವಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಮಾಡಬೇಕು. ಕಳೆದ ವಾರ ಖರ್ಗೆ ಅವರನ್ನು ಭೇಟಿಯಾಗಿ ರಾಜಕೀಯ ವಿಚಾರಗಳನ್ನು ಚರ್ಚಿಸಿದ್ದೇನೆ. ರಾಜ್ಯದಲ್ಲಿ ಅನಗತ್ಯವಾಗಿ ಸೃಷ್ಟಿಯಾಗುತ್ತಿರುವ ಗೊಂದಲಗಳಿಗೆ ಅಂತ್ಯ ಹಾಡಬೇಕು ಎಂದು ಮನವಿ ಮಾಡಿದ್ದೇನೆ. ಸಚಿವ ಸಂಪುಟ ಪುನರ್ ರಚನೆ ಮಾಡಿ 25 ಜನ ಸಚಿವರನ್ನು ತೆಗೆದು ಹೊಸಬರು ಹಾಗೂ ಹಿರಿಯರಿಗೆ ಅವಕಾಶ ಕೊಡುವಂತೆ ಕೇಳಿದ್ದೇನೆ ಎಂದು ತಿಳಿಸಿದರು. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಾರದು ಎಂದು ನಾನು ಹೇಳಿಲ್ಲ. ಆದರೆ, ಸಿಎಂ ಆಗುತ್ತೇನೆ ಎಂದು ಶಿವಕುಮಾರ್ ಎಲ್ಲಿಯಾದರೂ ಹೇಳಿದ್ದಾರೆಯೇ. ನಾನು ಯಾವ ನಾಯಕರ ಬೆಂಬಲಿಗನೂ ಅಲ್ಲ. ಕಾಂಗ್ರೆಸ್ ಪಕ್ಷದ ಬೆಂಬಲಿಗ. ಸಿದ್ದರಾಮಯ್ಯನವರ ಆಡಳಿತ ವೈಖರಿ ಚೆನ್ನಾಗಿರುವುದರಿಂದ ಅವರ ಬಗ್ಗೆ ಪ್ರೀತಿಯಿದೆ. ಆದ್ದರಿಂದ ಅವರ ಪರವಾಗಿ ಮಾತನಾಡುತ್ತೇನೆ ಎಂದು ಹೇಳಿದರು.

ತಾವು ಸಚಿವ ಸ್ಥಾನದ ಆಕಾಂಕ್ಷಿಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, ನನಗೆ ಪ್ರಧಾನಿಯಾಗುವ ಆಸೆಯಿದೆ. ಸಚಿವ ಸ್ಥಾನ ನೀಡುವ ಬಗ್ಗೆ ಪಕ್ಷ ತೀರ್ಮಾನಿಸುತ್ತದೆ. ಆದರೆ ಸಚಿವ ಸ್ಥಾನ ನೀಡುವಂತೆ ಖರ್ಗೆ ಅವರ ಬಳಿ ಕೇಳಿಲ್ಲ. ಮಗು ಅಳದಿದ್ದರೆ ತಾಯಿಯೇ ಹಾಲು ಕೊಡುವುದಿಲ್ಲ ಎನ್ನುತ್ತೀರಿ. ಆದರೆ, ನಿಜವಾದ ತಾಯಿ ಖಂಡಿತವಾಗಿಯೂ ಹಾಲು ಕೊಡುತ್ತಾಳೆ ಎಂದು ಮಾರ್ಮಿಕವಾಗಿ ನುಡಿದರು.

ನನಗೂ ಸಿಎಂ ಆಗುವ ಆಸೆ ಇದೆ: ಈ ನಡುವೆ ಖಾಸಗಿ ಸುದ್ದಿ ವಾಹಿನಿ ಕಾರ್ಯಕ್ರಮದಲ್ಲಿ ಮಾತನಾಡಿರುವ ಗೃಹಮಂತ್ರಿ ಡಾ.ಜಿ.ಪರಮೇಶ್ವರ್, ನನಗೂ ಮುಖ್ಯಮಂತ್ರಿ ಆಗುವ ಆಸೆ ಇದೆ. ಆದ್ರೆ ಅದನ್ನ ಸಾರ್ವಜನಿಕವಾಗಿ ಅಥವಾ ಮಾಧ್ಯಮದ ಮೂಲಕ ಹೇಳುವ ಅವಶ್ಯಕತೆಯಿಲ್ಲ. ಕತ್ತಿ ಗುರಾಣಿ ಹಿಡಿದು ಸಿಎಂ ಸ್ಥಾನ ಕೇಳಬೇಕಿಲ್ಲ. ಹೇಳಬೇಕಾದವರಿಗೆ ಖಾಸಗಿಯಾಗಿ ಹೇಳಿದ್ದೇನೆ ಎಂದಿದ್ದಾರೆ.

ನಾವು ಆಶಾವಾದಿಗಳಾಗಿದ್ದೇವೆ. ದಲಿತ ಸಿಎಂ ಹುದ್ದೆಗೆ ನನ್ನನ್ನ ಪರಿಗಣಿಸುವುದಿಲ್ಲ ಎಂದು ನಾನೇಕೆ ಅಂದುಕೊಳ್ಳಲಿ. ಹೈಕಮಾಂಡ್‌ಗೆ ಪರಮೇಶ್ವರ್ ಏನು ಅಂತ ಗೊತ್ತಿದೆ, ನನ್ನ ಸಾಮರ್ಥ್ಯ ಗೊತ್ತಿದೆ. ಮಾಧ್ಯಮದಲ್ಲಿ ಕುಳಿತು ಸಿಎಂ ಮಾಡಿ ಅಂತ ಕೇಳುವ ಅವಶ್ಯಕತೆ ನನಗಿಲ್ಲ. ಸಿದ್ದರಾಮಯ್ಯ ಅವರು ನನ್ನ ಹೆಸರು ಸೂಚಿಸುತ್ತಾರೆ ಎಂದು ಹೇಳಲಾಗದು. ಆದರೆ ಹೈಕಮಾಂಡ್‌ಗೆ ನನ್ನ ಮೇಲೆ ವಿಶ್ವಾಸ ಇದೆ, ಸೂಕ್ತ ತೀರ್ಮಾನ ಮಾಡುತ್ತಾರೆ ಎಂದು ತಿಳಿಸಿದ್ದಾರೆ.

ಇನ್ನು ಕೊಟ್ಟ ಮಾತು ಉಳಿಸಿಕೊಳ್ಳಬೇಕು ಎನ್ನುವ ಡಿಕೆ ಸಹೋದರರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಪರಮೇಶ್ವರ್, ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅವರು ಸಿಎಂ ಸ್ಥಾನ ಕೇಳುವುದರಲ್ಲಿ ತಪ್ಪೇನಿಲ್ಲ. ಮಲ್ಲಿಕಾರ್ಜುನ ಖರ್ಗೆ ಅವರನ್ನೇ ಮುಖ್ಯಮಂತ್ರಿ ಮಾಡಲು ಹೈಕಮಾಂಡ್ ತೀರ್ಮಾನ ಮಾಡಿದರೆ ಸಂತೋಷ. ಖರ್ಗೆ ಅವರು ಪ್ರಧಾನಿ ಆಗುವ ಸಾಮರ್ಥ್ಯ ಇರುವ ಮರು, ದಲಿತ ಸಮುದಾಯವನ್ನ ಪ್ರತಿನಿಧಿಸಿ ಮುಖ್ಯಮಂತ್ರಿ ಆಗುವುದಾದರೆ ಸ್ವಾಗತ ಮಾಡುತ್ತೇನೆ ಎಂದಿದ್ದಾರೆ.

ಡಿಕೆಶಿ ಭರವಸೆ: ಕೆಲ ದಿನಗಳ ಹಿಂದೆ ಖಾಸಗಿ ವಾಹಿನಿಯೊಂದರ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಡಿ.ಕೆ.ಶಿವಕುಮಾರ್, ಕರ್ನಾಟಕದ ಜನತೆ 136 ಶಾಸಕರನ್ನು ನನ್ನ ನಾಯಕತ್ವದಲ್ಲಿ ಗೆಲ್ಲಿಸಿದ್ದಾರೆ. ನಾಯಕತ್ವ ಬದಲಾವಣೆಗೆ ಕಾಲವೇ ಉತ್ತರ ನೀಡಲಿದೆ. ನಾವು ಭರವಸೆ ಮತ್ತು ಆಕಾಂಕ್ಷೆಗಳೊಂದಿಗೆ ಬದುಕುತ್ತಿದ್ದೇವೆ. ನಾಯಕತ್ವ ವಿಚಾರವಾಗಿ ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳಲಿದೆ ಎಂದಿದ್ದರು.

ಅಪಾರ್ಟ್‌ಮೆಂಟ್‌ನಲ್ಲಿ ಭೀಕರ ಅಗ್ನಿ ಅವಘಡ: 9 ಮಂದಿ ಸಜೀವ ದಹನ

ನವದೆಹಲಿ: ಪೂರ್ವ ದೆಹಲಿಯ ವಿವೇಕ್ ವಿಹಾರ್ ಪ್ರದೇಶದ ಕಟ್ಟಡದಲ್ಲಿ ಅಗ್ನಿ ಅವಘಡ ಸಂಭವಿಸಿ ಕನಿಷ್ಠ ಒಂಬತ್ತು ಮಂದಿ ಮೃತಪಟ್ಟ ಘಟನೆ ಭಾನುವಾರ ಬೆಳಗಿನ ಜಾವ ಸಂಭವಿಸಿದೆ. ವಿವೇಕ್ ವಿಹಾರ್ ಫೇಸ್–1ರ ನಾಲ್ಕು ಮಹಡಿಗಳ ಕಟ್ಟಡದಲ್ಲಿ ನಸುಕಿನ ಜಾವ ಸುಮಾರು 3.48ರ ಸುಮಾರಿಗೆ ಈ ಘಟನೆ ಸಂಭವಿಸಿದ್ದು, ತಕ್ಷಣವೇ ಪೊಲೀಸ್, ಅಗ್ನಿಶಾಮಕ ಮತ್ತು ವಿಪತ್ತು ನಿರ್ವಹಣಾ ತಂಡಗಳು ಸ್ಥಳಕ್ಕೆ ಧಾವಿಸಿವೆ. ಎಸಿ ಸ್ಫೋಟಗೊಂಡಿರುವುದೇ ಈ ದುರ್ಘಟನೆಗೆ ಕಾರಣ ಶಂಕಿಸಲಾಗಿದೆ.



ಕಟ್ಟಡದ ಎರಡನೇ, ಮೂರನೇ ಮತ್ತು ನಾಲ್ಕನೇ ಮಹಡಿಗಳಲ್ಲಿರುವ ಫ್ಲ್ಯಾಟ್‌ಗಳಲ್ಲಿ ಬೆಂಕಿ ಆವರಿಸಿಕೊಂಡಿದ್ದು, ದೊಡ್ಡ ಮಟ್ಟದ ರಕ್ಷಣಾ ಕಾರ್ಯಾಚರಣೆಯನ್ನು ಆರಂಭಿಸಲಾಯಿತು. ಅಗ್ನಿಶಾಮಕ ಕಾರ್ಯಾಚರಣೆ ವೇಳೆ ಸುಮಾರು 15 ಮಂದಿಯನ್ನು ರಕ್ಷಿಸಲಾಗಿದೆ. ಅವರಲ್ಲಿ ಸಣ್ಣಪುಟ್ಟ ಗಾಯಗಳಾಗಿದ್ದ ಇಬ್ಬರನ್ನು ಗುರು ತೇಗ್ ಬಹಾದೂರ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಒಟ್ಟು 12 ಅಗ್ನಿಶಾಮಕ ವಾಹನಗಳನ್ನು ಬೆಂಕಿ ನಂದಿಸಲು ಬಳಸಲಾಗಿದ್ದು, ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ, ಸಂಚಾರ ಪೊಲೀಸ್ ಮತ್ತು ಸ್ಥಳೀಯ ಪೊಲೀಸರು ರಕ್ಷಣಾ ಮತ್ತು ಸ್ಥಳಾಂತರ ಕಾರ್ಯದಲ್ಲಿ ಸಹಕರಿಸಿದ್ದಾರೆ. ಕೆಲವು ಗಂಟೆಗಳ ಕಾರ್ಯಾಚರಣೆ ಬಳಿಕ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ. ಮೃತರ ಗುರುತು ಪತ್ತೆ ಕಾರ್ಯ ಮುಂದುವರೆದಿದೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಮತಾ ಬ್ಯಾನರ್ಜಿ ಸ್ಪರ್ಧಾ ಕ್ಷೇತ್ರದ ಮತ ಎಣಿಕೆ ಕೇಂದ್ರದ ಬಳಿ ಗಲಾಟೆ!

ಭವಾನಿಪುರ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ಪರ್ಧಿಸಿರುವ ಭವಾನಿಪುರ ವಿಧಾನಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರದಲ್ಲಿ ಮತ ಎಣಿಕೆಗೂ ಮುನ್ನಾ ದಿನವಾದ ಭಾನುವಾರ ಭಾರೀ ಗಲಾಟೆ ನಡೆದಿದೆ.

ಇವಿಎಂ ಇಟ್ಟಿರುವ ಶಾಲಾ ಆವರಣಕ್ಕೆ ಪ್ರವೇಶಿಸಲು ಬಿಜೆಪಿಯ ಧ್ವಜ ಹೊಂದಿರುವ ಎರಡು ಕಾರುಗಳಿಗೆ ಅವಕಾಶ ನೀಡಲಾಗಿದೆ ಎಂದು ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ಆರೋಪಿಸಿ, ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳದಲ್ಲಿರುವ ಸಿಐಎಸ್‌ಎಫ್ ಸಿಬ್ಬಂದಿ, ಅಧಿಕೃತ ಗುರುತಿನ ಚೀಟಿ ಇಲ್ಲದ ಯಾವುದೇ ವಾಹನ ಅಥವಾ ವ್ಯಕ್ತಿಯನ್ನು ಎಣಿಕೆ ಕೇಂದ್ರದ ಆವರಣ ಪ್ರವೇಶಿಸಲು ಬಿಡುತ್ತಿಲ್ಲ. ಹಾಗಾದರೆ ಕಳೆದ ಕೆಲವು ದಿನಗಳಿಂದ ನಾವು ನೋಡದ ಈ ಕಾರು ಹೋಗಲು ಹೇಗೆ ಅವಕಾಶ ನೀಡಿದರು. ನಾವು ಪ್ರತಿಭಟನೆ ನಡೆಸಿದ ನಂತರ ಕೇಂದ್ರ ಪಡೆಗಳು ನಮ್ಮನ್ನು 100 ಮೀಟರ್ ದೂರ ಸರಿಯುವಂತೆ ಕೇಳಿಕೊಂಡವು ಎಂದು ಟಿಎಂಸಿ ಕಾರ್ಯಕರ್ತರೊಬ್ಬರು ಹೇಳಿದ್ದಾರೆ.

ಆದರೆ, ಕಾರಿನಲ್ಲಿ ಆಕ್ಷೇಪಾರ್ಹವಾದದ್ದು ಏನೂ ಕಂಡುಬಂದಿಲ್ಲವಾದ್ದರಿಂದ ಅದನ್ನು ಬಿಡಲು ಅನುಮತಿಸಲಾಯಿತು ಎಂದು ಚುನಾವಣಾ ಆಯೋಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖುದಿರಾಮ್ ಅನುಶೀಲನ್ ಕೇಂದ್ರದಲ್ಲಿರುವ ಇವಿಎಂ ಸ್ಟ್ರಾಂಗ್ ರೂಂನಲ್ಲಿ ಅಂಚೆ ಮತಪತ್ರಗಳ ಕವರ್‌ಗಳನ್ನು ಅನಧಿಕೃತವಾಗಿ ವಿಂಗಡಿಸಲಾಗಿದೆ ಎಂದು ಆರೋಪಿಸಿ ಟಿಎಂಸಿ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ. ಸ್ಟ್ರಾಂಗ್ ರೂಮ್‌ಗೆ ಅನಧಿಕೃತ ವ್ಯಕ್ತಿಗಳು ಪ್ರವೇಶಿಸಿದ್ದಾರೆ ಎಂದು ಆರೋಪಿಸಿ ಗುರುವಾರ ರಾತ್ರಿ ಸಖಾವತ್ ಸ್ಮಾರಕ ಬಾಲಕಿಯರ ಶಾಲೆಯ ಅದೇ ಎಣಿಕೆ ಕೇಂದ್ರದ ಮುಂದೆ ಬ್ಯಾನರ್ಜಿ ನಾಲ್ಕು ಗಂಟೆಗಳ ಕಾಲ ಧರಣಿ ನಡೆಸಿದ್ದರು. ಇದಾದ ಬೆನ್ನಲ್ಲೇ ಈ ಘಟನೆ ನಡೆದಿದೆ.

ಕಾಂಕ್ರಿಟ್ ತಡೆಗೋಡೆ ಬಹುತೇಕ ಪೂರ್ಣ

4.98 ಕೋಟಿಯ ಮತ್ತೊಂದು ಪ್ಯಾಕೇಜ್‌ನಲ್ಲಿ ತಡೆಗೋಡೆ, ಡೆಕ್ ಹಾಗೂ ರಸ್ತೆ ಡಾಂಬರೀಕರಣಕ್ಕೆ ಟೆಂಡರ್ ನೀಡಲಾಯಿತು. ಈಗ ತಡೆಗೋಡೆ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಮಳೆ ನೀರು ಹಾದು ಹೋಗಲು ಸಣ್ಣ ಮೋರಿ ಅಥವಾ ಡೆಕ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮಳೆ ನೀರು ಒಂದೆಡೆ ನಿಂತರೆ ಮತ್ತೆ ಭೂಕುಸಿತವಾಗುವ ಸಾಧ್ಯತೆ ಇರುವುದರಿಂದ ಬಹಳ ಎಚ್ಚರಿಕೆ ವಹಿಸಲಾಗಿದೆ. ಮಳೆ ನೀರು ಸರಾಗವಾಗಿ ಬೆಟ್ಟದ ಇಳಿಜಾರಿನಲ್ಲಿ ಹಾದು ಹೋಗಲು ನಂದಿ ಮಾರ್ಗದಲ್ಲಿ ಪ್ಯಾರಪಿಟ್ ಬಿಟ್ಟು ಡೆಕ್ ಅಥವಾ ಸಣ್ಣ ಮೋರಿ ನಿರ್ಮಾಣ ಮಾಡಲಾಗುತ್ತಿದೆ. ಚಾಮುಂಡಿಬೆಟ್ಟ ಅರಣ್ಯ ವ್ಯಾಪ್ತಿಗೆ ಬರುವುದರಿಂದ ಅಲ್ಲಿನ ವನ್ಯಜೀವಿಗಳಿಗೆ ಯಾವುದೇ ತೊಂದರೆ ಆಗದಂತೆ ಬೆಳಗ್ಗೆ 6.30ರಿಂದ ಸಂಜೆ 6.30ರವರೆಗೆ ಕಾಮಗಾರಿ ನಡೆಸಲು ಕಾಲಮಿತಿ ವಿಧಿಸಲಾಗಿದೆ. ಈ ಸಮಯದಲ್ಲಿ ಡೆಕ್ ಹಾಗೂ ಡಾಂಬರೀಕರಣ ಕಾಮಗಾರಿ ನಡೆಸಬೇಕಿದೆ. ಸದ್ಯ ನಂದಿ ಮಾರ್ಗದಲ್ಲಿ ತಡೆ ಗೋಡೆ ನಿರ್ಮಾಣ ಬಹುತೇಕ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಮಣ್ಣಿನ ರಸ್ತೆಯಲ್ಲೇ ಕೆಲವು ವಾಹನಗಳು ಸಂಚರಿಸುತ್ತಿವೆ. ಡೆಕ್ ಹಾಗೂ ರಸ್ತೆ ಡಾಂಬರೀಕರಣ ಪೂರ್ಣಗೊಂಡ ನಂತರ ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ಲೋಕೋಪಯೋಗಿ ಇಲಾಖೆ ನಿರ್ಧರಿಸಿದೆ.

ಮೈಸೂರು ಮಿತ್ರ ಸೋಮವಾರ 4 ಮೇ 2026

ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ : ಚೆಕ್ಕೇರ ತಂಡ ಚಾಂಪಿಯನ್



ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆಯ ಫೈನಲ್ಸ್ ಪಂದ್ಯದಲ್ಲಿ ಚೆಕ್ಕೇರ ತಂಡ 9ನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿತು.

ಮಡಿಕೇರಿ: ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಕೊಡವ ಕುಟುಂಬಗಳ ನಡುವೆ ಮೂರ್ನಾಡಿನ ಬಾಚೆಟ್ಟಿರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆದ 'ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ'ಯ ಫೈನಲ್ಸ್ ಪಂದ್ಯದಲ್ಲಿ ಚೆಕ್ಕೇರ ತಂಡ 9ನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಮಹಿಳಾ ಕ್ರಿಕೆಟ್‌ನಲ್ಲಿ ಹರಿಹರ ಮುಕ್ಕಾಟಿರ ತಂಡ ಚಾಂಪಿಯನ್ ಆಗಿ ಹೊರ ಹೊಮ್ಮಿದೆ. ಇದೇ ಮೊದಲ ಬಾರಿಗೆ ಫೈನಲ್ ಹಂತ ಪ್ರವೇಶಿಸಿದ ಕೆದಮಳ್ಳೂರು ಮಾಳೇಟಿರ ಕುಟುಂಬದ ಪುರುಷರ ತಂಡ ಹಾಗೂ ಮಣವಟ್ಟಿರ ಕುಟುಂಬದ ಮಹಿಳಾ ತಂಡ ರನ್ನರ್ಸ್ ಸ್ಥಾನವನ್ನು ತಮ್ಮದಾಗಿಸಿಕೊಂಡವು.

ಕೊಟ್ಟಂಗಡ ಆತಿಥ್ಯ: 2027ರಲ್ಲಿ ನಡೆಯಲಿರುವ ಕೊಡವ ಕುಟುಂಬಗಳ ನಡುವಿನ 25ನೇ ವರ್ಷದ ಕ್ರಿಕೆಟ್ ಪಂದ್ಯಾಟದ ಆತಿಥ್ಯವನ್ನು ಕೊಟ್ಟಂಗಡ ಕುಟುಂಬ ವಹಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಮೂರ್ನಾಡು ಪಟ್ಟಣದಲ್ಲಿ ಕೊಟ್ಟಂಗಡ ಕುಟುಂಬದ ಬ್ಯಾನರ್ ಹಿಡಿದು ಸಾಂಪ್ರದಾಯಿಕ ಉಡುಗೆಯಲ್ಲಿ ಮೆರವಣಿಗೆ ನಡೆಸಿದರು. ಫೈನಲ್ ಪಂದ್ಯಾಟದ ಸಭಾ ಕಾರ್ಯಕ್ರಮದಲ್ಲಿ ಕೊಡವ ಕ್ರಿಕೆಟ್ ಅಕಾಡೆಮಿ ಧ್ವಜ ಹಸ್ತಾಂತರ ಮಾಡುವ ಮೂಲಕ 2027ರ ಅಧಿಕೃತ ಆತಿಥ್ಯ ಹಸ್ತಾಂತರಿಸಿತು.

ಕ್ರೀಡಾ ಪರಂಪರೆ ಮುಂದುವರೆಯಲಿ: ಫೈನಲ್ ಪಂದ್ಯಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೊಡಗು ಜಿಲ್ಲಾ ಮಾಜಿ ಉಸ್ತುವಾರಿ ಸಚಿವ ಸಾ.ರಾ.ಮಹೇಶ್, ಮೊದಲಿಗೆ ಆಟಗಾರರನ್ನು ಪರಿಚಯಿಸಿಕೊಂಡು ಪಂದ್ಯಾಟಕ್ಕೆ ಶುಭ ಕೋರಿದರು. ಕೊಡಗು ಜಿಲ್ಲೆ ಹಾಕಿ ಕ್ರೀಡಾ ಪರಂಪರೆಗೆ ಹೆಸರುವಾಸಿಯಾಗಿದೆ. ಇದರ ನಡುವೆಯೇ ಕುಟುಂಬಗಳ ನಡುವೆ ಕ್ರಿಕೆಟ್ ಆಯೋಜನೆ ಮಾಡುತ್ತಿರುವುದು ಮತ್ತೊಂದು ಹೆಮ್ಮೆಯ ಸಂಗತಿ. ನೂರಾರು ಕುಟುಂಬಗಳು ಹಾಕಿ ಮತ್ತು ಕ್ರಿಕೆಟ್ ಕ್ರೀಡೆಯಲ್ಲಿ ಪಾಲ್ಗೊಂಡಿವೆ. ಜಿಲ್ಲೆಯಲ್ಲಿರುವ ಎಲ್ಲಾ ಕುಟುಂಬಗಳು ಕೂಡ ಕ್ರೀಡಾಕೂಟಗಳನ್ನು ಅದ್ದೂರಿಯಿಂದ ಆಯೋಜಿಸುವಂತಾಗಲಿ. ಜಿಲ್ಲೆಯ ಈ ಕ್ರೀಡಾ ಪರಂಪರೆ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

ಒಲಿಂಪಿಕ್ಸ್ ಸೇರಿದಂತೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಕೊಡಗಿನ ಕ್ರೀಡಾಪಟುಗಳು ಪಾಲ್ಗೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕೊಡವ ಸಮುದಾಯ ಚಿಕ್ಕದಾದರೂ ಕೂಡ ಕ್ರೀಡಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ನೀಡಿದೆ ಎಂದು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ಬೇತ್ರಿ ಮುಕ್ಕಾಟಿರ ಕ್ರಿಕೆಟ್ ನಮ್ಮೆಯ ಅಧ್ಯಕ್ಷ ಸುರೇಶ್ ಪೆಮ್ಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮುಕ್ಕಾಟಿರ ರವಿ ಚೀಯಣ್ಣ ಅತಿಥಿಗಳನ್ನು ಸ್ವಾಗತಿಸಿದರು. ಉದ್ಯಮಿಗಳಾದ ಮಾಚೆಟ್ಟಿರ ಜೆನಿತ್ ಅಯ್ಯಪ್ಪ, ಮಣವಟ್ಟಿರ ಮಧು ಬೋಪಣ್ಣ, ಎಸ್.ಬಾಲಚಂದ್ರ, ಕೊಡವ ಕ್ರಿಕೆಟ್ ಅಕಾಡೆಮಿ ಉಪಾಧ್ಯಕ್ಷ ಚೇರಂಡ ಕಿಶನ್, ಹಿರಿಯ ಆರ್‌ಟಿಓ ಅಧಿಕಾರಿ ನಂದೇಟಿರ ಸುಬ್ಬಯ್ಯ, ಕ್ರಿಕೆಟ್ ಅಕಾಡೆಮಿ ಕಾರ್ಯದರ್ಶಿ ಬೋಪಣ್ಣ ಮತ್ತಿತ್ತರ ಗಣ್ಯರು ಉಪಸ್ಥಿತರಿದ್ದರು.

ಶರಣ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶಾಂತಮಲ್ಲಿಕಾರ್ಜುನ ಶ್ರೀಗಳಿಗೆ ಆಹ್ವಾನ



ಶರಣ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಶ್ರೀ ಶಾಂತ ಮಲ್ಲಿಕಾರ್ಜುನ ಶ್ರೀಗಳಿಗೆ ಸಮ್ಮೇಳನದ ಸಮಿತಿ ಅಭಿನಂದಿಸಿತು.

ಕುಶಾಲನಗರ: ಕೊಡಗು ಜಿಲ್ಲಾ ಪ್ರಥಮ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ವಿರಾಜಪೇಟೆ ತಾಲೂಕಿನ ಅರಮೇರಿಯ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರನ್ನು ಶರಣ ಸಾಹಿತ್ಯ ಸಮ್ಮೇಳನ ಸಮಿತಿ ವತಿಯಿಂದ ಆಹ್ವಾನ ನೀಡಲಾಯಿತು.

ಜಿಲ್ಲೆಯಲ್ಲಿ ನಡೆಯುತ್ತಿರುವ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಮಾಡಿರುವುದು ಶ್ರೀಮಠಕ್ಕೆ ದೊರೆತ ಗೌರವವಾಗಿದೆ. ಶೈಕ್ಷಣಿಕ ಹಾಗೂ ವಾಣಿಜ್ಯ ಕೇಂದ್ರವಾದ ಕುಶಾಲನಗರದಲ್ಲಿ ನಡೆಯುತ್ತಿರುವ ಸಮ್ಮೇಳನ ಸರ್ವರ ಸಹಭಾಗಿತ್ವದ ಕಾರ್ಯಕ್ರಮವಾಗಿ ರೂಪುಗೊಳ್ಳಬೇಕಿದೆ ಎಂದರು.

ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ ಗೌರವಾಧ್ಯಕ್ಷ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ನೇತೃತ್ವದಲ್ಲಿ ತೆರಳಿದ ನಿಯೋಗದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಕೊಡಗು ಜಿಲ್ಲಾಧ್ಯಕ್ಷ ಹೆಚ್.ವಿ.ಶಿವಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಎಸ್.ಮೂರ್ತಿ, ಬಿ.ನಟರಾಜು, ಕೆ.ಪಿ.ಪರಮೇಶ್, ಶಾಂಬ ಶಿವಯ್ಯ, ಎಸ್.ನಂದೀಶ್, ಬಿ.ಬಿ.ಲೋಕೇಶ್, ಪರಿಷತ್ತಿನ ಜಿಲ್ಲಾ ಯುವ ಘಟಕದ ಅಧ್ಯಕ್ಷ ಹಕ್ಕೆ ಮೋಹನ್ ಮತ್ತಿತರರು ಇದ್ದರು.

ಸಿಲಿಂಡರ್ ಬೆಲೆ ಹೆಚ್ಚಿಸಿ ಕೇಂದ್ರ ಸರ್ಕಾರ ಜನರ ಮೇಲೆ ಹೊರೆ

ವಿರಾಜಪೇಟೆ, ಮೇ.3–ಗೃಹ ಬಳಕೆ ಸಿಲಿಂಡರ್ ಬೆಲೆ ರೂ.60 ಹಾಗೂ ವಾಣಿಜ್ಯ ಬಳಕೆಗಳ ಗ್ಯಾಸ್ ಸಿಲಿಂಡರ್‌ಗೆ ಸಾವಿರ ರೂ ಹೆಚ್ಚು ಮಾಡುವ ಮೂಲಕ ಕೇಂದ್ರ ಸರ್ಕಾರ ಜನರ ಮೇಲೆ ಹೊರೆ ಹಾಕಿ ಜನರನ್ನು ಶೋಷಣೆಗೆ ಒಳಪಡಿಸಿದೆ ಎಂದು ಸಿಪಿಐಎಂ ಪಕ್ಷದ ಕೇಂದ್ರಸಮಿತಿ[ಪಿಬಿ] ಸದಸ್ಯ ಬಿ.ಬಿ.ರಾಘವಲು ಆರೋಪಿಸಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯಿಂದ ಪಟ್ಟಣದಲ್ಲಿರುವ ಅಂಬೇಡ್ಕರ್ ಭವನದಲ್ಲಿ ಇಂದಿನಿಂದ ಮೇ.7ರ ವರೆಗೆ ಆಯೋಜಿಸಲಾಗಿರುವ ಸಿಪಿಐಎಂ 'ರಾಜ್ಯ ಮಟ್ಟದ ಅಧ್ಯಯನ ಶಿಬಿರ'ದಲ್ಲಿ ಮಾತನಾಡಿದ ಅವರು ಎಲ್ಲಾ ದೇಶಗಳು ಇರಾನ್ ಇಂಧನದ ಮೇಲೆ ಅವಲಂಬಿತವಾಗಿರುವುದರಿಂದ ತೈಲ ಉತ್ಪನ್ನ ಸಮಸ್ಯೆಯಾಗಿ ಉಳಿದುಕೊಂಡಿದೆ. ಕಚ್ಚಾ ತೈಲ ಬೆಲೆ, ರಸಗೊಬ್ಬರ ಹಾಗೂ ಕುಡಿಯುವ ಬಾಟಲ್ ನೀರಿಗೂ ಬೆಲೆ ಹೆಚ್ಚು ಮಾಡುವ ಮೂಲಕ ಜನರನ್ನು ಸರಕಾರ ಶೋಷಣೆ ಮಾಡುತ್ತಿದೆ ಎಂದು ಆಪಾದಿಸಿದರು.



ಸಿಪಿಐಎಂ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಿಪಿಐಎಂ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್ ಮಾತನಾಡಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ ಜಾತಿ ಹೆಸರಿನಲ್ಲಿ ಸಂಘಟನೆ ಕಟ್ಟುವ ಕೆಲಸ ನಡೆಯುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿಪಿಐಎಂ ಪಕ್ಷದ ಜಿಲ್ಲಾ ಸಮಿತಿಯ ಡಾ.ಐ.ಆರ್.ದುರ್ಗಾಪ್ರಸಾದ್ ಮಾತನಾಡಿ, ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಗೆ ಮತ್ತು ದುಡಿಯುವ ಜನರ ಅನುಕೂಲಕ್ಕಾಗಿ ನಿರಂತರ ಕಾರ್ಯಕ್ರಮಗಳನ್ನು ನಡೆಸುತ್ತ ಬರುತ್ತಿದ್ದೇವೆ ಮುಂದೆಯು ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಹೇಳಿದರು. ಹಿರಿಯ ವಕೀಲ ಐ.ಆರ್.ಪ್ರಮೋದ್ ಸಿಪಿಐಎಂ. ಬೆಳವಣಿಗೆ ಬಗ್ಗೆ ಮಾತನಾಡಿದರು. ವೇದಿಕೆಯಲ್ಲಿ ರಾಜ್ಯ ಕಾರ್ಯಕಾರಿ ಮಂಡಳಿಯ ಯಾದವಶೆಟ್ಟಿ, ಯು.ಬಸವರಾಜ್, ಚಂದ್ರಪ್ಪ ವನಕಾರಿ, ಸಿಐಟಿಯು ರಾಜ್ಯ ಅಧ್ಯಕ್ಷೆ ಮೀನಾಕ್ಷಿ ಸುಂದರಾಂ, ಕೆ.ವಿಮಲ, ಎ.ಸಿ.ಸಾಬು, ಶಂಕರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಪಿ.ರಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು, ಅಧ್ಯಯನ ಶಿಬಿರದ ಮುಂದಾಳತ್ವ ವಹಿಸಿದ್ದ ಪಿ.ಆರ್.ಭರತ್ ಸ್ವಾಗತಿಸಿದರು, ಶಾಜಿ ರಮೇಶ್ ವಂದಿಸಿದರು. ರಾಜ್ಯ ಮಟ್ಟದ ಅಧ್ಯಯನ ಶಿಬಿರದಲ್ಲಿ ರಾಜ್ಯದ 31 ಜಿಲ್ಲೆಗಳಿಂದ 154 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಸಿಎನ್‌ಸಿ ಅಭಿಯಾನಕ್ಕೆ ತಲಕಾವೇರಿಯಲ್ಲಿ ನಾಂದಿ



ತಲಕಾವೇರಿಯಿಂದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಭಿಯಾನವನ್ನು ಆರಂಭಿಸಿತು.

ಮಡಿಕೇರಿ, ಮೇ.3–ಪ್ರಾಚೀನ ಕೊಡವ ಸಾಂಪ್ರದಾಯಿಕ ಪ್ರಾದೇಶಿಕ ಮಿತಿಯೊಳಗೆ ಪ್ರತ್ಯೇಕ ಕೊಡವ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಕ್ಷೇತ್ರಗಳ ಸ್ಥಾಪನೆ ಅಥವಾ ಪರ್ಯಾಯವಾಗಿ ಸಿಕ್ಕಿಂನ ಬೌದ್ಧ ಸನ್ಯಾಸಿ ಸಮುದಾಯದ ಸಂಘ ಚುನಾವಣಾ ಕ್ಷೇತ್ರದ ಮಾದರಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೊಡವ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಕ್ಷೇತ್ರಗಳನ್ನು ರಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಸರಕಾರದ ಗಮನ ಸೆಳೆಯಲು ಕಾವೇರಿ ನದಿಯ ಉಗಮಸ್ಥಾನ ತಲಕಾವೇರಿಯಿಂದ ಕೊಡವ ನ್ಯಾಷ ನಲ್ ಕೌನ್ಸಿಲ್ ಸಂಘಟನೆ ಅಭಿಯಾನವನ್ನು ಆರಂಭಿಸಿತು.

ತಲಕಾವೇರಿಯಲ್ಲಿ ಧಾರ್ಮಿಕ ಪ್ರಾರ್ಥನೆ ಸಲ್ಲಿಸಿ ಕೊಡವರ ಸಾಂವಿಧಾನಿಕ ಉದ್ದೇಶಕ್ಕಾಗಿ ದೈವಿಕ ಆಶೀರ್ವಾದವನ್ನು ಕೋರಿದ ಸದಸ್ಯರು ಮಾನವ ಸರಪಳಿ ಮೂಲಕ ಪ್ರತಿಜ್ಞಾ ವಿಧಿ ಸ್ವೀಕರಿಸಿ ಸಿಎನ್‌ಸಿ ಬೇಡಿಕೆಗಳ ಕುರಿತು ಆಡಳಿತ ವ್ಯವಸ್ಥೆಯ ಗಮನ ಸೆಳೆಯಲು ಮೇ.12 ರಿಂದ 48 ಗಂಟೆಗಳ ಹಗಲು–ರಾತ್ರಿ ಶಾಂತಿಯುತ ಸತ್ಯಾಗ್ರಹವನ್ನು ನಡೆಸಲಾಗುವುದು ಎಂದು ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದರು.

ಬೊಟ್ಟಂಗಡ ಸವಿತಾ ಗಿರೀಶ್, ಅಪ್ಪಾರಂಡ ನಂದಿನಿ ನಂಜಪ್ಪ, ಅರೆಯಡ ಸವಿತಾ ತಿಮ್ಮಯ್ಯ, ಅಪ್ಪಾರಂಡ ನೀರು ಸೋಮಕ್ಕ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ ಗಣಪತಿ, ಪಟ್ಟಮಾಡ ಕುಶ, ನಂದೇಟಿರ ರವಿ ಸುಬ್ಬಯ್ಯ, ಬೊಟ್ಟಂಗಡ ಗಿರೀಶ್ ಪೆಮ್ಮಯ್ಯ ಮತ್ತಿತರರು ಪಾಲ್ಗೊಂಡಿದ್ದರು.

ನಾಳೆ ಕೊಡವ ಸಮಾಜದ ನೂತನ ಸಮುದಾಯ ಭವನ ಉದ್ಘಾಟನೆ

ಮಡಿಕೇರಿ: ಮಾದಾಪುರದಲ್ಲಿನ ಕೊಡವ ಸಮಾಜದ ನೂತನ ಸಮುದಾಯ ಭವನದ ಉದ್ಘಾಟನೆ ಮೇ.5ರಂದು ಜರುಗಲಿದೆ ಎಂದು ಕೊಡವ ಸಮಾಜದ ಅಧ್ಯಕ್ಷ ಮಂಡೇಪಂಡ ಮನು ಮೇದಪ್ಪ ತಿಳಿಸಿದ್ದಾರೆ.

ಕೊಡವ ಸಮಾಜ ಸಮುದಾಯ ಭವನದ ಬಗ್ಗೆ ಮಾಹಿತಿ ನೀಡಿದ ಎಂ.ಮನುಮೇದಪ್ಪ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಕೋಟಿ ರೂ. ಅನುದಾನದಲ್ಲಿ 75 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು 25 ಲಕ್ಷ ರೂ. ಅನುದಾನ ದೊರಕಬೇಕಾಗಿದೆ ಎಂದರು. ಮಾಜಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅವರ ವಿಶೇಷ ಪ್ರಯತ್ನದಿಂದ ಅನೇಕ ದಾನಿಗಳಿಂದಲೂ ಆರ್ಥಿಕ ಸಂಪನ್ಮೂಲ ಸಂಗ್ರಹವಾಗಿದೆ. ಶಾಸಕ ಡಾ.ಮಂತರ್ ಗೌಡ 10 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನು ಸಮುದಾಯ ಭವನಕ್ಕೆ ನಿರ್ಮಿಸಲು ಒಪ್ಪಿದ್ದಾರೆ ಎಂದು ತಿಳಿಸಿದರು.

ಮೇ.5ರಬೆಳಗ್ಗೆ 10 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು, ಶಾಸಕರಾದ ಎ.ಎಸ್. ಪೊನ್ನಣ್ಣ, ಡಾ.ಮಂತರ್ ಗೌಡ, ಸಂಸದ ಯದುವೀರ್ ಒಡೆಯರ್, ವಿಧಾನಪರಿಷತ್ ಸದಸ್ಯ ಎಂ.ಪಿ. ಸುಜಾಕುಶಾಲಪ್ಪ, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎಸ್. ಅಶ್ವಥ ನಾರಾಯಣ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡೀರ ಅರುಣ್



ಕೊಡವ ಸಮಾಜದ ಅಧ್ಯಕ್ಷ ಮಂಡೇಪಂಡ ಮನುಮೇದಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.


ಮಾಚಯ್ಯ, ಮಾಜಿ ಸಚಿವರಾದ ಎಂ.ಪಿ. ಅಪ್ಪಚ್ಚು ರಂಜನ್, ಎಂ.ಸಿ. ನಾಣಯ್ಯ, ಬಿ.ಎ.ಜೀವಿಜಯ, ಮಾಜಿ ಸಭಾಪತಿ ಕೆ.ಜಿ. ಬೋಪಯ್ಯ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಂಸದ ಕುಪೇಂದ್ರ ರೆಡ್ಡಿ, ಮಾಜಿ ಶಾಸಕ ಎಂ.ಪಿ. ಸುನೀಲ್ ಸುಬ್ರಮಣಿ, ಶಾಂತೆಯಂಡ ವೀಣಾ ಅಚ್ಚಯ್ಯ, ಎಸ್.ಜಿ.ಮೇದಪ್ಪ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಮಾದಾಪುರ ಕೊಡವ ಸಮಾಜದ ಗೌರವ ಕಾರ್ಯದರ್ಶಿ ಐಚೆಟ್ಟಿರ ನಂಜಪ್ಪ, ನಿರ್ದೇಶಕರಾದ ನಾಪಂಡ ಉಮೇಶ್ ಉತ್ತಪ್ಪ, ಮಾಳೆಯಂಡ ಜೋಯಪ್ಪ ಉಪಸ್ಥಿತರಿದ್ದರು.

ಇಂದು ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆ

ಮಡಿಕೇರಿ: ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅಧ್ಯಕ್ಷತೆಯಲ್ಲಿ ಮೇ.5ರ ಬೆಳಗ್ಗೆ 10.30ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿ.ಪಂ. ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಪ್ರಕಾಶ್ ಬೆಲ್ಲದ್ ಆಯ್ಕೆ



ಚಾಮರಾಜನಗರ, ಮೇ.3–ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠವು ಚಾಮರಾಜನಗರ ಜಿಲ್ಲೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತರಿಗೆ ನೀಡುವ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಜಿಲ್ಲೆಯ ಹಿರಿಯ ಪತ್ರಕರ್ತರಾದ ಪ್ರಕಾಶ್ ಬೆಲ್ಲದ್ ಆಯ್ಕೆಯಾಗಿದ್ದಾರೆ.

ಜಿಲ್ಲೆಯ ಗಡಿ ಭಾಗದ ತಾಳವಾಡಿ ತಾಲೂಕಿನ ಸೊತ್ತನಪುರಂ ಗ್ರಾಮದ ಪ್ರಕಾಶ್ ಬೆಲ್ಲದ್ 1996ರಲ್ಲಿ ಪತ್ರಿಕಾರಂಗ ಪ್ರವೇಶಿಸಿ ವಿವಿಧ ಪತ್ರಿಕೆಗಳಲ್ಲಿ 30 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಚಾಮರಾಜನಗರದಲ್ಲಿ ವಾಸವಿದ್ದು, ಸ್ಥಳೀಯ ರೇಷ್ಮೆನಾಡು ಪತ್ರಿಕೆಯಲ್ಲಿ ವರದಿಗಾರರಾಗಿ ಸೇವೆ ಆರಂಭಿಸಿದ ಪ್ರಕಾಶ್ ಅವರು ಆಂದೋಲನ, ಪ್ರಜಾನುಡಿ, ಉಷಾಕಿರಣ, ಜನಮಿತ್ರ ಪತ್ರಿಕೆಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ಪ್ರಸ್ತುತ ವರ್ತಮಾನ ಪತ್ರಿಕೆಯ ಜಿಲ್ಲಾ ವರದಿಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಆಯ್ಕೆಯಾದ ಪ್ರಕಾಶ್ ಬೆಲ್ಲದ್ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷರಾದ ಆರ್.ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿಣಿ ಸದಸ್ಯರು ಅಭಿನಂದಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಮಹಾವಿದ್ಯಾಪೀಠದ ಸಹಯೋಗದಲ್ಲಿ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವು ಮೇ 5ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನಡೆಯಲಿದೆ.

ಸಮಾರಂಭವನ್ನು ಮೈಸೂರಿನ ಹಿರಿಯ ಪತ್ರಕರ್ತರಾದ ಸಿ.ಕೆ.ಮಹೇಂದ್ರ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಪ್ರಶಸ್ತಿ ಪ್ರದಾನ ಮಾಡುವರು. ಸಂಘದ ಜಿಲ್ಲಾಧ್ಯಕ್ಷರಾದ ಆರ್.ಎನ್.ಸಿದ್ದಲಿಂಗಸ್ವಾಮಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕರಾದ ಎನ್.ಎಂ.ಶಿವಶಂಕರಪ್ಪ ಭಾಗವಹಿಸುವರು. ಸಮಾರಂಭಕ್ಕೆ ಜಿಲ್ಲೆಯ ಎಲ್ಲಾ ಪತ್ರಕರ್ತರು ಹಾಗೂ ಪ್ರಕಾಶ್ ಬೆಲ್ಲದ್ ಅವರ ಹಿತೈಷಿಗಳು ಆಗಮಿಸಬೇಕೆಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಪ್ರಕಟಣೆಯಲ್ಲಿ ಕೋರಿದೆ.

ಕಾಡಂಚಿನ ಗ್ರಾಮಗಳಲ್ಲಿ ಅಹವಾಲು ಆಲಿಸಿದ ಶಾಸಕ ಪುಟ್ಟರಂಗ ಶೆಟ್ಟಿ

ಚಾಮರಾಜನಗರ. ಮೇ3– ತಾಲೂಕಿನ ಕಾಡಂಚಿನ ಪುಣಜನೂರು ಗ್ರಾಮ ಪಂಚಾಯಿತಿಯ ಎತ್ತೇಗೌಡನದೊಡ್ಡಿ ಗ್ರಾಮಕ್ಕೆ ಶಾಸಕ ಸಿ.ಪುಟ್ಟರಂಗ ಶೆಟ್ಟಿ ಭೇಟಿ ನೀಡಿ, ನಿವಾಸಿಗಳ ಅಹವಾಲು ಸ್ವೀಕರಿಸಿದರು.

ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು, ರಸ್ತೆ ಮತ್ತು ಚರಂಡಿ ಸೇರಿದಂತೆ ಮೂಲಸೌಕರ್ಯ ಒದಗಿಸುವ ಕುರಿತು ಪರಿಶೀಲಿಸಿದರು. ಇದೇ ವೇಳೆ 40 ಲಕ್ಷ ರೂ. ವೆಚ್ಚದಲ್ಲಿ ಸಿಮೆಂಟ್ ಕಾಂಕ್ರಿಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಅವರು ಮಾತನಾಡಿ, ತಮ್ಮ ಅಧಿಕಾರಾವಧಿಯಲ್ಲಿ ಕಾಡಂಚಿನ ಗ್ರಾಮಗಳ ಜನತೆಗೆ ಮೂಲಸೌಕರ್ಯ ಒದಗಿಸುತ್ತ ಬಂದಿದ್ದೇನೆ. ಆಶ್ರಯ ಮನೆ, ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರಕಾರ ಮಂಜೂರು ಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು.



ಚಾಮರಾಜನಗರ ತಾಲೂಕಿನ ಕಾಡಂಚಿನ ಪುಣಜನೂರು ಗ್ರಾಮ ಪಂಚಾಯಿತಿಯ ಎತ್ತೇಗೌಡನದೊಡ್ಡಿ ಗ್ರಾಮಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ನಿವಾಸಿಗಳ ಅಹವಾಲು ಸ್ವೀಕರಿಸಿದರು.

ಸಂಬಂಧಪಟ್ಟ ಗುತ್ತಿಗೆದಾರರು ಗುಣಮಟ್ಟದ ರಸ್ತೆ ನಿರ್ಮಾಣ ಮಾಡಿ, ಈ ಭಾಗದ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸೂಚನೆ ನೀಡಿದರು. ಹಾಡಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದಲ್ಲಿ ಅಂತರ್ಜಲ ಪರೀಕ್ಷಕರನ್ನು ಕರೆಸಿ, ಪಾಯಿಂಟ್ ಮಾಡಿಸಿ, ನೀರು ಬರುವ ಸಾಧ್ಯತೆ ಕಂಡು ಬಂದರೆ ಕೊಳವೆಬಾವಿ ಕೊರೆಸಿ, ಜನರಿಗೆ ನೀರು ಕೊಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಶಾಸಕರು ಅಂಗನವಾಡಿಗೆ ಭೇಟಿ ನೀಡಿ, ಮೂಲಸೌಕರ್ಯ ಕುರಿತು ಪರಿಶೀಲಿಸಿದರು.

ತಮಗೆ ವಾಸಿಸಲು ಮನೆಗಳನ್ನು ನಿರ್ಮಿಸಿ ಕೊಡಬೇಕು ಎಂದು ನಿವಾಸಿಗಳು ಇದೇ ವೇಳೆ ಶಾಸಕರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪಿಎಸಿಸಿ ಅಧ್ಯಕ್ಷ ಮಣಿ ನಾಯಕ, ಗ್ರಾಪಂ ಮಾಜಿ ಉಪಾಧ್ಯಕ್ಷ ಶಿವನಾಯಕ, ಮುಖಂಡ ನಾಗವಳ್ಳಿ ನಾಗಯ್ಯ, ಮಹದೇವನಾಯಕ ಕೆಆರ್‌ಐಡಿಎಲ್ ಎಂಜಿನಿಯರ್‌ಗಳಾದ ಅರುಣ್, ಮಹದೇವ ಪ್ರಸಾದ್ ಎತ್ತೇಗೌಡನದೊಡ್ಡಿ ಗ್ರಾಮಸ್ಥರು ಹಾಜರಿದ್ದರು.

ಸನ್ಮಾನ



ರಾಯಚೂರಿನ ಬೆಳಕು ಸಂಸ್ಥೆಯವರು ನೀಡುವ ಇಂಟರ್ ನ್ಯಾಷನಲ್ ಜಸ್ಟಿಸ್ ಅವಾರ್ಡ್‌ಗೆ ಭಾಜನರಾಗಿರುವ ಚಾಮರಾಜನಗರ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಅವರನ್ನು ಸುತ್ತೂರು ಶ್ರೀಗಳು ಆಶೀರ್ವದಿಸಿ ಸನ್ಮಾನಿಸಿದರು. ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಆಲೂರು ಮಲ್ಲು, ಜ. ಸುರೇಶ್ ನಾಗ್, ಬಿಜೆಪಿ ಮುಖಂಡರಾದ ಆನಂದ ಭಗೀರಥ ಕಿರಿನಂಜನಪುರ ಕೂಸಣ್ಣ ಇನ್ನಿತರರಿದ್ದರು

ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

295 ಮಂದಿ ತಪಾಸಣೆ, 165 ಮಂದಿಗೆ ಶಸ್ತ್ರ ಚಿಕಿತ್ಸೆಗೆ ಆಯ್ಕೆ



ಚಾಮರಾಜನಗರದಲ್ಲಿ ರೋಟರಿ ಸಂಸ್ಥೆ ವತಿಯಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಚಾಮರಾಜನಗರ, ಮೇ 3– ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 295 ಮಂದಿ ತಪಾಸಣೆ ಮಾಡಿಸಿಕೊಂಡರು. 165 ಮಂದಿ ಶಸ್ತ್ರಚಿಕಿತ್ಸೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ. ಶ್ರೀನಿವಾಸಶೆಟ್ಟಿ ಮಾತನಾಡಿ, ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು ತುಂಬಾ ಸಂತಸವಾಗಿದ್ದು, ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಕಣ್ಣಿನ ಆರೋಗ್ಯದ ಕಡೆ ಗಮನಹರಿಸುವುದು ಇಂದಿನ ಡಿಜಿಟಲ್ ಯುಗದಲ್ಲಿ ಅತ್ಯಗತ್ಯವಾಗಿದೆ. ಈ ಶಿಬಿರಕ್ಕೆ ಹೊರ ಜಿಲ್ಲೆಗಳಿಂದ ಜನತೆ ಬರುತ್ತಿದ್ದು, ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಈ ಬಾರಿ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ತಪಾಸಣೆ ಮಾಡಿಸಿಕೊಂಡಿದ್ದು, 165 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಗೊಂಡಿದ್ದಾರೆ. ರೋಟರಿ ಸಂಸ್ಥೆಯು ಸೇವೆ ಮಾಡಲು ಸಿದ್ಧವಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಶಿಬಿರದಲ್ಲಿ ರೋಟರಿ ಸಂಸ್ಥೆಯ ಸಂಸ್ಥಾಪಕ ಸದಸ್ಯ ಅಶ್ವಥ್‌ನಾರಾಯಣ್, ಚಂದ್ರಪ್ರಭ ಜೈನ್, ನಾಗರಾಜು, ಹರೀಶ್, ಅಂಕಶೆಟ್ಟಿ, ಸಿದ್ದಮಲ್ಲಪ್ಪ, ನೇಮಿರಾಜ್, ಎ.ಶ್ರೀನಿವಾಸನ್, ಎಸ್‌ಆರ್‌ಎಸ್ ಶ್ರೀನಿವಾಸ್, ಸುರೇಶ್, ಅಬ್ದುಲ್ ಅಜೀಜ್ ದೀನಾ, ಸವಿತಾ, ಪಿಆರ್‌ಓ ವಿಜಯಕುಮಾರ್ ಇತರರು ಹಾಜರಿದ್ದರು.

ಅಕ್ರಮ ಪಡಿತರ ಅಕ್ಕಿ ಸಂಗ್ರಹ, ದಾಳಿ: 764 ಕೆಜಿ ಅಕ್ಕಿ ವಶ



ಆರೋಪಿಯೊಂದಿಗೆ ಅಕ್ರಮ ಅಕ್ಕಿ ದಾಸ್ತಾನು ವಶಕ್ಕೆ ಪಡೆದ ಪೊಲೀಸರು ಹಾಗೂ ಆಹಾರ ಇಲಾಖಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು

ಕೊಳ್ಳೇಗಾಲ, ಮೇ 3– ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳನ್ನು ಕಟ್ಟು ನಿಟ್ಟಾಗಿ ನಿಯಂತ್ರಿಸಲು ಪೊಲೀಸ್ ಇಲಾಖೆ ಕ್ರಮಗಳನ್ನು ತೀವ್ರಗೊಳಿಸಿದ್ದು, ಅದರ ಭಾಗವಾಗಿ ಅಕ್ರಮವಾಗಿ ಪಡಿತರ ಅಕ್ಕಿ ಸಂಗ್ರಹಿಸಿದ್ದ ಮನೆ ಮೇಲೆ ದಾಳಿ ನಡೆಸಿ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

ಆಗರ ಮಾಂಬಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಆರಕ್ಷಕ ಉಪ ನಿರೀಕ್ಷಕರಾದ ಕರಿಬಸಪ್ಪ ಅವರ ನೇತೃತ್ವದಲ್ಲಿ, ಆಹಾರ ಶಿರಸ್ತೇದಾರರಾದ ಎಸ್.ಪಿ.ವಿಶ್ವನಾಥ್ ಅವರ ದೂರಿನ ಮೇರೆಗೆ ಮೇ 2, 2026ರಂದು ದಾಳಿ ನಡೆಸಲಾಯಿತು.

ಠಾಣಾ ಸರಹದ್ದಿನ ಸಿಲ್ಕಲ್ ಮರ ಗ್ರಾಮದ ಮಹದೇವಮ್ಮ(70) ಅವರ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 12 ಚೀಲಗಳಲ್ಲಿ ಇದ್ದ 764 ಕೆಜಿ ಪಡಿತರ ಅಕ್ಕಿಯನ್ನು, ಅಂದಾಜು ರೂ. 20,682 ಮೌಲ್ಯದೊಂದಿಗೆ ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ಆಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ನಂ: 50/2026 ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಈ ಪತ್ತೆ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಐಪಿಎಸ್ ಎಂ.ಮುತ್ತುರಾಜು ಅವರು ಪ್ರಶಂಸನೆ ವ್ಯಕ್ತಪಡಿಸಿದ್ದು, ಮುಂದಿನ ದಿನಗಳಲ್ಲಿಯೂ ಇಂತಹ ಅಕ್ರಮ ಚಟುವಟಿಕೆಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಸರ್ಕಾರಿ ಶಾಲೆ ವಿದ್ಯಾರ್ಥಿನಿ 603 ಅಂಕಗಳಿಸಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ

ಕೊಳ್ಳೇಗಾಲ, ಮೇ 3–ತಾಲೂಕಿನ ಸುರಾಪುರ ಸರ್ಕಾರಿ ಪ್ರೌಢಶಾಲೆಯ ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಗೈದಿದ್ದಾರೆ. ಶಾಲೆಯ ವಿದ್ಯಾರ್ಥಿನಿ ಲಕ್ಷ್ಮಿ 625 ಅಂಕಗಳಿಗೆ 603 ಅಂಕ ಗಳಿಸುವ ಜೊತೆಗೆ ಕನ್ನಡದಲ್ಲೂ 125ಕ್ಕೆ 125 ಅಂಕ ಗಳಿಸಿ ಸಾಧನೆ ಮಾಡಿದ್ದಾರೆ. ಚಂದ್ರಮೋಹನ್ 586 ಅಂಕ ಗಳಿಸಿ ದ್ವಿತೀಯ ಹಾಗೂ ಅಂಜಲಿ 576 ಅಂಕ ಗಳಿಸಿ ತೃತೀಯ ಸ್ಥಾನ ಗಳಿಸುವ ಮೂಲಕ ಸಾಧನೆಗೈದಿದ್ದಾರೆ.



ಲಕ್ಷ್ಮಿ

ಉಳಿದಂತೆ ಧನುಷ್–540, ಶೋಭ–539, ಗಣೇಶ ಕುಮಾರ್–536, ಹೇಮಂತ್ ಕುಮಾರ್–535, ಮನ್ವಿತ್–529, ಉಮಾ–521, ಮಹದೇವಸ್ವಾಮಿ–520, ಲತಾ–508, ಅರ್ಜುನ್–505, ಮಹಾಲಕ್ಷ್ಮಿ–501 ಅಂಕ ಗಳಿಸಿದ್ದಾರೆ. 7 ಮಂದಿ ಅತ್ಯುನ್ನತ, 26 ಮಂದಿ ಪ್ರಥಮ, ಇಬ್ಬರು ದ್ವಿತೀಯ ಹಾಗೂ 14 ಮಂದಿ ತೇರ್ಗಡೆ ಹೊಂದಿದ್ದಾರೆಂದು ಮುಖ್ಯ ಶಿಕ್ಷಕ ಲೋಕೇಶ್ ಅವರು ತಿಳಿಸಿದ್ದಾರೆ.

ಮಹದೇವಸ್ವಾಮಿ ನಿಧನ



ಚಾಮರಾಜನಗರ: ಪತ್ರಿಕೆಯೊಂದರ ಪುಟ ವಿನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪಿ. ಮಹದೇವಸ್ವಾಮಿ (33) ಅನಾರೋಗ್ಯದಿಂದ ಭಾನುವಾರ ನಿಧನರಾದರು. ತಾಲೂಕಿನ ಉಡಿಗಾಲ ಗ್ರಾಮದ ವಾಸಿಯಾಗಿದ್ದ ಇವರು ಕಳೆದ 12 ವರ್ಷಗಳಿಂದ ಪತ್ರಿಕೆಯ ಪುಟ ವಿನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ತಂದೆ, ತಾಯಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವ–ಗ್ರಾಮವಾದ ಉಡಿಗಾಲದಲ್ಲಿ ಸೋಮವಾರ ಬೆಳಗ್ಗೆ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮೈಸೂರು ಮಿತ್ರ

ಕಾಯಕ, ದಾಸೋಹದ ತತ್ವ ಜಗತ್ತಿಗೆ ಸಾರಿದ ಬಸವಣ್ಣ

ಹಲವಾರ ಮುಡುಕನಪುರ ಮಠದ ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ



ಬಸವ ಜಯಂತಿಯಲ್ಲಿ ತಾಲೂಕಿನ ಮಠಾಧೀಶರು ಬಸವೇಶ್ವರರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ, ಮೇ 3– ವಿಶ್ವಮಾನವ, ಸಮಾನತೆಯ ಹರಿಕಾರ, ಕಾಯಕ ಮತ್ತು ದಾಸೋಹದ ತತ್ವಗಳನ್ನು ಜಗತ್ತಿಗೆ ಸಾರಿದ ಜಗಜ್ಯೋತಿ ಬಸವಣ್ಣನವರ ಜಯಂತಿ ಮಹೋತ್ಸವ ನಮ್ಮೆಲ್ಲರಿಗೂ ಆತ್ಮ ಪರಿಶೀಲನೆ, ಸಮಾಜಮುಖಿ ಚಿಂತನೆಗೆ ಪ್ರೇರಣೆಯಾಗುವ ಪವಿತ್ರ ಕ್ಷಣವಾಗಿದೆ ಎಂದು ಹಲವಾರ ಮುಡುಕನಪುರ ಮಠದ ಶ್ರೀಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಶ್ರೀಬಸವೇಶ್ವರ ಗೆಳೆಯರ ಬಳಗದಿಂದ ತಾಲೂಕಿನ ಹಲವಾರ ಗ್ರಾಮದ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಬಸವೇಶ್ವರರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಮಾತನಾಡಿದ ಅವರು, ಬಸವಣ್ಣನವರು ಕೇವಲ ಒಂದು ಧರ್ಮ ಅಥವಾ ಸಮುದಾಯದ ನಾಯಕರಲ್ಲ. ಅವರು ಸಮಸ್ತ ಮಾನವ ಕುಲಕ್ಕೆ ದಾರಿ ದೀಪ. ಕಾಯಕವೇ ಕೈಲಾಸ ಎಂಬ ಅವರ ವಚನವು ಪ್ರತಿಯೊಬ್ಬರ ಬದುಕಿಗೆ ಶ್ರಮದ ಮಹತ್ವವನ್ನು ಸಾರುತ್ತದೆ. ದುಡಿಮೆಗೆ ಗೌರವ ನೀಡಿದ ಬಸವಣ್ಣನವರು, ಸಮಾಜದಲ್ಲಿ ಸಮಾನತೆ ನೆಲೆಸಬೇಕು, ಪ್ರತಿಯೊಬ್ಬರೂ ತಮ್ಮ ಶ್ರಮದಿಂದ ಬದುಕು ಕಟ್ಟಿಕೊಳ್ಳಬೇಕು ಎಂದು ಬೋಧಿಸಿದರು.

ಇಂದಿನ ಸಮಾಜದಲ್ಲಿ ಬಸವ ತತ್ವಗಳ ಅಗತ್ಯತೆ ಇನ್ನಷ್ಟು ಹೆಚ್ಚಾಗಿದೆ. ಜಾತಿ, ಮತ, ಪಂಥಗಳ ಭೇದಗಳನ್ನು ಮೀರಿ ಪ್ರೀತಿ, ವಿಶ್ವಾಸ ಮತ್ತು ಸಹಬಾಳ್ವೆಯ ಸಂದೇಶವನ್ನು ನಾವು ಅಳವಡಿಸಿಕೊಳ್ಳಬೇಕು. ಬಸವಣ್ಣನವರು ಕಟ್ಟಿಕೊಟ್ಟ ಅನುಭವ ಮಂಟಪವು ಪ್ರಜಾಪ್ರಭುತ್ವದ ಮೊದಲ ಪಾಠಶಾಲೆಯಾಗಿತ್ತು. ಅಲ್ಲಿ ಎಲ್ಲರಿಗೂ ಸಮಾನ ಅವಕಾಶವಿತ್ತು. ಅವರ ಆದರ್ಶ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದರು.

ಅರೆ ಬೊಮ್ಮನಹಳ್ಳಿ ಪಾರಮಾರ್ಥಿಕ ಮಠದ ಪೀಠಾಧ್ಯಕ್ಷ ಶ್ರೀಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ಸಮಾಜದಲ್ಲಿದ್ದ ಅಸಮಾನತೆ, ಅಂಧ ಶ್ರದ್ಧೆ ಮತ್ತು ಅನ್ಯಾಯಗಳ ವಿರುದ್ಧ ಹೋರಾಡಿದ ಮಹಾನ್ ಕ್ರಾಂತಿಕಾರಿ. ಅವರು ಕಟ್ಟಿದ ಅನುಭವ ಮಂಟಪವು ವಿಶ್ವದ ಮೊದಲ ಪ್ರಜಾಪ್ರಭುತ್ವದ ವೇದಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಲ್ಲಿ ಜಾತಿ, ಲಿಂಗ, ಆಸ್ತಿ–ಪಾಸ್ತಿಗಳ ಭೇದವಿಲ್ಲದೆ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲಾಗುತ್ತಿತ್ತು. ಇದು ಬಸವಣ್ಣನವರ ದೂರದೃಷ್ಟಿ ಮತ್ತು ಮಾನವೀಯತೆಯ ಪ್ರತೀಕವಾಗಿದೆ. "ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ" ಎಂಬ ವಚನದ ಮೂಲಕ ಬಸವಣ್ಣನವರು ದೇವರನ್ನು ಕಲ್ಲಿನ ಗೋಪುರಗಳಲ್ಲಿ ಅಲ್ಲ, ಮಾನವನ ಹೃದಯದಲ್ಲಿ ಕಾಣಬೇಕೆಂದು ಸಾರಿದರು. ಮಾನವ ಸೇವೆಯೇ ಮಾಧವನ ಸೇವೆ ಎಂಬ ಸಂದೇಶವನ್ನು ಅವರು ಬದುಕಿನ ಮೂಲಕ ತೋರಿಸಿದರು. ಕಾಯಕ ಮತ್ತು ದಾಸೋಹವು ಬಸವ ತತ್ವದ ಎರಡು ಕಣ್ಣುಗಳು. ದುಡಿಯುವುದು ಪ್ರತಿಯೊಬ್ಬರ ಕರ್ತವ್ಯ; ದುಡಿದು ಗಳಿಸಿದ್ದರಲ್ಲಿ ಅಗತ್ಯವಿರುವವರಿಗೆ ಹಂಚುವುದು ನಮ್ಮ ಧರ್ಮ. ಈ ತತ್ವಗಳು ಇಂದಿನ ಆಧುನಿಕ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ. ಯುವಕರು ಬಸವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ನೈತಿಕತೆ, ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವ ಬೆಳೆಯುತ್ತದೆ. ಬಸವಣ್ಣನವರು ಕಂಡ ಸಮಸಮಾಜ ನಿರ್ಮಾಣದ ಕನಸು ನಮ್ಮೆಲ್ಲರ ಸಂಕಲ್ಪವಾಗಬೇಕು ಎಂದರು.

ರೈತ ಮುಖಂಡ ಕರೋಹಟ್ಟಿ ಕುಮಾರಸ್ವಾಮಿ ಮಾತನಾಡಿದರು. ಕಾರ್ಯಕ್ರಮ ಹಿನ್ನೆಲೆಯಲ್ಲಿ ಗ್ರಾಮಸ್ಥರಿಗೆ ಅನ್ನ ದಾಸೋಹ ಹಮ್ಮಿಕೊಳ್ಳಲಾಗಿತ್ತು. ನೆರಗ್ಯಾತನಹಳ್ಳಿ ಮಠದ ಶ್ರೀಶಿವಕುಮಾರಸ್ವಾಮೀಜಿ, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಹಲವರ ಪರಮೇಶ್ ಪಟೇಲ್, ಗ್ರಾಪಂ ಮಾಜಿ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಹೆಳವರಹುಂಡಿ ರಾಜಶೇಖರ, ಬಜ್ಜಿ ನಿಂಗಪ್ಪ, ಮಾಯಪ್ಪ, ಕೆಇಬಿ ಸಿದ್ದಲಿಂಗಸ್ವಾಮಿ, ದೊಡ್ಡನಹುಂಡಿ ನಂಜುಂಡಸ್ವಾಮಿ, ಧರ್ಮಯ್ಯನಹುಂಡಿ ಕುಮಾರ, ರೈತ ಮುಖಂಡ ಈ.ರಾಜು ಸೇರಿದಂತೆ ಹಲವಾರ ಗ್ರಾಮದ ಗ್ರಾಮಸ್ಥರು, ಬಸವೇಶ್ವರ ಸಂಘದ ಯುವಕರು, ಯಜಮಾನರು ಭಾಗವಹಿಸಿದ್ದರು.

ಚಿಪ್ಪು ಹಂದಿಯ ಚಿಪ್ಪುಗಳ ಮಾರಾಟಕ್ಕೆ ಯತ್ನ: ಆರೋಪಿ ಬಂಧನ



ಮೇಟಿಕುಪ್ಪೆ ಹಾಡಿಯ ಹರೀಶ್ ಬಂಧಿಸಿದ ಅರಣ್ಯ ಅಧಿಕಾರಿಗಳು. ಒಳಚಿತ್ರದಲ್ಲಿ 320 ಗ್ರಾಂ ಚಿಪ್ಪುಹಂದಿಯ ಚಿಪ್ಪುಗಳನ್ನು ಕಾಣಬಹುದು.

ಹೆಚ್.ಡಿ.ಕೋಟೆ, ಮೇ 3– ಚಿಪ್ಪು ಹಂದಿ ಬೇಟೆಯಾಡಿ ಅದರ ಚಿಪ್ಪುಗಳನ್ನು ಮಾರಾಟ ಮಾಡಲು ಯತ್ನಿಸಿದ ವ್ಯಕ್ತಿಯನ್ನು ಮಾಲು ಸಮೇತ ಬಂಧಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ತಾಲೂಕಿನ ಮೇಟಿಕುಪ್ಪೆ ಹಾಡಿ ನಿವಾಸಿ ಹರೀಶ್ ಬಂಧಿತ ಆರೋಪಿ. ಈತನಿಂದ 320 ಗ್ರಾಂ ಚಿಪ್ಪುಹಂದಿಯ ಚಿಪ್ಪುಗಳು, 1 ಮೊಬೈಲ್ ವಶಪಡಿಸಿಕೊಳ್ಳಲಾಗಿದೆ. ಈತ ತಾಲೂಕಿನ ಕಸಬಾ ಹೋಬಳಿ ಮೂರ್ಕಲ್ ಮುಖ್ಯರಸ್ತೆಯ ಅಗಸನಹುಂಡಿ ಬಸ್ ನಿಲ್ದಾಣದ ಬಳಿ ಚಿಪ್ಪುಹಂದಿಯ ಚಿಪ್ಪುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ವಿಶೇಷ ಹುಲಿ ಸಂರಕ್ಷಣಾ ದಳದ ಎಸಿಎಫ್ ಎನ್.ಮಂಜುನಾಥ್, ಆರ್‌ಎಫ್‌ಓ ರಾಮಾಂಜನೇಯಲು ನೇತೃತ್ವದಲ್ಲಿ ದಾಳಿ ನಡೆಸಿದ ಅರಣ್ಯಾಧಿಕಾರಿಗಳು ಹರೀಶ್‌ನನ್ನು ಬಂಧಿಸಿ, ಹಂದಿಯ ಚಿಪ್ಪುಗಳನ್ನು ವಶಪಡಿಸಿಕೊಂಡು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಬಳಿಕ ಜಾಮೀನಿನ ಮೇರೆಗೆ ಬಿಡುಗಡೆಗೊಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳಾದ ವಿನೋದ್, ಸಂತೋಷ್ ಕಮನೂರೆ, ಕಲೀಮ್ ಪಾಷ, ಅಪ್ಪಣ್ಣ ಕಾಂಬಳೆ, ಜ್ಯೋತಿಕುಮಾರ, ವಿನಯಕುಮಾರ ಹಾಗೂ ಗಸ್ತು ವನ ಪಾಲಕರಾದ ಮಲ್ಲಿಕಾರ್ಜುನ, ಎಂ.ಕವಿನ, ಸುರೇಶ ಪೂಜೇರಿ, ಬೋಳ, ಕಾಳ, ಕಾಳಕಲ್ಕರ್, ಆನಂದ್, ಕಚೇರಿ ಸಿಬ್ಬಂದಿ ಇದ್ದರು.

ಮಾಜಿ ಸಚಿವ ಸಾ.ರಾ.ಮಹೇಶ್‌ಗೆ ಸನ್ಮಾನ



ಸಾಲಿಗ್ರಾಮ ತಾಲೂಕಿನ ಕೊಡಿಯಾಲ ಗ್ರಾಮದಲ್ಲಿ ನಡೆದ ಬಸವ ಜಯಂತಿಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಗ್ರಾಮಸ್ಥರು ಬಸವಣ್ಣನವರ ಪುತ್ಥಳಿ ನೀಡಿ ಸನ್ಮಾನಿಸಿದರು.

ಮುಖ್ಯ ಶಿಕ್ಷಕರಿಗೆ ಬೀಳ್ಕೊಡುಗೆ



ಕಂಪಲಾಪುರ ಸಮೀಪದ ಮಾಕೋಡು ಮಂಟಿಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮುಖ್ಯ ಶಿಕ್ಷಕ ಎನ್.ಕುಮಾರ್ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಈ ವೇಳೆ ಮಾಕೋಡು ಕ್ಲಸ್ಟರ್ ಸಿಆರ್‌ಪಿ ಬಿ.ನಾಗೇಶ್, ಪ್ರಭಾರ ಮುಖ್ಯಶಿಕ್ಷಕ ಹೆಚ್.ಬಿ.ನಾಗೇಶ್, ಅತ್ತಿಗೋಡು ಶಾಲೆ ಮುಖ್ಯ ಶಿಕ್ಷಕ ರಮೇಶ್, ಸಹ ಶಿಕ್ಷಕರಾದ ಶ್ರೀನಿಧಿ, ಲೋಕೇಶ್, ಮಾದೇಶ್, ಉಮಾಶಂಕರ ಆರಾಧ್ಯ, ಶಿವಶಂಕರ, ಪವಿತ್ರ, ಚಂದ್ರೇಗೌಡ, ನಟರಾಜ್, ರಮೇಶ್, ಕಾಂತರಾಜ್ ಹಾಜರಿದ್ದರು.

ಮೇ 6, ಮೈಸೂರಲ್ಲಿ ಅದ್ಧೂರಿ ಶ್ರೀಸಿದ್ದರಾಮೇಶ್ವರ ಜಯಂತಿ

ಭೋವಿ ಗುರುಪೀಠದ ಶ್ರೀಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ



ಕಾರ್ಯಕ್ರಮವನ್ನು ಶ್ರೀಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಉದ್ಘಾಟಿಸಿದರು.


ನಂಜನಗೂಡು, ಮೇ 3– ಮೈಸೂರಿನ ಕಲಾ ಮಂದಿರದಲ್ಲಿ ಮೇ 6ರಂದು ಅದ್ದೂರಿಯಾಗಿ ಶ್ರೀಸಿದ್ದರಾಮೇಶ್ವರ ಜಯಂತಿ ನಡೆಯಲಿದೆ. ಕಾರ್ಯಕ್ರಮಕ್ಕೆ ಸಮುದಾಯದ ಎಲ್ಲಾ ಮುಖಂಡರು ಮತ್ತು ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಯಂತಿ ಯಶಸ್ವಿಗೊಳಿಸುವಂತೆ ಭೋವಿ ಗುರು ಪೀಠದ ಶ್ರೀಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮನವಿ ಮಾಡಿದರು.

ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮ ಹಿನ್ನೆಲೆ ತಾಲೂಕಿನ ದೇವಿರಮ್ಮನಹಳ್ಳಿ ಪಾಳ್ಯ ಗ್ರಾಮಕ್ಕೆ ಆಗಮಿಸಿ ಗ್ರಾಮಸ್ಥರನ್ನು ಆಹ್ವಾನಿಸಿ ಮಾತನಾಡಿದ ಅವರು, 12ನೇ ಶತಮಾನದ ಬಸವಣ್ಣನವರ ಸಮಕಾಲೀನರಾಗಿದ್ದ ಸಿದ್ದರಾಮೇಶ್ವರರು, ಕಾಯಕ ತತ್ವದ ಅಡಿ ಕೆರೆ ಕಟ್ಟೆಗಳನ್ನು ನಿರ್ಮಿಸಿ, ಜನಸೇವೆ ಆರಂಭಿಸಿದ್ದರು. ಸಮಾಜ ಸುಧಾರಣೆಗೆ ಶ್ರಮಿಸಿದ ಕಾಯಕಯೋಗಿಗೆ ನಮನ ಸಲ್ಲಿಸಲು, ಮೈಸೂರಿನ ಕಲಾ ಮಂದಿರದಲ್ಲಿ ಅದ್ದೂರಿ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಮತ್ತು ಮೆರವಣಿಗೆ, ಪ್ರವಚನ ಹಾಗೂ ವಿಶೇಷ ಪೂಜೆಗಳನ್ನು ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ ಬೋವಿ ಜನಾಂಗವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಭೋವಿ ನಿಗಮ ಸ್ಥಾಪಿಸಿ ಅನುದಾನ ನೀಡಿ ನೆರವಾಗುತ್ತಿದೆ. ಕ್ಷೇತ್ರದಲ್ಲಿ ಸುಸಜ್ಜಿತ ಭೋವಿ ಸಮುದಾಯ ಭವನ ನಿರ್ಮಾಣಕ್ಕಾಗಿ ನಗರದ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ ಈಗಾಗಲೇ 7 ಗುಂಟೆ ಜಾಗ ನೀಡಲಾಗಿದೆ. ಅಲ್ಲದೆ ಕಾಂಗ್ರೆಸ್ ಸರ್ಕಾರ ಭವನ ನಿರ್ಮಾಣಕ್ಕಾಗಿ 50 ಲಕ್ಷ ಅನುದಾನ ಬಿಡುಗಡೆಗೊಳಿಸಿದೆ. ಅಲ್ಲದೆ ಗ್ರಾಮದ ದೇವಿರಮ್ಮನಹಳ್ಳಿ ಪಾಳ್ಯದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗಿದೆ ಎಂದರು.

ಈ ವೇಳೆ ಶಾಸಕ ದರ್ಶನ್ ಧ್ರುವನಾರಾಯಣ್ ಅವರನ್ನು ಬೋವಿ ಗುರುಪೀಠದ ಶ್ರೀಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸನ್ಮಾನಿಸಿದರು. ಮಾಜಿ ಶಾಸಕ ಕೇಶವಮೂರ್ತಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ಮಾಜಿ ಭೋವಿ ನಿಗಮ ಅಧ್ಯಕ್ಷ ಸೀತಾರಾಮ್, ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಮುಖಂಡರಾದ ಪಾಪಣ್ಣ, ಮಹದೇವು, ಬಾಲಾಜಿ, ವಸಂತ ಕುಮಾರ್, ಕಾಳಪ್ಪ, ತಿಮ್ಮರಸು ಸೇರಿದಂತೆ ಹಲವರಿದ್ದರು.

ಅನುಮಾನಾಸ್ಪದವಾಗಿ ಮೀನು ಮರಿಗಳು ಸಾವು



ನಾಲೆಯಲ್ಲಿ ಮೀನು ಮರಿಗಳು ಸಾವನ್ನಪ್ಪಿರುವುದು.

ಹೆಚ್.ಡಿ.ಕೋಟೆ: ಅನುಮಾನಾಸ್ಪದವಾಗಿ ಲಕ್ಷಾಂತರ ಮೀನು ಮರಿಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಬೀಚನಹಳ್ಳಿ ಗ್ರಾಮದ ಕಬಿನಿ ಜಲಾಶಯದ ಎಡದಂಡೆ ನಾಲೆಯಲ್ಲಿ ನಡೆದಿದೆ.

ಭಾನುವಾರ ಬೆಳಗ್ಗೆ ರೈತರು ನಾಲೆ ಬಳಿ ತೆರಳಿದಾಗ ಪ್ರಕರಣ ಬೆಳಕಿಗೆ ಬಂದಿದೆ. ನಿತ್ಯ ರೈತರು ದನ ಕರುಗಳಿಗೆ ನೀರು ಕುಡಿಸಲು, ಮಹಿಳೆಯರು ಬಟ್ಟೆ ಹೊಗೆಯಲು ನಾಲೆಗೆ ತೆರಳುತ್ತಿದ್ದರು. ಇದೀಗ ನಾಲೆಯಲ್ಲಿ ಲಕ್ಷಾಂತರ ಮೀನು ಮರಿಗಳು ಸಾವನ್ನಪ್ಪಿರುವುದರಿಂದ ರೈತರು ಭಯಗೊಂಡಿದ್ದಾರೆ. ಮೀನು ಮರಿಗಳು ಸಾವನ್ನಪ್ಪಿರುವ ಹಿನ್ನಲೆಯಲ್ಲಿ ಸಾಂಕ್ರಮಿಕ ರೋಗ ಹರಡುವ ಭೀತಿ ಇದೆ. ಹೀಗಾಗಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ನಾಲೆ ಸ್ವಚ್ಛಗೊಳಿಸುವಂತೆ ನೀರಾವರಿ ಇಲಾಖೆ ಅಧಿಕಾರಿಗಳನ್ನು ಸುತ್ತಮುತ್ತಲ ಗ್ರಾಮಗಳ ರೈತರು ಮನವಿ ಮಾಡಿದ್ದಾರೆ.

ಮುಖ್ಯಪೇದೆ ಹಲ್ಲೆ: ದೃಷ್ಟಿ ಕಳೆದುಕೊಂಡ ವ್ಯಕ್ತಿ



ಸ್ವಾಮಿ



ಪರಶುರಾಮ್

ಎಫ್‌ಐಆರ್ ದಾಖಲು

ಮುಖ್ಯಪೇದೆ ಪರಶುರಾಮ್ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಬಾರ್‌ನ ಸಿಬ್ಬಂದಿಗಳಾದ ಮಧುಸೂದನ್ (ಎ1), ರವಿ (ಎ2) ಹಾಗೂ ಮುಖ್ಯಪೇದೆ ಪರಶುರಾಮ್ (ಎ3) ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

– ಶಿವಪ್ರಕಾಶ್, ಪೊಲೀಸ್ ಇನ್ಸ್‌ಪೆಕ್ಟರ್.

ಕೆ.ಆರ್.ನಗರ: ಸ್ನೇಹಿತನ ಮನೆಯ ಹಬ್ಬಕ್ಕೆ ಡ್ರಿಂಕ್ಸ್ (ಮದ್ಯ) ತರಲು ಬಾರ್‌ಗೆ ಹೋದ ವ್ಯಕ್ತಿ ಮೇಲೆ ಮಫ್ತಿಯಲ್ಲಿದ್ದ ಮುಖ್ಯಪೇದೆ ಹಲ್ಲೆ ನಡೆಸಿದ ಪರಿಣಾಮ ಆತ ಕಣ್ಣಿನ ದೃಷ್ಟಿಯನ್ನೇ ಕಳೆದುಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಘಟನೆ ಪಟ್ಟಣದಲ್ಲಿ ನಡೆದಿದ್ದು, ಹಲ್ಲೆ ಮಾಡಿದ ಮುಖ್ಯಪೇದೆ ಪರಶುರಾಮ್ ವಿರುದ್ಧ ದೂರು ನೀಡಿದರೂ ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ಮೀನಾಮೇಷ ಎಣಿಸುತ್ತಿದ್ದಾರೆ.

ಮೈಸೂರು ತಾಲೂಕಿನ ಬೆಳವಾಡಿ ಸಮೀಪದ ಬಸವನಹಳ್ಳಿ ಗ್ರಾಮದ ಆರ್.ಸ್ವಾಮಿ ಹಲ್ಲೆಗೊಳಗಾದವರು. ಈತ ಮನೆಗಳಿಗೆ ಟೈಲ್ಸ್ ಹಾಕುವ ಮೇಸ್ತ್ರಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ.

ಪಟ್ಟಣದ ಮೈಸೂರು– ಹಾಸನ ರಸ್ತೆಯಲ್ಲಿರುವ ಹರ್ಷ ಬಾರ್‌ನಲ್ಲಿ ಸ್ನೇಹಿತನ ಮನೆಯ ಹಬ್ಬಕ್ಕೆ ಡ್ರಿಂಕ್ಸ್ ಖರೀದಿಸುವ ವೇಳೆ ಮಾತಿನ ಚಕಮಕಿ ನಡೆದು ಬಾರ್‌ನಿಂದ ಹೊರ ಬಂದ ವೇಳೆ ಬುಲೆಟ್ ಬೈಕ್‌ನಲ್ಲಿ ಮಫ್ತಿಯಲ್ಲಿ ಬಂದ ಪೊಲೀಸ್ ಮುಖ್ಯಪೇದೆ ಪರಶುರಾಮ್ ಗಲಾಟೆ ಬಗ್ಗೆ ತಿಳಿಯದೇ ಏಕಾಏಕಿ ನನಗೆ ಕಾಲಿನಿಂದ ಒದ್ದರು. ಕಣ್ಣಿನ ಚಿಕಿತ್ಸೆ ಆಗಿದೆ ಹೊಡೆಯಬೇಡಿ ಎಂದು ಎಷ್ಟೇ ಬೇಡಿಕೊಂಡರೂ ಬಿಡದೇ ಬಲವಾಗಿ ಕಣ್ಣಿನ ಭಾಗಕ್ಕೆ ಮುಷ್ಠಿಯಿಂದ ಹೊಡೆದು ಗಾಯಗೊಳಿಸಿದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬಳಿಕ ಆಸ್ಪತ್ರೆಗೆ ದಾಖಲಾದ ನನಗೆ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರು ಎಡ ಭಾಗದ ಕಣ್ಣು ಸಂಪೂರ್ಣವಾಗಿ ದೃಷ್ಟಿ ದೋಷವಾಗಿದೆ ಎಂದು ತಿಳಿಸಿದ್ದಾರೆ. ನನಗೆ ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಅವರ ಭವಿಷ್ಯ ರೂಪಿಸುವುದರೂ ಹೇಗೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಅವಲತ್ತುಕೊಂಡು ನನಗೆ ನ್ಯಾಯ ದೊರಕಿಸಿ ಎಂದು ಮನವಿ ಮಾಡಿದ್ದೇನೆ.

ಘಟನೆ ನಡೆದು ವಾರ ಕಳೆದರೂ ಮಫ್ತಿಯಲ್ಲಿರುವ ಮುಖ್ಯಪೇದೆ ಪರಶುರಾಮ್ ವಿರುದ್ಧ ದೂರು ದಾಖಲಿಸಿಲ್ಲ ದೂರು ವಾಪಸ್ಸು ಪಡೆಯುವಂತೆ ಪೊಲೀಸ್ ಮುಖ್ಯಪೇದೆ ದೂರುದಾರನಾದ ನನಗೆ ಧಮ್ಕಿ ಹಾಕಿಸುತ್ತಿದ್ದಾರೆ ಎಂದು ಆರ್.ಸ್ವಾಮಿ ತಿಳಿಸಿದ್ದಾರೆ.

ನೇಮಕ



ಹುಣಸೂರು, ಮೇ 3– ಕರ್ನಾಟಕ ರಾಜ್ಯ ಹಜ್ ಸಮಿತಿ ವ್ಯಾಪ್ತಿಯ ಮೈಸೂರು ಜಿಲ್ಲಾ ಹಜ್ ಸಮಿತಿ ಜಿಲ್ಲಾ ಸಂಯೋಜಕರಾಗಿ ತಾಪಂ ಮಾಜಿ ಸದಸ್ಯ ವಕ್ಫ್ ಬೋರ್ಡ್ ಜಿಲ್ಲಾ ಸಮಿತಿ ಸದಸ್ಯ ಅಜ್ಗರ್ ಪಾಷಾ ಅವರನ್ನು ನೇಮಕ ಮಾಡಿ ರಾಜ್ಯ ಹಜ್ ಸಮಿತಿ ಅಧ್ಯಕ್ಷ ಎಸ್.ಜುಲ್ಫಿಕರ್ ಅಹ್ಮದ್ ಖಾನ್ ಆದೇಶಿಸಿದ್ದಾರೆ.

ವ್ಯಕ್ತಿ ನಾಪತ್ತೆ

ಸರಗೂರು: ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಚಾಮಲಾಪುರ ಗ್ರಾಮದ ನಿವಾಸ ಶಶಿಕುಮಾರ್(42) ನಾಪತ್ತೆಯಾದವರು. ಏ.29ರಂದು ಬೆಳಗ್ಗೆ 10 ಗಂಟೆಗೆ ಕಾರ್ಯ ನಿಮಿತ್ತ ಸ್ವಗ್ರಾಮದಿಂದ ಸರಗೂರಿಗೆ ಆಗಮಿಸಿ ಕೆನರಾ ಬ್ಯಾಂಕ್‌ಗೆ ಆಗಮಿಸಿದ್ದ ಶಿವಕುಮಾರ್ ಮನೆಗೆ ವಾಪಸ್ ತೆರಳಿದ್ದರು. ಆದರೆ ಬ್ಯಾಂಕ್ ಪಾಸ್‌ಬುಕ್ ಮರೆತಿದ್ದೇನೆ ಎಂದು ಹೇಳಿ ಹೋದವರು ಇದುವರೆಗೂ ಆಗಮಿಸಿಲ್ಲ. ಹೀಗಾಗಿ ಅವರನ್ನು ಹುಡುಕಿ ಕೊಡುವಂತೆ ಪತ್ನಿ ಸುನಂದ ಸರಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ: 08228–265542, 9480805064 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ವೈವಿಧ್ಯ, ಮಿಶ್ರ ಬೆಳೆ ಸುಸ್ಥಿರ ಕೃಷಿಯ ಆಧಾರ ಸ್ತಂಭಗಳು



ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತ ಶಿಬಿರ ನಡೆಯಿತು.

ನಂಜನಗೂಡು, ಮೇ 3– ಮಿಶ್ರ ಬೆಳೆ ಲಾಭದ ಹೊಳೆಯಾಗಿದ್ದು, ವೈವಿಧ್ಯತೆ ಬೆಳೆ ಮತ್ತು ಮಿಶ್ರ ಬೆಳೆ ಪದ್ಧತಿಗಳು ಸುಸ್ಥಿರ ಕೃಷಿಯ 2 ಪ್ರಮುಖ ಆಧಾರ ಸ್ತಂಭಗಳಾಗಿವೆ ಎಂದು ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ತೋಟಗಾರಿಕೆ ವಿಶ್ವವಿದ್ಯಾಲಯದ ಅಡಿಕೆ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ.ನಾಗರಾಜಪ್ಪ ಅಡಿವಪ್ಪರ್ ತಿಳಿಸಿದರು.

ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ರೈತ ಶಿಬಿರದಲ್ಲಿ ಉಪನ್ಯಾಸ ನೀಡಿ ಅವರು ಮಾತನಾಡಿದರು.

ರೈತರಿಗೆ ಲಾಭ ಹೆಚ್ಚಿಸಲು ಮತ್ತು ಪರಿಸರ ರಕ್ಷಿಸಲು ಮಿಶ್ರ ಬೆಳೆ ಪದ್ಧತಿ ಸಹಾಯ ಮಾಡುತ್ತವೆ. ರೈತರು ಮಿಶ್ರ ಬೆಳೆಗೆ ಪ್ರಥಮ ಆದ್ಯತೆ ನೀಡಬೇಕು. ಕೃಷಿಯಲ್ಲಿ ಪ್ರಾಮಾಣಿಕತೆ, ಬೆಳೆಗಳ ಬಗ್ಗೆ ನಂಬಿಕೆ ಇರಬೇಕು. ಪೂರ್ಣ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿದಾಗ ಲಾಭಗಳಿಸಲು ಸಾಧ್ಯವಿದೆ. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವಾಗ ಮಿಶ್ರ ಬೆಳೆಗಳಿಗೆ ಆದ್ಯತೆ ನೀಡಬೇಕು. ಮಿಶ್ರ ಬೆಳೆಗಳು ಉತ್ತಮ ಫಲ ನೀಡುತ್ತವೆ ಎಂದು ಹೇಳಿದರು.

ಡಾ.ಹೆಚ್.ವಿ.ಬಿಂದು ಮಾತನಾಡಿ, ಸಾವಯವ ಕೃಷಿ ಕ್ಷೀಣಿಸುತ್ತಿರುವ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ ಪರಿಸರದಲ್ಲಿ ಸಮತೋಲನ ಕಾಪಾಡುತ್ತದೆ. ಆರೋಗ್ಯಕರ ಮತ್ತು ಸುರಕ್ಷಿತ ಆಹಾರ ಎಂದರೆ ಪೌಷ್ಟಿಕಾಂಶಯುಕ್ತ ತಾಜಾ ಆಹಾರವಾಗಿದೆ. ಸಾವಯವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ರೈತರು ಬಿತ್ತನೆಯಿಂದ ಕೊಯ್ಲಿನವರೆಗೆ ಪ್ರಕ್ರಿಯೆಗಳನ್ನು ವೈಜ್ಞಾನಿಕವಾಗಿ ಯೋಚಿಸಬೇಕು. ಸಾಲ ಸೌಲಭ್ಯ, ವಿಮೆ ಮತ್ತು ಉತ್ಪಾದನಾ ವೆಚ್ಚದ ಸರಿಯಾದ ಲೆಕ್ಕಾಚಾರ ಮಾಡಬೇಕು. ಕೃಷಿ ಮಾರುಕಟ್ಟೆ ಸಮಿತಿ ಮೂಲಕ ತಾಂತ್ರಿಕ ಹಾಗೂ ಮಾರುಕಟ್ಟೆಯ ತರಬೇತಿ ಪಡೆಯಬಹುದು. ಕೃಷಿ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಕರ್ನಾಟಕ ಸರ್ಕಾರವು 162ಕ್ಕೂ ಹೆಚ್ಚು ಮಾರುಕಟ್ಟೆಗಳಲ್ಲಿ ಅವಕಾಶ ಕಲ್ಪಿಸಿದೆ. ಇದರಿಂದ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತದೆ. ಕೃಷಿ ವ್ಯವಹಾರವು ಕೇವಲ ಬೇಸಾಯವಲ್ಲದೆ, ಅದನ್ನು ಒಂದು ಉದ್ಯಮವಾಗಿ ಪರಿಗಣಿಸಬೇಕು. ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಕೃಷಿ ಉತ್ಪಾದನೆಯನ್ನು ನಿರ್ವಹಿಸಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದರು.

ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸದಲ್ಲಿ ಭಾಗಿಯಾಗಿದ್ದರು. ಸುತ್ತೂರು ದರ್ಶನದಲ್ಲಿ ಶ್ರೀಮಠದ ಗುರುಪರಂಪರೆಯ ಅನಿಮೇಷನ್ ಸಾಕ್ಷ್ಯ ಚಿತ್ರ ವೀಕ್ಷಿಸಿ ಶ್ರೀಮಠದ ಭವ್ಯ ಇತಿಹಾಸ ಅರಿತರು. ಮೂಲಮಠ, ಶ್ರೀಸೋಮೇಶ್ವರ ದೇವಸ್ಥಾನ, ಶ್ರೀಮಹದೇಶ್ವರರು ರಾಗಿ ಬೀಸಿದ ಕಲ್ಲು ಹಾಗೂ ಶ್ರೀವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದು ಪುನೀತರಾದರು.

ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆ ವೀಕ್ಷಿಸಿದರು.

ಗೋಶಾಲೆಯಲ್ಲಿ ದೇಸಿ ಗೋತಳಿಗಳ ಬಗ್ಗೆ ಮಾಹಿತಿ ಪಡೆದರು. ಶ್ರೀಜಿ.ಎಲ್.ತ್ರಿಪುರಾಂತಕ ಅವರು ನದಿಗಳ ಮಹತ್ವಗಳ ಕುರಿತು ಮಾಹಿತಿ ನೀಡಿದರು.

ಅಪರಿಚಿತ ಶವ ಪತ್ತೆ: ಕೊಲೆ ಶಂಕೆ

ಕೆ.ಆರ್.ನಗರ, ಮೇ 3– ಕೆ.ಆರ್.ನಗರ ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಚೀರನಹಳ್ಳಿ ಬಳಿಯ ಚಾಮರಾಜ ಬಲದಂಡೆ ನಾಲೆ ಏರಿ ಪಕ್ಕದ ಪೊದೆಯಲ್ಲಿ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ಯಾರೋ ದುಷ್ಕರ್ಮಿಗಳು ಮುಖದ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾರೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಸುಮಾರು 25 ರಿಂದ 30 ವಯೋಮಾನದ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದ್ದು, ಮೃತ ವ್ಯಕ್ತಿ ಹಸಿರು, ಕಪ್ಪು ಬಣ್ಣದ ಹಾಗೂ ಹೂವಿನ ಡಿಸೈನ್ ಇರುವ ತುಂಬುತೋಳು ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ಬಲಗೈನಲ್ಲಿ ರಕ್ಷಿತ, ಶಿಲ್ಪ, ರಾಮು, ಲಲಿತ ಎಂಬ ಹಚ್ಚೆ ಇದೆ.

ಮೃತನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕೆ.ಆರ್.ನಗರ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಕೋರಿದೆ. ಹೆಚ್ಚಿನ ಮಾಹಿತಿಗೆ 9480805036 ನ್ನು ಸಂಪರ್ಕಿಸು ವಂತೆ ಪ್ರಕಟಣೆ ತಿಳಿಸಿದೆ.

ಭಾರೀ ಗಾಳಿ–ಮಳೆ: ಲಕ್ಷಾಂತರ ರೂ. ನಷ್ಟ



ಹುಣಸೂರು : ಶುಕ್ರವಾರ ಸುರಿದ ಭಾರೀ ಗಾಳಿ–ಮಳೆಗೆ ಬಾಳೆ ಮತ್ತು ಮನೆಯ ಶೀಟ್ ಹಾರಿ ಹೋಗಿ 25 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ.

ತಾಲೂಕಿನ ಹೊನ್ನೇಹಳ್ಳಿ ಗ್ರಾಮದ ನಿವಾಸಿ ರವಿಗೌಡರಿಗೆ ಸೇರಿದ ಮನೆಯ ಎಲ್ಲಾ ಶೀಟ್‌ಗಳು ಗಾಳಿಗೆ ಹಾರಿ ಹೋಗಿದ್ದು, ಮನೆಯಲ್ಲಿದ್ದ ದಿನಸಿ ಪದಾರ್ಥಗಳು ಸೇರಿದಂತೆ ಸುಮಾರು 15 ಲಕ್ಷ ರೂ. ನಷ್ಟ ಸಂಭವಿಸಿದೆ. ಜೊತೆಗೆ ಪಕ್ಕದ ಮನೆಯ ಸನತೇಗೌಡರ ಮನೆಯ ಶೀಟು ಹಾರಿ ಹೋಗಿವೆ.

ಇನ್ನು ಇದೇ ಗ್ರಾಮದ ಕೆ.ಎನ್.ರಾಧ ಅವರಿಗೆ ಸೇರಿದ 4 ಎಕರೆ ಜಮೀನಿನಲ್ಲಿ ಬೆಳೆದಿದ್ದ ನೇಂದ್ರ ಬಾಳೆ ಗಾಳಿ, ಮಳೆಗೆ ನೆಲಕ್ಕುರುಳಿ 10 ಲಕ್ಷ ರೂ. ನಷ್ಟ ಸಂಭವಿಸಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಉಪವಿಭಾಗಾಧಿಕಾರಿ, ಸಿಬ್ಬಂದಿ ನಿರ್ಲಕ್ಷ್ಯ, ಅಸಹಕಾರ

ಮಾದಿಗರ ಸ್ಮಶಾನ ರಸ್ತೆ ಅಭಿವೃದ್ಧಿ ಕಾಮಗಾರಿ ನೆನೆಗುದಿಗೆ

ಮೇ 10ರೊಳಗೆ ಕಾಮಗಾರಿ ಆರಂಭಿಸದಿದ್ದರೆ ಉಪವಾಸ ಸತ್ಯಾಗ್ರಹದ ಎಚ್ಚರಿಕೆ



ತಿ.ನರಸೀಪುರ, ಮೇ 3– ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಅಸಹಕಾರ ಮತ್ತು ನಿರ್ಲಕ್ಷ್ಯದಿಂದ ಬನ್ನೂರಿನ ಮಾದಿಗರ ಸ್ಮಶಾನದ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭ ವಾಗದೇ ನೆನೆಗುದಿಗೆ ಬಿದ್ದಿದೆ.

ತಾಲೂಕು ಉಪ ವಿಭಾಗಾಧಿಕಾರಿ ಮತ್ತು ಸಿಬ್ಬಂದಿ ಸರ್ಕಾರದಿಂದ ಹಣ ಬಿಡುಗಡೆಯಾಗಿ ವರ್ಕ್ ಆರ್ಡರ್ ಆಗಿದ್ದರೂ, ಮಾದಿಗ ಸಮುದಾಯದ ಸ್ಮಶಾನದ ರಸ್ತೆ ಅಭಿವೃದ್ಧಿಗೆ ಅವಕಾಶ ನೀಡದೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಪುರಸಭೆ ಮಾಜಿ ಸದಸ್ಯ ಶಿವಣ್ಣ ಮತ್ತು ಸಮುದಾಯದ ಮುಖಂಡರು ಆಪಾದಿಸಿದ್ದಾರೆ.

ಬನ್ನೂರು ಮಾದಿಗರ ಸ್ಮಶಾನಕ್ಕೆ ಶವ ಸಾಗಿಸಲು ರಸ್ತೆ ಇಲ್ಲದ ಕಾರಣ ಹಲವು ವರ್ಷಗಳಿಂದ ನಡೆಸಿದ ಹೋರಾಟ ಮತ್ತು ಬನ್ನೂರಿನ ಕಾವೇರಿ ಸರ್ಕಲ್‌ನಲ್ಲಿ ದಿ.ನಿಂಗರಾಜು ಮತ್ತು ಮರಿಯಯ್ಯ ಅವರ ಶವ ಇಟ್ಟುಕೊಂಡು ಮುಷ್ಕರ ನಡೆಸಿದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ರಸ್ತೆಯ ಕಾಮಗಾರಿಗೆ ಹಣ ಬಿಡುಗಡೆ ಮಾಡಿಸಿದ್ದಾರೆ ಎಂದರು.

ತಹಸೀಲ್ದಾರ್ ಸುರೇಶ್ ಆಚಾರ್ ಮತ್ತು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡರು ರಸ್ತೆ ಕಾಮಗಾರಿಗೆ ಬೇಕಾದ ಭೂ ಸ್ವಾಧೀನ ಪ್ರಕ್ರಿಯೆ ಮಾಡಿ ಮುಗಿಸಿದ್ದಾರೆ. ಈ ಹಿಂದಿನ ಉಪವಿಭಾಗಾಧಿಕಾರಿ ರಕ್ಷಿತ್ ಸ್ಮಶಾನಕ್ಕೆ ಭೇಟಿ ನೀಡಿ ಸ್ಮಶಾನದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಬೇಕಾದ ಕೆಲಸ ಮಾಡಿ ಮುಗಿಸಿದ್ದಾರೆ ಮತ್ತು ನಾವು ಬನ್ನೂರಿನ ಪುರಸಭೆ ಎದುರು ಅಹೋರಾತ್ರಿ ಧರಣಿ ಮಾಡಿದಾಗಲೂ ಕೂಡ ನಮ್ಮ ಸಮಸ್ಯೆ ಬಗೆಹರಿಸಿದ್ದಾರೆ ಎಂದು ಶಿವಣ್ಣ ತಿಳಿಸಿದ್ದಾರೆ.

ಸಂಸದ ಸುನೀಲ್ ಬೋಸ್ ನಮ್ಮ ಕ್ಷೇತ್ರದ ಗುದ್ದಲಿ ಪೂಜೆಗೆ ಬಂದ ವೇಳೆ ಡಿಸಿ ಅವರಿಗೆ ಫೋನ್ ಮಾಡಿಸಿದಾಗಲೂ ಅವರು ಇನ್ನೂ ಒಂದು ವಾರದಲ್ಲಿ ಕೆಲಸ ಪ್ರಾರಂಭಿಸುತ್ತೇವೆ ಎಂದು ಭರವಸೆ ನೀಡಿ 2 ತಿಂಗಳಾದರೂ ನಮ್ಮ ಸ್ಮಶಾನದ ರಸ್ತೆ ನಿರ್ಮಾಣಕ್ಕೆ ಮುಂದಾಗದೇ ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಅವರು ದೂರಿದ್ದಾರೆ.

ಹಲವು ಬಾರಿ ದೂರವಾಣಿ ಮತ್ತು ಫೋಟೋ ದಾಖಲೆ ಮುಖಾಂತರ ನಮ್ಮ ಜನಾಂಗದ ಮುಖಂಡರೊಂದಿಗೆ ಹೋಗಿ ಮನವಿ ಮಾಡಿದರೂ ಸ್ಪಂದಿಸದ ಉಪವಿಭಾಗಾಧಿಕಾರಿಗಳು ಅಸಡ್ಡೆಯಿಂದ ವರ್ತಿಸುತ್ತಾರೆ. ಉಪವಿಭಾಗಾಧಿಕಾರಿಗಳು ಮೇ 10ರೊಳಗೆ ಕಾಮಗಾರಿ ಪ್ರಾರಂಭಿಸದಿದ್ದರೆ ಮೇ 11 ರಂದು ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಗ್ರಾಮಸ್ಥರು ನಿರ್ಧರಿಸಿದ್ದಾರೆ ಎಂದರು.

ಮೇಸನ್ ವೆಂಕಟಸ್ವಾಮಿ ನಿಧನ



ಹೆಚ್.ಡಿ.ಕೋಟೆ, ಮೇ 3– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಮೇಸನ್ ವೆಂಕಟಸ್ವಾಮಿ (56) ಶನಿವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೈಸೂರಲ್ಲಿ ನೀಟ್ ಪರೀಕ್ಷೆ ಬರೆದ 7412 ವಿದ್ಯಾರ್ಥಿಗಳು

ಮೈಸೂರಿನ 17 ಕೇಂದ್ರಗಳಲ್ಲಿ ಪರೀಕ್ಷೆ, 299 ವಿದ್ಯಾರ್ಥಿಗಳು ಗೈರು



ನೀಟ್ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳು ಸಾಲಾಗಿ ನಿಂತಿರುವುದು.

ಮೈಸೂರು, ಮೇ 3(ಎಂಟಿವೈ)– ಮೈಸೂರಿನ 17 ಪರೀಕ್ಷಾ ಕೇಂದ್ರಗಳಲ್ಲಿ ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ನಡೆದ ನೀಟ್ ಪರೀಕ್ಷೆಯಲ್ಲಿ 7412 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ವತಿಯಿಂದ ನಡೆದ ನೀಟ್ ಪರೀಕ್ಷೆ ಬರೆಯಲು ಮೈಸೂರು ಜಿಲ್ಲೆಯಲ್ಲಿ 7711 ಅಭ್ಯರ್ಥಿಗಳು ನೊಂದಣಿ ಮಾಡಿಕೊಂಡಿದ್ದರು. ಇಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆವರೆಗೆ ಬಿಗಿ ಭದ್ರತೆಯಲ್ಲಿ ನಡೆದ ನೀಟ್ ಪರೀಕ್ಷೆಯಲ್ಲಿ 299 ವಿದ್ಯಾರ್ಥಿಗಳು ಗೈರು ಹಾಜರಾದರೆ 7412 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಮಹಾರಾಜ ಜ್ಯೂನಿಯರ್ ಕಾಲೇಜು, ಮಹಾರಾಣಿ ವಾಣಿಜ್ಯ ಕಾಲೇಜು, ಮಹಾರಾಣಿ ಜ್ಯೂನಿಯರ್ ಕಾಲೇಜು ಸೇರಿದಂತೆ 17 ಪರೀಕ್ಷಾ ಕೇಂದ್ರದಲ್ಲಿ ನೀಟ್ ಪರೀಕ್ಷೆ ನಡೆಸಲು ವ್ಯವಸ್ಥೆ ಮಾಡಲಾಗಿತ್ತು. ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರೊಳಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಪರೀಕ್ಷಾ ಅಕ್ರಮ ತಡೆಗಾಗಿ ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್ ಜಾಮರ್ ಅಳವಡಿಕೆ, ಪರೀಕ್ಷಾ ಕೊಠಡಿಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು. ಪರೀಕ್ಷಾ ಕೇಂದ್ರದ ಪ್ರವೇಶ ದ್ವಾರದ ಬಳಿಯೇ ವಿದ್ಯಾರ್ಥಿಗಳು ಮುಖ ಚಹರೆ ಪರೀಕ್ಷೆ ನಡೆಸಿ, ಪ್ರವೇಶ ಪತ್ರ ಹಾಗೂ ಕಾಲೇಜಿನ ಗುರುತಿನ ಚೀಟಿ, ಆಧಾರ್ ಕಾರ್ಡ್ ಪರಿಶೀಲಿಸಿ ಖಚಿತ ಪಡಿಸಿಕೊಂಡ ಬಳಿಕವಷ್ಟೇ ಪರೀಕ್ಷಾ ಕೇಂದ್ರ ಪ್ರವೇಶಿಸಲು ಅವಕಾಶ ನೀಡಲಾಗುತ್ತಿತ್ತು. ಅಲ್ಲದೆ, ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಪೆನ್ನನ್ನು ಪರೀಕ್ಷಾ ಕೇಂದ್ರದಲ್ಲಿಯೆ ವಿತರಿಸಲಾಯಿತು. ಯಾವುದೇ ಗೊಂದಲವಿಲ್ಲದೆ ನೀಟ್ ಪರೀಕ್ಷೆ ಸುಸೂತ್ರವಾಗಿ ನೆರವೇರಿತು. ಪರೀಕ್ಷಾ ಕೇಂದ್ರದ ಸುತ್ತ ನಿಷೇದಾಜ್ಞೆ ಜಾರಿಗೊಳಿಸಲಾಗಿತ್ತು.

ಪೋಷಕರ ಕಾತರ: ಮಕ್ಕಳಿಗೆ ವೈದ್ಯಕೀಯ ಶಿಕ್ಷಣ ಕೊಡಿಸಬೇಕೆಂಬ ಹಂಬಲ, ಆಕಾಂಕ್ಷೆ ಹೊಂದಿದ್ದ ಪೋಷಕರು ನೀಟ್ ಪರೀಕ್ಷೆ ಬರೆಯಲು ನೊಂದಣಿ ಮಾಡಿದ್ದ ಮಕ್ಕಳನ್ನು ಪರೀಕ್ಷಾ ಕೇಂದ್ರಕ್ಕೆ ಕರೆತಂದು ಬೆಳಗ್ಗಿನಿಂದ ಸಂಜೆವರೆಗೂ ಕಾಯುತ್ತಾ ಕುಳಿತಿದ್ದ ದೃಶ್ಯ ಕಂಡು ಬಂದಿತು. ಜಿಲ್ಲೆಯ ವಿವಿಧೆಡೆ ಮಾತ್ರವಲ್ಲದೆ, ನೆರೆ ರಾಜ್ಯ ಕೇರಳದ ವಿದ್ಯಾರ್ಥಿಗಳು ಮೈಸೂರಿನ ವಿವಿಧ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ಬರೆಯಲು ಪೋಷಕರೊಂದಿಗೆ ಆಗಮಿಸಿದ್ದರು.

ಪರೀಕ್ಷಾ ಕೇಂದ್ರದ ಗೊಂದಲ: ನೀಟ್ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದ ಕೆಲ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಬಗ್ಗೆ ಗೊಂದಲ ಉಂಟಾಗಿತ್ತು. ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜಿನ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಬೇಕಾಗಿದ್ದ ಕೆಲ ವಿದ್ಯಾರ್ಥಿಗಳಿಗೆ ಗೊಂದಲ ಉಂಟಾಗಿತ್ತು. ಜ್ಯೂನಿಯರ್ ಮಹಾರಾಜ, ಮಹಾರಾಜ ಪದವಿ ಕಾಲೇಜು, ಜ್ಯೂನಿಯರ್ ಮಹಾರಾಣಿ, ಮಹಾರಾಣಿ ಕಾಲೇಜಿನ ಪರೀಕ್ಷಾ ಕೇಂದ್ರದ ಬಗ್ಗೆ ಮಾಹಿತಿ ಇಲ್ಲದೆ ಕೊನೆ ಕ್ಷಣದಲ್ಲಿ ಪರದಾಡಿದ ಸಂಗತಿ ನಡೆಯಿತು.

ನೀಟ್ ಪರೀಕ್ಷೆ ಸುಸೂತ್ರವಾಗಿ ನೆರವೇರಲು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ನೇತೃತ್ವದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪ್ರಬಾರಿ ಉಪನಿರ್ದೇಶಕ ಹನುಮಂತ ರಾವ್ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ರಾಜಕಾರಣಿಗಳಲ್ಲಿ ಸ್ವಾರ್ಥ ಕಡಿಮೆ ಆಗುವವರೆಗೂ ಜನತೆಗೆ ಒಳ್ಳೆಯದಾಗುವುದಿಲ್ಲ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ



ಕೊಪ್ಪಳ: ಈಗಿನ ರಾಜಕೀಯದಲ್ಲಿ ನೈತಿಕ ಮೌಲ್ಯ ಇಲ್ಲವಾಗಿದ್ದು, ಸಾರ್ವಜನಿಕರ ಕಷ್ಟ– ಕಾರ್ಪಣ್ಯಗಳಿಗೆ ಜನಪ್ರತಿನಿಧಿಗಳು ಸ್ಪಂದಿಸುವುದು ಕಡಿಮೆಯಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದ್ದಾರೆ.

ಕೊಪ್ಪಳದ ಗವಿಮಠ ಆವರಣದಲ್ಲಿ ಇಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಜನಪ್ರತಿನಿಧಿಗಳು ಹೇಳುವುದು ಒಂದು ಮಾಡುವುದು ಇನ್ನೊಂದು ಎಂಬಂತಾಗಿದೆ. ಜನಪ್ರತಿನಿಧಿಗಳಾದವರು ಜನರ ಸಂಕಷ್ಟಗಳನ್ನು ಆಲಿಸುವುದನ್ನು ಬಿಟ್ಟು ವೈಯಕ್ತಿಕ ಹಿತಾಸಕ್ತಿಗಳನ್ನು ಚರ್ಚೆ ಮಾಡುವುದು ಸರಿಯಲ್ಲ. ನಮ್ಮ ಕಾಲದ ರಾಜಕಾರಣವೇ ಬೇರೆ, ಈಗಿನ ರಾಜಕಾರಣದ ವ್ಯವಸ್ಥೆಯೇ ಬೇರೆ. ಈಗ ನಾವು ಕಷ್ಟಕಾಲದಲ್ಲಿದ್ದೇವೆ ಎಂದೆನಿಸುತ್ತದೆ. ರಾಜಕಾರಣದಲ್ಲಿ ನೈತಿಕ ಮೌಲ್ಯವೇ ಇಲ್ಲವಾಗಿದೆ. ರಾಜಕಾರಣಿಗಳಿಗೆ ವೈಯಕ್ತಿಕ ಸ್ವಾರ್ಥ ಕಡಿಮೆ ಆಗುವವರೆಗೂ ರಾಜ್ಯದ ಜನತೆಗೆ ಒಳ್ಳೆಯದಾಗುವುದಿಲ್ಲ ಎಂದರು.

ಸದನದಲ್ಲಿ ಉತ್ತಮ ವಿಷಯಗಳ ಬದಲಾಗಿ ಹನಿ ಟ್ರ್ಯಾಪ್‌ನಂತಹ ವಿಚಾರಗಳು ಚರ್ಚೆಯಾಗುತ್ತವೆ. ಇದನ್ನು ನೋಡಿ ನಾವೇ ತಲೆ ಜಜ್ಜಿಕೊಳ್ಳುವಂತಾಗಿದೆ. ಈ ಬಗ್ಗೆ ನಾನು ಸಹ ಎಚ್ಚರಿಕೆ ಕೊಡುವುದರ ಜೊತೆಗೆ ಆಡಳಿತ ಮತ್ತು ಪ್ರತಿಪಕ್ಷದ ನಾಯಕರೊಂದಿಗೆ ಮಾತನಾಡಿದ್ದೇನೆ. ಸದನದಲ್ಲಿ ಅಭಿವೃದ್ಧಿ ಕುರಿತಾದ ವಿಷಯವನ್ನು ಹೊರತುಪಡಿಸಿ ಬೇರೆ ವಿಷಯ ಚರ್ಚೆ ಮಾಡಿದಲ್ಲಿ ನಿರ್ದಾಕ್ಷ್ಯಣ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದೇನೆ. ಈಚೆಗೆ ನಡೆದ ಸದನದಲ್ಲಿ ಬಜೆಟ್ ವಿಷಯಗಳ ಮೇಲೆ 23 ಶಾಸಕರು ಮಾತನಾಡಿದ್ದಾರೆ. ಬರುವ ದಿನಗಳಲ್ಲಿ ಒಳ್ಳೆಯ ವಿಚಾರಗಳು ಚರ್ಚೆಯಾಗುವ ಭರವಸೆ ಇದೆ ಎಂದು ಹೇಳಿದರು.

ಶಾಸಕ ವಿನಯ್ ಕುಲಕರ್ಣಿ ಜೈಲು ಸೇರಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಹೊರಟ್ಟಿ, ಜನಪ್ರತಿನಿಧಿಗಳಿಗೆ ಅಧಿಕಾರ ಬಂದಾಗ ಮೈತುಂಬ ಕಣ್ಣಿರಬೇಕು. ವಿನಯ ಕುಲಕರ್ಣಿಗೆ ಸಣ್ಣ ವಯಸ್ಸು. ಈಗ ನ್ಯಾಯಾಲಯ ಕೊಟ್ಟ ತೀರ್ಪು ಒಪ್ಪಬೇಕು. ನ್ಯಾಯಾಲಯದ ತೀರ್ಪು ಪ್ರಶ್ನೆ ಮಾಡಲು ಬರುವುದಿಲ್ಲ. ಅದು ಆತನ ಹಣೆಬರಹ ಎಂದರು.

ದೇಶದಲ್ಲಿ ಮಹಿಳೆಯರು ಶೇ.52ರಷ್ಟಿದ್ದಾರೆ. ಅವರೇ ಸ್ಪರ್ಧೆ ಮಾಡಿ ಗೆದ್ದರೆ ದೇಶವನ್ನು ಅವರೇ ಆಳ್ವಿಕೆ ಮಾಡಲಿದ್ದಾರೆ. ಆದರೆ ಮಹಿಳೆಯರು ರಾಜಕಾರಣ ಮಾಡುವುದಿಲ್ಲ, ಪತಿ ಅಥವಾ ಮಗನನ್ನ ಅಧಿಕಾರ ನಡೆಸಲು ಬಿಡುತ್ತಾರೆ ಎಂದರು.

ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧ ಜನ ದಂಗೆ ಏಳುವ ಕಾಲ ಸನ್ನಿಹಿತ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆರೋಪ

ಮೈಸೂರು, ಮೇ.3(ಬಿಎಲ್‌ಯು)– ವಾಣಿಜ್ಯ ಸಿಲಿಂಡರ್ ಸೇರಿದಂತೆ ಇತರೆ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಜನ ಸಾಮಾನ್ಯರು ದಂಗೆ ಏಳುವ ಕಾಲ ಸನ್ನಿಹಿತವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಎಚ್ಚರಿಸಿದ್ದಾರೆ.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು ನಗರ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚ ರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆ ಒಂದೇ ಬಾರಿಗೆ ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿ ಜನ ಸಾಮಾನ್ಯರನ್ನು ಸಂಕಷ್ಟಕ್ಕೆ ಸಿಲುಕಿಸಿದೆ ಎಂದು ಆರೋಪಿಸಿದರು.

ಬಿಜೆಪಿ ನಾಯಕರು ಹೇಳುವುದು ಒಂದಾದರೆ, ಮಾಡುವುದು ಮತ್ತೊಂದಾಗಿದೆ. ಎಲ್‌ಪಿಜಿ ಬೆಲೆ ಹೆಚ್ಚಳ ಮಾಡುವುದಿಲ್ಲ ಎಂದು ಪಂಚ ರಾಜ್ಯ ಚುನಾವಣೆಯಲ್ಲಿ ಹೇಳುತ್ತಿದ್ದ ಬಿಜೆಪಿ ನಾಯಕರು ಚುನಾವಣೆ ಮುಗಿಯುತ್ತಿದ್ದಂತೆ ಬೆಲೆ ಏರಿಕೆಯ ಶಾಕ್ ನೀಡಿದ್ದಾರೆ ಎಂದು ಲಕ್ಷ್ಮಣ ಆಪಾದಿಸಿದರು.

ಈ ತನಕ ಎಲ್‌ಪಿಜಿ ಸಿಲಿಂಡರ್ ಬೆಲೆ 20 ರಿಂದ 50 ರೂಪಾಯಿಗೆ ಹೆಚ್ಚಳವಾಗುತ್ತಿತ್ತು. ಆದರೆ ಈಗ 992 ರೂ.ಗೆ ಏರಿಕೆ ಮಾಡಿ ಇತಿಹಾಸ ಸೃಷ್ಟಿಸಿದ್ದಾರೆ ಎಂದು ದೂರಿದರು.

ವಿಮಾನಗಳ ಇಂಧನ ಬೆಲೆ ಕೂಡ ಏರಿಕೆ ಮಾಡಿದ್ದು, ವಿದೇಶಗಳಿಗೆ ರಫ್ತು ಮಾಡುವ ತೈಲ ಬೆಲೆಯನ್ನು ಮಾತ್ರ 23 ರೂಪಾಯಿ ಕಡಿಮೆ ಮಾಡಿದ್ದಾರೆ. ಡಾಲರ್ ಮೌಲ್ಯ ಕುಸಿಯುತ್ತಿದೆ. ಹಣದುಬ್ಬರ ಪ್ರಮಾಣ ಹೆಚ್ಚಳವಾಗುತ್ತಿದೆ. ಹೀಗೆ ಜನ ಸಾಮಾನ್ಯರಿಗೆ ಒಂದಾದಂತೆ ಒಂದು ಬೆಲೆ ಏರಿಕೆಯ ಬರೆ ಎಳೆದರೆ ಹೇಗೆ ಬದುಕುವುದು ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಹೋಟೆಲ್‌ಗಳಿದ್ದು, 35 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ದೇಶದಲ್ಲಿ 35 ಲಕ್ಷ ಹೋಟೆಲ್ ಗಳಿದ್ದು, 9 ಕೋಟಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆ ಮಾಡುವುದರಿಂದ ಇಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ಲಕ್ಷ್ಮಣ ಆತಂಕ ವ್ಯಕ್ತಪಡಿಸಿದರು.


ಮೈಸೂರು ಹಾಗೂ ಹೈದರಾಬಾದ್ ನಡುವೆ ವಿಮಾನ ಹಾರಾಟ ಪುನಾರರಂಭಗೊಂಡಿದೆಯೇ ಹೊರತು ಹೊಸ ವಿಮಾನ ಸಂಚಾರ ಆರಂಭಿಸಿಲ್ಲ ಎಂದು ತಿಳಿಸಿದ ಲಕ್ಷ್ಮಣ, ರನ್ ವೇ ವಿಸ್ತರಣೆ ಸಂಬಂಧ ರಾಷ್ಟ್ರೀಯ ಹೆದ್ದಾರಿ ಸ್ಥಳಾಂತರ ಮಾಡುವ ಪ್ರಕ್ರಿಯೆ ಸ್ಥಗಿತವಾಗಿದೆ. ಈ ಬಗ್ಗೆ ಸಂಸದ ಯದುವೀರ್ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಎಸ್‌ಡಿಜೆ ಗಿರವಿ ಅಂಗಡಿ ಮಾಲೀಕ ಚಿನ್ನತಂಬಿಗೂ ರಾಜ್ಯ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ. ವಿನಾಕಾರಣ ಕೆಲವರು ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಹೆಸರು ಎಳೆದು ತರುತ್ತಿದ್ದಾರೆ ಎಂದು ಲಕ್ಷ್ಮಣ ಸ್ಪಷ್ಟಪಡಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಹಾಗೂ ಮಾಧ್ಯಮ ವಕ್ತಾರ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಎಲ್ಲಾ ಗ್ರಂಥಾಲಯಗಳಿಗೂ ದೇವಾಲಯಗಳಂತೆ ಮಹತ್ವ ನೀಡಿ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಸಲಹೆ



ಮೈಸೂರಿನ ರಾಮಾನುಜ ರಸ್ತೆಯ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ನಡೆದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮವನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಉದ್ಘಾಟಿಸಿದರು.

ಮೈಸೂರು, ಮೇ.3(ಬಿಎಲ್‌ಯು)– ದೇವಾಲಯಗಳಂತೆ ಗ್ರಂಥಾಲಯಗಳಿಗೂ ಮಹತ್ವ ನೀಡಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಸಲಹೆ ನೀಡಿದರು.

ಮೈಸೂರಿನ ರಾಮಾನುಜ ರಸ್ತೆಯ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಇಂದು ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನೆಗೊಂದು ಗ್ರಂಥಾಲಯ ನಿರ್ಮಾಣವಾದರೆ ಮನೆ ಜನರ ಜ್ಞಾನಾರ್ಜನೆ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಪುಸ್ತಕ ಪ್ರಾಧಿಕಾರವು ಪುಸ್ತಕ ಪ್ರಿಯರನ್ನು ಉತ್ತೇಜಿಸಿ ಹೀಗೆ ಪ್ರತಿಯೊಂದು ಮನೆಯಲ್ಲೂ ಗ್ರಂಥಾಲಯ ತೆರೆಯುವ ಗುರಿ ಹೊಂದಲಾಗಿದೆ. ಶೀಘ್ರದಲ್ಲೇ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ತೆರೆಯುವ ಮೂಲಕ ಈ ಕಾರ್ಯಕ್ರಮ ಒಂದು ಕೋಟಿ ಜನರ ಮನಸ್ಸು ಮುಟ್ಟುವ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಪ್ರತಿಯೊಂದು ಶಾಲಾ–ಕಾಲೇಜಿನಲ್ಲಿ ಕಡ್ಡಾಯವಾಗಿ ಗ್ರಂಥಾಲಯ ನಿರ್ಮಿಸಿ ಪುಸ್ತಕಗಳನ್ನು ಸಂಗ್ರಹ ಮಾಡುವ ಸಂಕಲ್ಪ ಮಾಡಬೇಕು. ಇದರಿಂದ ಭವಿಷ್ಯದ ಪೀಳಿಗೆಯಲ್ಲಿ ಜ್ಞಾನವೃದ್ಧಿಯಾಗಿ ದೇಶದ ಬೆಳವಣಿಗೆಗೆ ಪೂರಕವಾಗುತ್ತದೆ ಎಂದು ಡಾ.ಮಾನಸ ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಮ.ಗು.ಸದಾನಂದಯ್ಯ ಅವರು, ಶರಣರ ಕಲ್ಪನೆಯಲ್ಲಿ ಜ್ಞಾನಾರ್ಜನೆ ವೃದ್ಧಿಗೊಳಿಸಬೇಕು. ಇದರಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಬಹುದು ಎಂದು ಹೇಳಿದರು.

ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತಿ ಸಮಿತಿ ಸಂಚಾಲಕ ಎಂ.ಚಂದ್ರಶೇಖರ್, ಲೇಖಕರೂ ಆದ ಮೈಸೂರು ಆರ್ಟ್ ಗ್ಯಾಲರಿ ಸಂಸ್ಥಾಪಕ ಎಲ್.ಶಿವಲಿಂಗಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಕಂಠಮೂರ್ತಿ ಕಾರ್ಯಕ್ರಮ ನಿರೂಪಣೆ ಮಾಡಿದರು, ಮನೋಹರ್ ಅವರು ಸ್ವಾಗತ ಕೋರಿದರು.

ಒಂದೇ ಕಡೆ ಮೂರು ಹೆಲಿಪ್ಯಾಡ್

ಡಿಕೆಶಿ ಲ್ಯಾಂಡ್ ಆಗಬೇಕಿದ್ದ ಸ್ಥಳದಲ್ಲಿ ಸುದೀಪ್ ಹೆಲಿಕಾಪ್ಟರ್ ಲ್ಯಾಂಡಿಗ್

ರಾಯಚೂರು: ಜಿಲ್ಲೆಯ ಸಿಂಧನೂರಿನಲ್ಲಿ ಪೈಲಟ್ ಗೊಂದಲದಿಂದ ಕಿಚ್ಚ ಸುದೀಪ್ ಪ್ರಯಾಣಿಸುತ್ತಿದ್ದ ಹೆಲಿಕ್ಯಾಪ್ಟರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೆಲಿಕಾಪ್ಟರ್‌ಗೆ ನಿಗದಿಪಡಿಸಿದ್ದ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಆಗಿದೆ.

ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರ ಹೆಲಿಕಾಪ್ಟರ್ ಲ್ಯಾಂಡಿಂಗ್‌ಗೆ ಸಿಂಧನೂರಿನ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಹೆಲಿಪ್ಯಾಡ್ ವ್ಯವಸ್ಥೆ ಮಾಡಲಾಗಿತ್ತು. ನಟ ಕಿಚ್ಚ ಸುದೀಪ್ ಬಂದಿದ್ದ ಹೆಲಿಕ್ಯಾಪ್ಟರ್ ಪೈಲೆಟ್ ಗೊಂದಲಕ್ಕೀಡಾಗಿ, ನಿಗದಿತ ಹೆಲಿಪ್ಯಾಡ್ ಬಿಟ್ಟು ಬೇರೆ ಹೆಲಿಪ್ಯಾಡ್‌ನಲ್ಲಿ ಲ್ಯಾಂಡ್ ಮಾಡಿದ್ದಾರೆ.

ಇದರಿಂದ ಪೊಲೀಸ್ ಅಧಿಕಾರಿಗಳು ಪೈಲೆಟ್ ಅನ್ನು ತರಾಟೆ ತೆಗೆದುಕೊಂಡರು. ಬಳಿಕ ಪೊಲೀಸ್ ಅಧಿಕಾರಿಗಳ ಸೂಚನೆ ಮೇರೆಗೆ ನಿಗದಿತ ಹೆಲಿಪ್ಯಾಡ್‌ನಲ್ಲಿ ಪುನಃ ಲ್ಯಾಂಡಿಂಗ್ ಮಾಡಲಾಯಿತು. ಮೈದಾನದಲ್ಲಿ ಒಂದೇ ಕಡೆ ಮೂರು ಹೆಲಿಪ್ಯಾಡ್ ಸಿದ್ದ ಮಾಡಿದ್ದರಿಂದ ಪೈಲಟ್ ಗೊಂದಲಕ್ಕೊಳಗಿದ್ದಾರೆ ಎನ್ನಲಾಗಿದೆ.

ಕೆಪಿಎಸ್‌ಸಿ ಅಕ್ರಮಗಳ ತನಿಖೆಗೆ ಸದನ ಸಮಿತಿ ರಚನೆ

ಬೆಂಗಳೂರು: ಕರ್ನಾಟಕ ಸಾರ್ವಜನಿಕ ಸೇವಾ ಆಯೋಗದಲ್ಲಿ ನಡೆದಿರುವ ಅಕ್ರಮಗಳ ಕುರಿತು ಪರಿಶೀಲನೆ ನಡೆಸಲು ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ವಿಧಾನಸಭೆಯ ಎಲ್ಲಾ ಪಕ್ಷಗಳ ಸದಸ್ಯರನ್ನು ಒಳಗೊಂಡ ಸದನ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಗೆ ಹಿರಿಯ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ನೇತೃತ್ವ ವಹಿಸಿದ್ದಾರೆ.

ಈ ಸಮಿತಿಯ ಮುಖ್ಯ ಉದ್ದೇಶ ಕೆಪಿಎಸ್‌ಸಿಯಲ್ಲಿನ ಅಕ್ರಮಗಳನ್ನು ಸಂಪೂರ್ಣವಾಗಿ ಪರಿಶೀಲಿಸುವುದು, ಮುಂದಿನ ದಿನಗಳಲ್ಲಿ ಅಕ್ರಮಗಳು ಮರುಕಳಿಸದಂತೆ ಅಗತ್ಯ ಸುಧಾರಣೆಗಳ ಬಗ್ಗೆ ಶಿಫಾರಸು ಸಲ್ಲಿಸುವುದು, ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದಾಗಿದೆ.

ಸಮಿತಿಯಲ್ಲಿ ಶಾಸಕರಾದ ಹಂಪನಗೌಡ ಬಾದರ್ಲಿ, ಹೆಚ್.ಸಿ.ಬಾಲಕೃಷ್ಣ, ಎ.ಎಸ್.ಪೊನ್ನಣ್ಣ, ಕೆ.ಎಂ.ಶಿವಲಿಂಗೇಗೌಡ, ರಾಘವೇಂದ್ರ ಬಸವರಾಜ ಹಿಟ್ನಾಳ್, ರೂಪಕಲಾ, ಅರಗ ಜ್ಞಾನೇಂದ್ರ, ಎಸ್. ಸುರೇಶ್ ಕುಮಾರ್, ಮಹೇಶ್ ಟೆಂಗಿನಕಾಯಿ ಮತ್ತು ಎಂ.ಟಿ.ಕೃಷ್ಣಪ್ಪ ಸೇರಿದಂತೆ ಹಲವು ಪ್ರಮುಖ ಸದಸ್ಯರು ಸೇರಿದ್ದಾರೆ.

ಈ ಸದನ ಸಮಿತಿಗೆ ಮೂರು ತಿಂಗಳ ಅವಧಿಯನ್ನು ನೀಡಲಾಗಿದ್ದು, ಈ ಅವಧಿಯೊಳಗೆ ಸಮಗ್ರ ವರದಿ ಸಲ್ಲಿಸಬೇಕಾಗಿದೆ. ವರದಿಯಲ್ಲಿ ಅಕ್ರಮಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳು, ನಿಯಮಾವಳಿ ಬದಲಾವಣೆಗಳು ಮತ್ತು ವ್ಯವಸ್ಥಾತ್ಮಕ ಸುಧಾರಣೆಗಳ ಬಗ್ಗೆ ಶಿಫಾರಸುಗಳನ್ನು ನೀಡುವ ನಿರೀಕ್ಷೆ ಇದೆ.

5ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

ಪುಸ್ತಕ ಸಂಸ್ಕೃತಿಗೆ ಉತ್ತೇಜನ ನೀಡದಿದ್ದರೆ ಅಪರಾಧಗಳ ಸಂಖ್ಯೆ ಹೆಚ್ಚಳ

ಮೈಸೂರು ಕವಿ-ಕಾವ್ಯ ಸಮ್ಮೇಳನದಲ್ಲಿ ನಾಗರಾಜ ವಿ.ಬೈರಿ ಕಳವಳ



ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ನಡೆದ ಮೈಸೂರು ಕವಿ– ಕಾವ್ಯ ಸಮ್ಮೇಳನಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಚಾಲನೆ ನೀಡಿದರು.

ಮೈಸೂರು, ಮೇ3(ಎಂಟಿವೈ)– ಪುಸ್ತಕ ಸಂಸ್ಕೃತಿಗೆ ಉತ್ತೇಜನ ನೀಡದಿದ್ದರೆ ಭವಿಷ್ಯದಲ್ಲಿ ಅಪರಾಧ ಕೃತ್ಯಗಳ ಸಂಖ್ಯೆ ಹೆಚ್ಚಾಗಿ ಪೊಲೀಸ್ ಇಲಾಖೆಗೆ ಹೆಚ್ಚು ಹಣ ವ್ಯಯಿಸಬೇಕಾಗುವ ಪರಿಸ್ಥಿತಿ ಉದ್ಭವಿಸಬಹುದು ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಸೋಸಿಯೇಷನ್ ಆಫ್ ಅಲೆಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಸಹಯೋಗದಲ್ಲಿ ಆಯೋಜಿಸಿದ್ದ ಮೈಸೂರು ಕವಿ– ಕಾವ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮೂಲಕ ಪುಸ್ತಕಗಳ ಸಗಟು ಖರೀದಿಯನ್ನು ರಾಜ್ಯ ಸರ್ಕಾರ ಸ್ಥಗಿತಗೊಳಿಸುವುದು ಒಳ್ಳೆಯ ಬೆಳವಣಿಗೆಯಲ್ಲ. ಈ ಕೂಡಲೇ ಇದನ್ನು ಪುನಾರಂಭಿಸಬೇಕು ಎಂದರು.

ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಪೂರೈಸಿದರೆ ಯುವಜನತೆ ಓದಿನ ಕಡೆ ಗಮನಹರಿಸುತ್ತಾರೆ. ಇಲ್ಲದಿದ್ದಲ್ಲಿ ಈಗಾಗಲೇ ಸಾಮಾಜಿಕ ಜಾಲತಾಣಗಳ ಹಾವಳಿಯಿಂದಾಗಿ ದಾರಿ ತಪ್ಪುತ್ತಿರುವವರು ಮತ್ತಷ್ಟು ಅವನತಿಯ ಕಡೆಗೆ ಸಾಗುತ್ತಾರೆ. ಇದರಿಂದ ಅಪರಾಧ ಕೃತ್ಯಗಳು ಹೆಚ್ಚಾಗಿ, ನಿಯಂತ್ರಣಕ್ಕೆ ಹೆಚ್ಚು ಮಂದಿ ಪೊಲೀಸರನ್ನು ನೇಮಿಸಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಬೆಂಗಳೂರು ರಾಮೋಹಳ್ಳಿ ಸಿದ್ಧಾರೂಢ ಮಿಷನ್ ಆಶ್ರಮದ ಶ್ರೀ ಆರೂಢ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿ, ಸಾಹಿತ್ಯ, ಸಂಗೀತದಿಂದ ಕಲೆ ಬೆಳಗುತ್ತದೆ. ಸಾಹಿತ್ಯ ಎಂದರೇ ಜೀವನಾನುಭವದ ಸಾರ ಹಾಗೂ ಅನುಭವದ ಪರಿಪಕ್ವತೆ. ಟಿವಿ ಸುದ್ದಿಗಳಿಗಿಂತ ವೃತ್ತಪತ್ರಿಕೆಗಳ ಸುದ್ದಿಗಳು ನಿಖರವಾಗಿರುತ್ತವೆ. ಆದ್ದರಿಂದ ಮೊಬೈಲ್, ಟಿವಿ, ಸಾಮಾಜಿಕ ಜಾಲತಾಣಗಳಿಗಿಂದ ಪುಸ್ತಕ, ಪತ್ರಿಕೆಗಳನ್ನು ಓದಿ ಎಂದು ಸಲಹೆ ನೀಡಿದರು.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ಎಚ್.ಡಿ. ಕೋಟೆ ತಾ.ಬಿಇಒ ಸಿ.ಎನ್. ರಾಜು ಸನ್ಮಾನ ಸ್ವೀಕರಿಸಿ ಮಾತನಾಡಿ, ನಮ್ಮ ಪ್ರಯತ್ನ, ಶಿಕ್ಷಕರ ಪರಿಶ್ರಮ ಹಾಗೂ ವಿದ್ಯಾರ್ಥಿಗಳಿಗೆ ನಡೆಸಿದ ಪರೀಕ್ಷೆಗಳಿಂದ ಉತ್ತಮ ಫಲಿತಾಂಶ ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಮ್ಮೇಳನಾಧ್ಯಕ್ಷರಾಗಿದ್ದ ಬೆಂಗಳೂರಿನ ರಮಣಶ್ರೀ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಕನ್ನಡ ಪ್ರಾಧ್ಯಾಪಕ ಡಾ.ಬಿ. ಪ್ರಹ್ಲಾದರೆಡ್ಡಿ ಮಾತನಾಡಿ, ಕವಿಯ ಅನುಭವವನ್ನು ನಿರ್ದಿಷ್ಟ ಚೌಕಟ್ಟಿನಲ್ಲಿ ಹೇಳುವುದೇ ಪದ್ಯ.. ಪದ್ಯ ಎಲ್ಲವನ್ನು ಬಿಚ್ಚಿಡುವಂಥದ್ದಲ್ಲ. ಸೂಕ್ಷ್ಮವಾಗಿ ಹೇಳುವಂಥದ್ದು. ಹೀಗಾಗಿ ಕವಿ ಹೇಳಬೇಕಾದ್ದನ್ನು ಸೂಕ್ಷ್ಮವಾಗಿ ಹೇಳುತ್ತಾನೆ. ಕಾವ್ಯ ಎಂಬುದು ಭಾವನೆಗಳ ಪರಾಕಾಷ್ಠೆ. ಇದಕ್ಕೆ ಅವರು ಹೆಚ್.ದುಂಡಿರಾಜ್ ಅವರ 'ಮಾರ್ಕೆಟ್‌ನಲ್ಲಿ ಸಿಕ್ಕಳು ನನ್ನ ನೋಡಿ ನಕ್ಕಳು, ನಮಗಿಬ್ಬರು ಮಕ್ಕಳು' ಎಂಬುದನ್ನು ನಿದರ್ಶನವಾಗಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಸಾಪ ಉಪಾಧ್ಯಕ್ಷ ಟಿ. ತ್ಯಾಗರಾಜ್ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಮ್ಮೇಳನ ಉದ್ಘಾಟಿಸಿದರು. ವಿಜಯಪುರ ಜಿಲ್ಲಾಧ್ಯಕ್ಷ ಪಂಡಿತ ಭೀ. ಅವಜಿ, ಎಚ್.ಡಿ ಕೋಟೆ ತಾ. ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಿ.ಎಸ್. ಮಂಜುನಾಥ್ ಮುಖ್ಯ ಅತಿಥಿಗಳಾಗಿದ್ದರು. ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್ ರಾಜ್ಯಾಧ್ಯಕ್ಷ ಜಿ. ಶಿವಣ್ಣ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ನಾಗರತ್ನ ಗುಂಡಪ್ಪ ಪ್ರಾರ್ಥಿಸಿದರು. ಬಿ.ಎ. ಪಾರ್ವತಿ ಕಾರ್ಯಕ್ರಮ ನಿರೂಪಿಸಿದರು.

ನಂತರ ಪುಷ್ಪಾ ನಾಗತಿಹಳ್ಳಿ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಕವಿ– ಕಾವ್ಯ ಬೆಳವಣಿಗೆ ಹಾಗೂ ಚಟುವಟಿಕೆಗಳ ವರ್ತಮಾನ ಯುವಪೀಳಿಗೆಯ ಪಾಲು ಕುರಿತು ವಿಷಯ ಮಂಡಿಸಲಾಯಿತು. ವಿವಿಧ ಕ್ಷೇತ್ರಗಳ ಸಾಧಕರಿಗೆ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಶಶಿಕುಮಾರ್ ಮತ್ತು ತಂಡದವರು– ಗೊರವರ ನೃತ್ಯ, ವಿಜಯಪುರ ಜಿಲ್ಲೆಯ ದೇವೇಂದ್ರ ಗೊಂದಳ ಮತ್ತು ತಂಡದಿಂದ ಗೊಂದಳ ಜಾನಪದ, ಮೈಸೂರಿನ ಕೆ. ಸುಶೀಲಾರಾವ್ ನೇತೃತ್ವದ ವಾಗೀಶ್ವರೀ ಭಜನಾ ಮಂಡಳಿಯಿಂದ ಜಾನಪದ ಗೀತೆ, ಚಿತ್ರದುರ್ಗ ಕಲಾತಂಡದಿಂದ ಸೋಬಾನೆ ಹಾಡು ಪ್ರಸ್ತುತಪಡಿಸಿದರು.

ಮಸಾಲೆ ದೋಸೆಗೆ ವಿಶ್ವ ಮನ್ನಣೆ

ಜಗತ್ತಿನ 50 ಆಹಾರಗಳ ಪಟ್ಟಿಯಲ್ಲಿ ಮಸಾಲೆ ದೋಸೆಗೆ 6ನೇ ಸ್ಥಾನ



ಮೈಸೂರು,ಮೇ 3(ಬಿಎಲ್‌ಯು)–ದಕ್ಷಿಣ ಭಾರತದ ಹೆಮ್ಮೆಯ ಆಹಾರ ಅದರಲ್ಲೂ ಮೈಸೂರು ಮಸಾಲೆ ದೋಸೆ ಎಂದೇ ಪ್ರಖ್ಯಾತವಾಗಿರುವ ಮಸಾಲೆ ದೋಸೆಗೆ ವಿಶ್ವ ಮನ್ನಣೆ ದೊರೆತಿದೆ. ಪ್ರಖ್ಯಾತ ಅಂತಾರಾಷ್ಟ್ರೀಯ ಆಹಾರ ಮಾರ್ಗದರ್ಶಿ 'ಟೇಸ್ಟ್ ಅಟ್ಲಾಸ್' ಪ್ರಕಟಿಸಿರುವ ವಿಶ್ವದ 50 ಪ್ಯಾನ್ ಕೇಕ್‌ಗಳ ಪಟ್ಟಿಯಲ್ಲಿ ಮಸಾಲೆ ದೋಸೆಗೆ 6ನೇ ಸ್ಥಾನ ಲಭಿಸಿದೆ.

ವಿಶ್ವದ ಮೂಲೆ ಮೂಲೆಗಳಿಂದ ಆಹಾರ ವಿಮರ್ಶಕರು ಹಾಗೂ ಆಹಾರ ಪ್ರಿಯರು ರೇಟಿಂಗ್ ನೀಡಿದ್ದರು. ಈ ರೇಟಿಂಗ್ ಆಧಾರದ ಮೇಲೆ ಟೇಸ್ಟ್ ಅಟ್ಲಾಸ್ ಮಸಾಲೆ ದೋಸೆಗೆ 4.3 ಸ್ಟಾರ್ ರೇಟಿಂಗ್ ದೊರೆತಿದೆ. ಮಸಾಲೆ ದೋಸೆಯ ಗರಿಗರಿಯಾದ ವಿನ್ಯಾಸ, ಮಸಾಲೆ ಭರಿತ ಆಲೂಗೆಡ್ಡೆ ಪಲ್ಯ, ಇದರ ರುಚಿಯನ್ನು ಇಮ್ಮಡಿಗೊಳಿಸುವ ಕಾಯಿ ಚಟ್ನಿ, ಸಾಂಬಾರ್ ಜೊತೆಗಿನ ಶೈಲಿಯನ್ನು ಟೇಸ್ಟ್ ಅಟ್ಲಾಸ್ ವಿಶೇಷವಾಗಿ ಪ್ರಶಂಸಿಸಿದೆ.

ಈ ಮೂಲಕ ಮೈಸೂರು ಮಸಾಲ ದೋಸೆ ಜಾಗತಿಕ ಆಹಾರ ಪ್ರಿಯರ ಮೆಚ್ಚಿನ ಆಯ್ಕೆಯಾಗಿದ್ದು, ಮಸಾಲೆ ದೋಸೆಯ ವಿಶ್ವದ ಪ್ರಖ್ಯಾತ ಆಹಾರ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಪಡೆದಿದೆ.

ಅಕ್ಕಿ ಮತ್ತು ಉದ್ದಿನ ಬೇಳೆ ಹಿಟ್ಟನ್ನು ಹುದುಗಿಸಿ ತಯಾರಿಸುವ ಮಸಾಲೆ ದೋಸೆ ರುಚಿ ಮಾತ್ರವಲ್ಲದೆ ಉತ್ತಮ ಆರೋಗ್ಯಕ್ಕೂ ಪ್ರಾಮುಖ್ಯತೆ ಪಡೆದಿದೆ. ಮಸಾಲೆ ದೋಸೆಗೆ ವಿಶ್ವ ಮನ್ನಣೆ ದೊರೆತಿರುವ ಹಿನ್ನೆಲೆಯಲ್ಲಿ ಭಾರತ ಅದರಲ್ಲೂ ದಕ್ಷಿಣ ಭಾರತದ ಪಾಕ ಶಾಲೆ ಶ್ರೀಮಂತಿಕೆ ವಿಶ್ವ ಪ್ರಸಿದ್ಧಿ ಪಡೆದಿದೆ.

ಕರ್ನಾಟಕದಷ್ಟೆ ವಿಶೇಷವಾಗಿ ಮುಂಬೈನಲ್ಲಿ ಮೈಸೂರು ಮಸಾಲೆ ದೋಸೆ ಬಹಳ ಪ್ರಸಿದ್ಧಿ ಪಡೆದಿದೆ. ವಿಶ್ವದ ಅಗ್ರಮಾನ್ಯ ಶ್ರೀಮಂತರಲ್ಲಿ ಒಬ್ಬರಾದ ಅಂಬಾನಿ ಕುಟುಂಬಸ್ಥರು ಪ್ರತಿ ಭಾನುವಾರ ಬೆಳಿಗ್ಗೆ ಮೈಸೂರು ಮಸಾಲೆ ದೋಸೆ ಸವಿಯುತ್ತಾರೆ.

ಮುಂಬೈನ ಮಾಟುಂಗಾ ಪೂರ್ವದಲ್ಲಿರುವ ಕೆಫೆ ಮೈಸೂರು ರೆಸ್ಟೋರೆಂಟ್‌ನಿಂದ ಪ್ರತಿ ಭಾನುವಾರ ಬೆಳಿಗ್ಗೆ ಉಪಹಾರಕ್ಕೆ ಅಂಬಾನಿ ಕುಟುಂಬಸ್ಥರು ಮೈಸೂರು ಮಸಾಲೆ ದೋಸೆ ತರಿಸುತ್ತಾರೆ.

ಪ್ರೋತ್ಸಾಹ ಧನ ಪಾವತಿಸದ 7 ಸಕ್ಕರೆ ಕಾರ್ಖಾನೆಗಳ ವಿರುದ್ಧ ಕ್ರಮಕ್ಕೆ ಎಂಎಲ್‌ಸಿ ದಿನೇಶ್ ಗೂಳಿಗೌಡ ಮನವಿ



ದಿನೇಶ್ ಗೂಳಿಗೌಡ

ಮೈಸೂರು, ಮೇ.3(ಎಂಕೆ)– ರಾಜ್ಯದ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸರ್ಕಾರ ಘೋಷಿಸಿರುವ ಪ್ರೋತ್ಸಾಹಧನ ಪಾವತಿಸದ ದಕ್ಷಿಣ ಕರ್ನಾಟಕದ 7 ಸಕ್ಕರೆ ಕಾರ್ಖಾನೆಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸಿಎಂ, ಡಿಸಿಎಂ, ಸಕ್ಕರೆ ಸಚಿವರು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಪ್ರತಿ ಟನ್ ಕಬ್ಬಿಗೆ 100 ರೂ.ಗಳ ಹೆಚ್ಚುವರಿ ಪ್ರೋತ್ಸಾಹ ಧನ ನೀಡಬೇಕು ಎನ್ನುವ ರಾಜ್ಯ ಸರ್ಕಾರದ ಆದೇಶಕ್ಕೆ ಅನುಗುಣವಾಗಿ ರಾಜ್ಯದ ಒಟ್ಟು 81 ಕಾರ್ಖಾನೆಗಳ ಪೈಕಿ ಉತ್ತರ ಕರ್ನಾಟಕದ 73 ಕಾರ್ಖಾನೆಗಳು ಬದ್ಧವಾಗಿ ರೈತರಿಗೆ ಸಕಾಲದಲ್ಲಿ ಪಾವತಿ ಮಾಡುತ್ತಿದ್ದರೆ, ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ 7 ಪ್ರಮುಖ ಖಾಸಗಿ ಕಾರ್ಖಾನೆಗಳು ಸರ್ಕಾರದ ಆದೇಶವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿವೆ. ಅಲ್ಲದೆ, ಜಿಲ್ಲಾಡಳಿತಗಳ ಸಭೆ ಮತ್ತು ಸೂಚನೆಗಳನ್ನು ಕಿಂಚಿತ್ತೂ ಲೆಕ್ಕಿಸದೆ, ರೈತರಿಗೆ ಕೊಡಬೇಕಾದ ಹಣವನ್ನು ತಡೆಯುತ್ತಿವೆ. ಆದ್ದರಿಂದ ಈ ಕೂಡಲೇ ತಾವು ಮಧ್ಯಪ್ರವೇಶಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ರಾಜ್ಯದ ಕಬ್ಬು ಬೆಳೆಗಾರರ ಹಿತ ಕಾಯುವ ದೃಷ್ಟಿಯಿಂದ ಚಾಮರಾಜನಗರ ಜಿಲ್ಲೆಯ ಬನ್ನಾರಿ ಅಮ್ಮನ್ ಶುಗರ್ಸ್, ಹಾಸನ ಜಿಲ್ಲೆಯ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್, ಮಂಡ್ಯ ಜಿಲ್ಲೆಯ ಕೋರಮಂಡಲ ಶುಗರ್ಸ್, ಚಾಮುಂಡೇಶ್ವರಿ ಶುಗರ್ಸ್ ಲಿ., ಎಂ.ಆರ್.ಎನ್ ಕೇನ್ ಪವರ್ ಅಂಡ್ ಬೈಯೋ ರಿಫೈನರಿಸ್ ಪ್ರೈ.ಲಿ., ಎನ್.ಎಸ್.ಎಲ್ ಶುಗರ್ಸ್ ಲಿ. ಹಾಗೂ ಮೈಸೂರು ಜಿಲ್ಲೆಯ ಬನ್ನಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್ ಕಾರ್ಖಾನೆಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

ಹಾಗೆಯೇ ಸರ್ಕಾರದ ಆದೇಶ ಪಾಲಿಸದ ಈ 7 ಕಾರ್ಖಾನೆಗಳ 'ಕ್ರಷಿಂಗ್ ಲೈಸೆನ್ಸ್' ಅನ್ನು ಮುಂಬರುವ ಹಂಗಾಮಿಗೆ ನವೀಕರಿಸಬಾರದು. ಸರ್ಕಾರವು ಹೈಕೋರ್ಟ್‌ನಲ್ಲಿರುವ ತಡೆಯಾಜ್ಞೆ ತೆರವುಗೊಳಿಸಲು ಅಡ್ವೊಕೇಟ್ ಜನರಲ್ ಅವರ ಮೂಲಕ ಬಲವಾದ ವಾದ ಮಂಡಿಸಬೇಕು. ಮುಂಗಾರು ಹಂಗಾಮು ಆರಂಭವಾಗುವ ಮುನ್ನವೇ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಕಾರ್ಖಾನೆಗಳ ಮಾಲೀಕರ ತುರ್ತು ಸಭೆ ಕರೆದು, ರೈತರ ಹಣ ಬಿಡುಗಡೆ ಮಾಡದಿದ್ದರೆ ಕಾರ್ಖಾನೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಬಗ್ಗೆ ಎಚ್ಚರಿಕೆ ನೀಡಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಕಮರ್ಷಿಯಲ್ ಸಿಲಿಂಡರ್ ದರ ಏರಿಕೆಗೆ ಎಸ್‌ಯುಸಿಐ (ಕಮ್ಯುನಿಸ್ಟ್) ಖಂಡನೆ

ಮೈಸೂರು, ಮೇ 3(ಎಂಕೆ)– ಕೇಂದ್ರ ಸರ್ಕಾರ ಎಲ್‌ಪಿಜಿ ಕಮರ್ಷಿಯಲ್ ಸಿಲಿಂಡರ್ ಬೆಲೆ ಏರಿಕೆ ಮಾಡಿರುವುದನ್ನು ಎಸ್‌ಯುಸಿಐ (ಕಮ್ಯುನಿಸ್ಟ್) ಖಂಡಿಸಿದೆ.

ನಾಲ್ಕು ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣೆ ಮುಗಿದ ಕೂಡಲೇ ಏಕಾಏಕಿ ಎಲ್‌ಪಿಜಿ ಕಮರ್ಷಿಯಲ್ ಸಿಲಿಂಡರ್ ಬೆಲೆ ಏರಿಕೆ ಮಾಡಿರುವುದು ಅತ್ಯಂತ ಖಂಡನೀಯ. ಇದರಿಂದ ಮಧ್ಯಮ ವರ್ಗ ಹೋಟೆಲ್ ಉದ್ಯಮದಾರರಿಗೆ ಹಾಗೂ ಗ್ರಾಹಕರಿಗೆ ತೀವ್ರ ಹೊಡೆತ ಬಿದ್ದಿದೆ.

2078.50 ರೂ.ಇದ್ದ ವಾಣಿಜ್ಯ ಸಿಲಿಂಡರ್, ಈಗ 3071.50 ರೂ. ಆಗಿದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರು, ದಿಢೀರ್ ಬೆಲೆ ಏರಿಕೆಯಿಂದ ಮತ್ತಷ್ಟು ಕಂಗಾಲಾಗಿದ್ದಾರೆ. ಹಾಗೆಯೇ ಮುಂದಿನ ದಿನಗಳಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಬೆಲೆಯಲ್ಲೂ ಏರಿಕೆಯಾಗುವ ಎಲ್ಲಾ ಸಾಧ್ಯತೆಗಳು ಗೋಚರವಾಗುತ್ತಿವೆ. ಅಮೆರಿಕ ಸಾಮ್ರಾಜ್ಯಶಾಹಿ ಆಜ್ಞೆಗೆ ಶರಣಾಗಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ, ತಕ್ಷಣವೇ ಈ ಬೆಲೆ ಏರಿಕೆ ಹಿಂಪಡೆಯಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದೆ.

ಸಾಮೂಹಿಕ ವಿವಾಹ ಕಾರ್ಯಕ್ರಮದ ವೇದಿಕೆ ಬಳಿ ಶಾರ್ಟ್ ಸರ್ಕ್ಯೂಟ್: ಡಿಕೆಶಿ ಪಾರು



ರಾಯಚೂರು: ಸಿಂಧನೂರು ಪಟ್ಟಣದಲ್ಲಿ ನಡೆದ 151 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮದ ವೇಳೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅವಘಡ ಸಂಭವಿಸಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವಲ್ಪದರಲ್ಲಿ ಅಪಾಯದಿಂದ ಪಾರಾಗಿದ್ದಾರೆ. ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕಾಗಿ ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಬೃಹತ್ ವೇದಿಕೆ ನಿರ್ಮಿಸಲಾಗಿತ್ತು. ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಈಶ್ವರ ಖಂಡ್ರೆ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ನವ ಜೋಡಿಗಳಿಗೆ ಶುಭಕೋರಿದ ಬಳಿಕ ವೇದಿಕೆ ಬಳಿ ಶಿವಕುಮಾರ್ ತೆರಳುತ್ತಿದ್ದ ವೇಳೆ ವೇದಿಕೆ ಮೆಟ್ಟಿಲುಗಳ ಬಳಿ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿತು. ತಕ್ಷಣ ಎಚ್ಚೆತ್ತುಕೊಂಡ ಪೊಲೀಸ್ ಸಿಬ್ಬಂದಿ, ಡಿ.ಕೆ.ಶಿವಕುಮಾರ್, ಈಶ್ವರ ಖಂಡ್ರೆ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು. ತಾಂತ್ರಿಕ ದೋಷದಿಂದಾಗಿ ಶಾರ್ಟ್ ಸರ್ಕ್ಯೂಟ್ ಆಗಿ ಬೆಂಕಿ ಅವಘಡ ಸಂಭವಿಸಿದ್ದು, ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

ಬೆಂಗಳೂರು ಮೂಲದ 'ದೃಷ್ಟಿ' ಯಶಸ್ವಿ ಉಡ್ಡಯನ



ನವದೆಹಲಿ: ಬೆಂಗಳೂರು ಮೂಲದ ಬಾಹ್ಯಾಕಾಶ ಸ್ಟಾರ್ಟ್‌ಅಪ್ ಗ್ಯಾಲಕ್ಸ್‌ಐ ಅಭಿವೃದ್ಧಿ ಪಡಿಸಿರುವ 'ಮಿಷನ್ ದೃಷ್ಟಿ' ಉಪಗ್ರಹವನ್ನು ಭಾನುವಾರ ಕ್ಯಾಲಿಫೋರ್ನಿಯಾದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್ 9 ರಾಕೆಟ್ ಮೂಲಕ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.

ಸಂಸ್ಥೆಯ ಪ್ರಕಾರ, ದೃಷ್ಟಿ ವಿಶ್ವದ ಮೊದಲ ಒಪ್ಟೋಸಾರ್ ಉಪಗ್ರಹ' ಇದಾಗಿದ್ದು, ಎಲೆಕ್ಟ್ರೋ-ಆಪ್ಟಿಕಲ್(ಇಓ) ಮತ್ತು ಸಿಂಥೆಟಿಕ್ ಅಪರ್ಚರ್ ರೇಡಾರ್ ಸೆನ್ಸಾರ್‌ಗಳನ್ನು ಒಂದೇ ಕಾರ್ಯಾಚರಣಾ ವೇದಿಕೆಗೆ ಸಂಯೋಜಿಸುತ್ತದೆ.

ಇಓ ಸೆನ್ಸಾರ್‌ಗಳು ಸೂರ್ಯನ ಬೆಳಕು ಮತ್ತು ಶುಭ್ರವಾದ ಆಕಾಶದಲ್ಲಿ ಹೈರೆಸಲ್ಯೂಷನ್ ಚಿತ್ರಗಳನ್ನು ಸೆರೆಹಿಡಿಯಲಿದೆ. ಮತ್ತೊಂದೆಡೆ ಎಸ್‌ಎಆರ್ ಸೆನ್ಸಾರ್‌ಗಳು ರೇಡಾರ್ ಪಲ್ಸ್‌ಗಳನ್ನು ಬಳಸಿಕೊಂಡು ಎಲ್ಲ ರೀತಿಯ ಹವಾಮಾನದಲ್ಲೂ ನಿರಂತರವಾಗಿ ಚಿತ್ರಗಳನ್ನು ಸೆರೆಹಿಡಿಯಲಾಗುವುದು. ಈ ಕುರಿತು ಪ್ರತಿಕ್ರಿಯಿಸಿದ ಗ್ಯಾಲಕ್ಸ್‌ಐ ಸಂಸ್ಥಾಪಕ ಮತ್ತು ಸಿಇಓ ಸುಯಶ್ ಸಿಂಗ್, 'ಮಿಷನ್ ದೃಷ್ಟಿ' ಉಪಗ್ರಹ ಈಗ ಯಶಸ್ವಿಯಾಗಿ ಕಕ್ಷೆಗೆ ಸೇರಿದೆ. ಈಗ ಕಾರ್ಯಾಚರಣೆಯ ಪ್ರಕ್ರಿಯೆ ಪೂರ್ಣಗೊಳಿಸುವುದರತ್ತ ಗಮನ ಹರಿಸಿದ್ದೇವೆ. ಅಲ್ಲದೆ ಒಪ್ಟೊಸಾರ್ ಪೇಲೋಡ್ ಮೂಲಕ ದೊರೆಯುವ ವಿಭಿನ್ನ ದತ್ತಾಂಶಗಳ ಬಗ್ಗೆ ಜಾಗತಿಕವಾಗಿ ಹೆಚ್ಚಿನ ಆಸಕ್ತಿ ವ್ಯಕ್ತವಾಗುತ್ತಿರುವುದನ್ನು ಕಾಣುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಇತ್ತೀಚಿನ ಇಸ್ರೋದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾದ ಭಾರತದ 29 ಸಕ್ರಿಯ ಭೂ ವೀಕ್ಷಣಾ ಉಪಗ್ರಹಗಳ ಸಾಮರ್ಥ್ಯಕ್ಕೆ ಈ ಯೋಜನೆ ಪೂರಕವಾಗುವ ನಿರೀಕ್ಷೆಯಿದೆ. 2030ರ ವೇಳೆಗೆ ಮಿಷನ್ ದೃಷ್ಟಿ ಸಾಮರ್ಥ್ಯವನ್ನು 10 ಉಪಗ್ರಹಗಳಿಗೆ ಹೆಚ್ಚಿಸುವ ಗುರಿಯನ್ನು ಗ್ಯಾಲಕ್ಸ್‌ಐ ಹೊಂದಿದ್ದು, ಈ ಮೂಲಕ ಭಾರತಕ್ಕೆ ದೃಢವಾದ ಭೂ ವೀಕ್ಷಣಾ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ

ಸ್ವರಾನುಭೂತಿ–2026 ಸಂಗೀತ ಸಂಜೆ

ವಿಜಯ ಪ್ರಕಾಶ್, ಅನುರಾಧ ಭಟ್ ಗಾಯನ ಮೋಡಿ



ಮೈಸೂರು, ಮೇ 3(ವಿವಿಹೆಚ್)–ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ (ಎಸ್‌ವಿವೈಎಂ) ವತಿಯಿಂದ ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಭಾಂಗಣದಲ್ಲಿ ಆಯೋಜಿಸಿದ್ದ 'ಸ್ವರಾನುಭೂತಿ–2026' ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕ ವಿಜಯ್ ಪ್ರಕಾಶ್ ಹಾಗೂ ಗಾಯಕಿ ಅನುರಾಧ ಭಟ್ ತಮ್ಮ ಗಾಯನದ ಮೋಡಿ ಮಾಡಿದರು.

ಎಸ್‌ವಿವೈಎಂ ಸಂಸ್ಥೆಯ ಉಪಶಮನ ಆರೈಕೆಯ ಕಾರ್ಯಕ್ರಮಕ್ಕಾಗಿ ನಿಧಿ ಸಂಗ್ರಹಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮವು ದೀರ್ಘಕಾಲೀನ ರೋಗಗಳು ಹಾಗೂ ಮಾರಣಾಂತಿಕ ರೋಗಗಳಿಂದ ಬಳಲುತ್ತಿರುವ ರೋಗಿಗಳ ಉಪಶಮನದ ಆರೈಕೆ ಬಗ್ಗೆ ಅರಿವು ಮೂಡಿಸಲು ಏರ್ಪಡಿಸಲಾಗಿತ್ತು.

ಸವಿತಾ ಸುಳುಗೋಡು, ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್‌ನ ಸಂಸ್ಥಾಪಕರಾದ ಡಾ.ಆರ್. ಬಾಲಸುಬ್ರಮಣಿಯಂ ಡಾ.ವಿಭಾ ಇದ್ದರು.

ಮೋಡಿ ಮಾಡಿದ ವಿಜಯ್ ಪ್ರಕಾಶ್–ಅನುರಾಧ ಭಟ್ ಗಾಯನ: ಗಾಯಕ ವಿಜಯ್ ಪ್ರಕಾಶ್–ಗಾಯಕಿ ಅನುರಾಧಭಟ್ ಅವರ ಸುಮಧುರ ಗಾಯನಕ್ಕೆ ಸಂಗೀತಾಸಕ್ತರು ಮರುಳಾದರು. ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಪ್ರೇಕ್ಷಕರು ಹಾಡಿನ ಪ್ರತಿಯೊಂದು ಸ್ವರಕ್ಕೂ ಚಪ್ಪಾಳೆ ತಟ್ಟಿ ಕಲಾವಿದರನ್ನು ಹುರಿದುಂಬಿಸಿದರು.

ವಿಜಯ್ ಪ್ರಕಾಶ್ ತಮ್ಮ ಕಂಚಿನ ಕಂಠದಲ್ಲಿ ಜನಪ್ರಿಯ ಕನ್ನಡ ಚಿತ್ರಗೀತೆಗಳನ್ನು ಹಾಡಿ ರಂಜಿಸಿದರು. ಅವರ ಗಾಯನಕ್ಕೆ ಯುವಕರು ಸೇರಿದಂತೆ ಹಿರಿಯರು ಅತೀವ ಮೆಚ್ಚುಗೆ ವ್ಯಕ್ತ ಪಡಿಸಿದರು. ವಿಶೇಷವಾಗಿ ಭಕ್ತಿಗೀತೆ ಹಾಗೂ ಮೆಲೋಡಿ ಹಾಡುಗಳು ಪ್ರೇಕ್ಷಕರ ಮನಗೆದ್ದವು. 'ಜೈ ಹೋ', 'ಬೊಂಬೆ ಹೇಳುತೈತೆ..', 'ಸಿಂಗಾರ ಸಿರಿಯೇ....', 'ಬೆಳಗೆದ್ದು ಯಾರ ಮುಖವ ನಾನು ನೋಡಿದೆ...' ಸೇರಿದಂತೆ ಹಲವು ಹಾಡುಗಳಿಗೆ ಅಭಿಮಾನಿಗಳು ಸ್ವರ ಸೇರಿಸಿ ಸಂಭ್ರಮಿಸಿದರು.

ಇನ್ನೊಂದೆಡೆ ಗಾಯಕಿ ಅನುರಾಧ ಭಟ್ ತಮ್ಮ ಮಧುರ ಕಂಠದ ಮೂಲಕ ರಂಜಿಸಿದರು. ಕನ್ನಡದ ಹಿಟ್ ಹಾಡುಗಳನ್ನು ಹಾಡಿದ ಅವರು, ಪ್ರೇಕ್ಷಕರಿಂದ ಭರ್ಜರಿ ಚಪ್ಪಾಳೆ ಗಳಿಸಿದರು. ರೊಮ್ಯಾಂಟಿಕ್ ಹಾಗೂ ಫೋಕ್ ಶೈಲಿಯ ಹಾಡುಗಳಿಗೆ ಯುವ ಸಮೂಹ ಕುಣಿದು ಕುಪ್ಪಳಿಸಿದ ದೃಶ್ಯ ಕಂಡುಬಂತು.

ವಿಜಯ್ ಪ್ರಕಾಶ್ ಹಾಡಿದ ಬೊಂಬೆ ಹೇಳುತೈತೆ ಗೀತೆಗೆ ಮೊಬೈಲ್ ಫ್ಲ್ಯಾಶ್‌ಲೈಟ್‌ಗಳನ್ನು ಬೆಳಗಿಸಿ ಅಭಿಮಾನಿಗಳು ಗಾಯನವನ್ನು ಆಸ್ವಾದಿಸಿದ ಕ್ಷಣಗಳು ಮನಮೋಹಕವಾಗಿದ್ದವು. ಸಂಗೀತ ಕಾರ್ಯಕ್ರಮದ ಅವಧಿಯಿಡೀ ಪ್ರೇಕ್ಷಕರು ಆಸನ ಬಿಟ್ಟು ತೆರಳದೆ ಗಾಯನ ಕಣ್ತುಂಬಿಕೊಂಡರು.

15ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಸುಶೀಲಮ್ಮ
W/o ಬಿಳಿಗಿರಿ ರಂಗಯ್ಯ
ಕೆಸ್ತೂರು, ಯಳಂದೂರು ತಾ. ಚಾ.ರಾ.ನಗರ ಜಿಲ್ಲೆ

ಪೂಜ್ಯ ತಾಯಿಯವರ ಶುಭ ಆಶೀರ್ವಾದ ನಮಗೆ ಶ್ರೀ ರಕ್ಷೆ ಮತ್ತು ಸ್ಫೂರ್ತಿ, ಹೃದಯ ಪೂರ್ವಕ ನಮನಗಳು
ಮಕ್ಕಳಾದ 1 ಶ್ರೀ ಕೆ.ಬಿ. ಸುಬ್ಬರಾವ್, ಶಕುಂತಳಮ್ಮ ಕುಟುಂಬ, ಉಪಾಧ್ಯಾಯರ ಬಡಾವಣೆ, ಮೈಸೂರು
2. ಶ್ರೀ ಕೆ.ಬಿ. ಜನಾರ್ಧನ, ಶ್ಯಾಮಲ ಕುಟುಂಬ ಇ ಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು

11ನೇ ವರ್ಷದ ಸವಿನೆನಪು



ಎಂ. ಅಂಬಿಕಾ
ಚಿಲಕವಾಡಿ, ಕೊಳ್ಳೇಗಾಲ ತಾ.

ನೀನು ನಮ್ಮನ್ನು ಅಗಲಿ ಇಂದಿಗೆ 11 ವರ್ಷ ವಾಯಿತು. ಸದಾ ನಿಮ್ಮ ನೆನಪು ನಮ್ಮನ್ನು ಕಾಡುತ್ತಿದೆ.
ಇಂತಿ ದುಃಖತಪ್ತರು
ತಂದೆ: ಪಿ. ಮಹದೇವಪ್ಪ
ತಾಯಿ: ಆರ್. ಎಸ್. ಸರೋಜ
ತಮ್ಮ: ಎಂ. ವಿನಯ್
ಪತಿ: ಟಿ. ರತೀಶ್
ಪುತ್ರಿ: ತೋಷನಿ.ಆರ್
ಮಾವ: ನಾಗೇಂದ್ರಸ್ವಾಮಿ
ಅತ್ತೆ: ಪದ್ಮಾ

ನಿಧನ



ಹೆಚ್.ವಿ. ಮಂಜುಳ

(ನಿವೃತ್ತ MUDA ನೌಕರರಾದ ಬಿ.ಎಸ್. ರಾಮಸ್ವಾಮಿ ಇವರ ಪತ್ನಿ)

ಇವರು ದಿನಾಂಕ : 3-5-2026ರಂದು ದೈವಾದೀನರಾಗಿದ್ದು, ಇವರ ಮೃತದೇಹವನ್ನು ಮೈಸೂರಿನ ಕುವೆಂಪುನಗರದ ಸ್ವಗೃಹಕ್ಕೆ ತರಲಾಗುತ್ತಿದ್ದು, ದಿನಾಂಕ : 4-5-2026ರ ಸೋಮವಾರ ಬೆಳಿಗ್ಗೆ 7ರಿಂದ 9 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಇರುತ್ತದೆ. ಬಳಿಕ ಅಂತ್ಯಕ್ರಿಯೆಯನ್ನು ಬಿದರಕ್ಕ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗದವರು